
# ಅಪರಂಜಿ

ತಿಳಿನಗೆಯ ಕಾರಂಜಿ

ಆಗಸ್ಟ್ 2026




ಬಿಡಿ ಪ್ರತಿ: ರೂ. 10/–

NANKI
CONVENTION HALL

*Premium*

# WEDDING VENUE

Elevate your events at
Nanki Convention Hall.

A stylish and comfortable
venue perfect for Weddings,
Receptions, Conferences.




## Accessibility

- 1 km from Bus Stand
- 5 km from Airport
- 4 km from Railway Station




Airport Road
Hubli - Karnataka




+91 94482 83709

www.nankiconventionhall.com

# M P BIRLA INSTITUTE OF MANAGEMENT

*Associate Bharatiya Vidya Bhavan*

**APPROVED BY AICTE & AFFILIATED TO
DR. MANMOHAN SINGH BENGALURU CITY UNIVERSITY**

**DUAL SPECIALISATIONS OF YOUR CHOICE**
Marketing/Finance/HRM/
Business Analytics

## TWO YEAR FULL TIME MBA DEGREE AT BENGALURU

## ADMISSION OPEN

**2026-2028**

A distinguished standalone B-School in Bengaluru situated in the heart of the city.





### WHY MBA at MPBIM ?

- Achieved a 98% pass rate over the past 25 years.
- Excellent placement opportunities and paid internships.
- Faculty with strong industry credentials and academic qualifications.
- Value-added courses designed for industry needs.
- Industry connect events through Business Leadership Forum.
- Industrial visits for practical experience insights.
- Collaboration with North Dakota State University, USA and Bhavan's Management Institution.
- State-of-the-art Computer laboratory.
- Power BI, Tableau, and R programming.

**AN INNOVATIVE MBA PROGRAM OFFERING INTENSIVE BUSINESS MANAGEMENT EDUCATION.**

**SHAPE YOUR FUTURE WITH AN MBA PROGRAM AT A LEADING MANAGEMENT INSTITUTION IN BANGALORE.**





**ADMISSION PROCESS**

Eligibility: Any Graduate with 50% aggregate or above.
Admission through MAT/CAT/CMAT or any other recognised Aptitude Test.

**For Admission Contact:**
+91 99022 52842 / 99022 52981

www.mpbim.com
contact@mpbim.com

**M P Birla Institute of Management**
Associate Bharatiya Vidya Bhavan
43, Race Course Road, Bengaluru-560 001
Phone: 080-4277 2000

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457




Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 43
ಸಂಚಿಕೆ – 11
ಆಗಸ್ಟ್–2026

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/–
ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ...

| | | |
|---|---|---|
| ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಅವಿಸ್ಮರಣೀಯ ನಗೆಗಾರರು – 13 | ಶಿವಕುಮಾರ್ | 4 |
| ಪುಟ್ಟ ರಾಜಕುಮಾರ | ಬಿ.ಎಸ್. ಶೈಲಜಾ | 9 |
| ಶ್ರದ್ಧಾಂಜಲಿ | | 11 |
| ಅಂಚೆ ಇಲಾಖೆ ಪವಾಡಗಳು | ಶಾಂತಾನಾಗರಾಜ್ | 13 |
| ಹಿಂದಿ ಹಾಡಿ – ಕನ್ನಡ ಜೋಡಿ | ಅಣಕು ರಾಮನಾಥ್ | 17 |
| ಪುಕ್ಕಟ್ಟೆ ದೌಲತ್ತುಗಳು ! | ಇ.ಅರ್. ರಾಮಚಂದ್ರನ್ | 18 |
| ತುಂತುರು | ದಂನಆ | 20 |
| ಅಕ್ಷರಾಭ್ಯಾಸ–ಅಪ್ಪಿಕೋ | ನಂದಿನಿ ಕಾಪಡಿ | 21 |
| ಯುದ್ಧಕ್ಕೂ ರಿಮೋಟ್ ಕಂಟ್ರೋಲ್ | ಗೀತಾ ಕುಂದಾಪುರ | 25 |
| ಕಥೆ ಹೇಳುವ ಕಲೆ | ಜಿ. ವಿ. ಅರುಣ | 28 |
| ನನ್ನ ಚೋರ್ಮ್ಯಾನ್ಸ್ | ಎನ್.ವಿ.ರಘುರಾಮ್ | 31 |
| ಹುಯ್ಯೋ ಹುಯ್ಯೋ ಮಳೆ ರಾಯ | ಡಾ. ಶ್ಯಾಮಲಾ ರವಿಶಂಕರ್ | 36 |
| ಪಿಸಿಬಿ ಪುರಾಣ | ಜಿ.ಆರ್. ವಿದ್ಯಾರಣ್ಯ | 38 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್
ಒಳಪುಟಗಳು : ರಾಂಕಿ ಬೆಳ್ಳೂರ್

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010*



# ಅಪರಂಜಿ ಕಿಡಿ

● ಪ್ರಕಾಶ್

ಹೋರ್ಮೂಜ್ ಜಲಸಂಧಿ ಮತ್ತೆ ಬಂದ್

– ಪತ್ರಿಕೆ

ಟ್ರಂಪನ ಕೈಲಿ ಆಯುಧಕೊಟ್ಟರೆ....

* * *

ರಾಮ ಮಂದಿರ ಟ್ರಸ್ಟಿನಲ್ಲಿ ಸರ್ಕಾರದ ಹಸ್ತಕ್ಷೇಪ ಇಲ್ಲ

– ಹೇಳಿಕೆ

ಅಂತಹ ಹೇಳಿಕೆಗಳೇ ನಮ್ಮನ್ನ ಬೆಚ್ಚಿಬೀಳುವಂತೆ ಮಾಡುವುದು.!!

* * *

ಶಾಲೆಗಳು ಮಕ್ಕಳನ್ನು ಜವಾಬ್ದಾರಿಯುತ ಪ್ರಜೆಗಳಾಗುವಂತೆ ಮಾಡಬೇಕು

ಕೇಂದ್ರ ಮಂತ್ರಿಗಳು

ಗಗನ ಕುಸುಮ ಎಂದರೆ ಇದೇ ಇರಬೇಕು.!!

* * *

ಅಸಂಖ್ಯಾತ ಸಂಗೀತ ಪ್ರೇಮಿಗಳ ಕಣ್ಮಣಿಯಾಗಿದ್ದ

ಎಸ್. ಜಾನಕಿಯವರ ಆತ್ಮಕ್ಕೆ ಚಿರಶಾಂತಿ ದೊರಕಲಿ.

* * *

"ಗ್ಯಾರಂಟಿ" ಹೊಣೆಗೆ ಗ್ಯಾರಂಟಿ ಯಾರು ?

ಈ ತರಹದ ಪ್ರಶ್ನೆಗಳನ್ನೇ "ಯಕ್ಷಪ್ರಶ್ನೆ" ಎನ್ನಬಹುದೆಂಬುದಂತೂ ಗ್ಯಾರಂಟಿ. !!

* * *

"ಕ್ವಾರಿಗಳ ಪಾತಾಳ ಲೋಕ"

– ಶೀರ್ಷಿಕೆ

ಎಂತಹ ಕಲ್ಲೆದೆಯೂ ಮರುಗುವಂತಿದೆ.

* * *

ಹಾಡುಗಳಹಕ್ಕು, ಹಲವು ಸಿಕ್ಕು

–ಶೀರ್ಷಿಕೆ

ಇಂತಹ ಶೀರ್ಷಿಕೆಗಳು ಸಿಕ್ಕುವುದೇ ವಿರಳ.!!

* * *

# “ನಮ್ಮ ನಿಮ್ಮಲ್ಲಿ”

ಶಿವಕುಮಾರ್

ಕೊರವಂಜಿ ಮಾಸಪತ್ರಿಕೆಗೆ ಬರೆಯುತ್ತಿದ್ದ ಖ್ಯಾತ ನಗೆಗಾರರ ಪರಿಚಯ ಸರಣಿ ಹಿಂದಿನ ತಿಂಗಳ ಸಂಚಿಕೆಗೆ ಮುಕ್ತಾಯವಾಯಿತು. ಅಪರಂಜಿಯ ಮೊದಲ ದಿನಗಳಿಂದ ಉತ್ತಮ ನಗೆಬರಹಗಳನ್ನು ನೀಡಿ ಪತ್ರಿಕೆಯನ್ನು ಶ್ರೀಮಂತಗೊಳಿಸಿದ ಹಲವು ದಿವಂಗತರನ್ನು ಈ ಸಂಚಿಕೆಯಿಂದ ಪರಿಚಯಿಸುವ ಯತ್ನ ನಡೆಸಿರುವೆ. ಮೊಟ್ಟಮೊದಲ ನಗೆಗಾರ ನನ್ನ ಆಪ್ತಮಿತ್ರ ನಾಗೂಶ್ರೀ ಸೂರಿ. ಸೂರಿಯ ನಗೆ ಪ್ರಜ್ಞೆ ತುಂಬಾ ನವಿರಾದದ್ದು. ಸೆಲ್ಫ್ ಡಿಪ್ರಕೇಷನ್ ಇವನ ಟ್ರೇಡ್ ಮಾರ್ಕ್. ಈಚಿನ ಓದುಗರಿಗೆ ಇವರ ಹಾಸ್ಯದ ಪರಿಚಯವಾಗಲೆಂಬುದು ಈ ಲೇಖನದ ಉದ್ದೇಶ.

ಈ ಹಿಂದೆ ತಿಳಿಸಿದಂತೆ ಶ್ರೀಮತಿ ಬಿ.ಎಸ್.ಶೈಲಜಾರವರು ದ ಲಿಟಲ್ ಪ್ರಿನ್ಸ್ ಕಥಾನಕದ ಭಾವಾನುವಾದವನ್ನು ಬಹು ಸೊಗಸಾಗಿ ನಿರೂಪಿಸಿರುವರು. ಇದೊಂದು ಧಾರಾವಾಹಿಯಾಗಿ ಬೆಳಕುಕಾಣುತ್ತಿದೆ. ಈ ತಿಂಗಳ ಇನ್ನೊಂದು ಹೊಸ ಪ್ರಯೋಗವೆಂದರೆ "ಹಿಂದಿ ಹಾಡಿ–ಕನ್ನಡ ಜೋಡಿ" ಎಂಬ ಹೊಸ ಅಂಕಣ. ಇದರಲ್ಲಿ ನಾವೆಲ್ಲಾ ಎಂದಾದರೊಮ್ಮೆ (ಅರ್ಥ ಗೊತ್ತಿಲ್ಲದಿದ್ದರೂ) ಗುನುಗುಟ್ಟುತ್ತಾ ಆನಂದಿಸಿದ್ದ ಹಳೆಯ ಹಿಂದಿ ಹಾಡುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ನಿರ್ಮಿಸಿರುವ ಅಂಕಣವಿದು. ನಮ್ಮವರೇ ಆದ ಅಣಕು ರಾಮನಾಥರು ಇದರ ಸೃಷ್ಟಿಕರ್ತ. ನಿಮಗೆ ಇಷ್ಟವಾದ ಹಾಡುಗಳಲ್ಲಿ ಯಾವುದನ್ನಾರೂ ಈ ಅವತರಣಿಕೆಯಲ್ಲಿ ಕಾಣಬೇಕೆಂದು ಇಚ್ಛಿಸಿದರೆ ಅಗತ್ಯವಾಗಿ ನಮಗೆ ವಾಟ್ಸಪ್ (9845264304) ಮೂಲಕ ತಿಳಿಸಿ. ಕೂಡಲೇ ವ್ಯವಸ್ಥೆ ಮಾಡುತ್ತೇವೆ. ಬಾತ್ ರೂಮ್ ಹಾಡುಗಾರರಿಗೆ ಇದೊಂದು ಸದವಕಾಶ.

ಶ್ರೀಮತಿ ಶಾಂತಾ ನಾಗರಾಜ್ ಅವರು ಅಂಚೆಇಲಾಖೆಯ ಪವಾಡಗಳ ಬಗ್ಗೆ ಆಸಕ್ತಿ ಮೂಡುವಂತೆ ಹೇಳಿದ್ದಾರೆ. ಜಿ.ವಿ.ಅರುಣ ಅವರ "ಕಥೆ ಹೇಳುವ ಕಲೆ" ಒಂದು ಪಾಂಡಿತ್ಯಪೂರ್ಣ ಲಲಿತ ಪ್ರಬಂಧ. ಅಂತೆಯೇ ಗೀತಾ ಕುಂದಾಪುರ, ನಂದಿನಿ ಕಾಪಡಿ, ಶ್ಯಾಮಲಾ ರವಿಶಂಕರ್, ರಘುರಾಮ್ ಇವರುಗಳೆಲ್ಲಾ ನಿಮ್ಮನ್ನು ರಂಜಿಸಲು ಮುಂದೆ ಬಂದಿದ್ದಾರೆ. ವಿದ್ಯಾರಣ್ಯರ ಪಿ.ಸಿ.ಓ ಪುರಾಣ ಹಳೆಯ ದಿನಗಳ ಅನುಭವಗಳನ್ನು ನೆನಪಿಗೆ ತರಿಸುತ್ತದೆ. ಪತ್ರಿಕೆಯನ್ನು ಓದಿ. ಎಂಜಾಯ್ ಮಾಡಿ. ■


**ಒಂದು ವಿನಮ್ರ ವಿನಂತಿ**

ಅನೇಕ ಚಂದಾದಾರರು ಅಪರಂಜಿಯ ಚಂದಾ ಹಣವನ್ನು ನೇರವಾಗಿ ನಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಿರುವುದಕ್ಕೆ ಅಪರಂಜಿ ಅವರೆಲ್ಲರಿಗೂ ಆಭಾರಿ. ಈ ನಿಟ್ಟಿನಲ್ಲಿ ನಿಮ್ಮಿಂದ ಒಂದು ಸಹಾಯ ಆಗಬೇಕಾಗಿದೆ. ತಾವು ಬ್ಯಾಂಕ್ ಖಾತೆಯ ಮೂಲಕ ಚಂದಾ ನವೀಕರಿಸುವಾಗ, ಬ್ಯಾಂಕ್ ವಹಿವಾಟಿನ ವಿವರ, ನಿಮ್ಮ ಚಂದಾ ಸಂಖ್ಯೆ, ಹೆಸರು ಮತ್ತು ಈಗಿನ ವಿಳಾಸ ಇವುಗಳನ್ನು ನಮಗೆ ಜಿಮೇಲ್ ಅಥವಾ ವಾಟ್ಸಪ್ ಮೂಲಕ ತಕ್ಷಣವೇ ಕಳಿಸಿ. ಇದರಿಂದ ರಸೀತಿ ಕಳಿಸುವ ಕಾರ್ಯ ಸುಗಮವಾಗುತ್ತದೆ. ನಿಮ್ಮ ಸಹಕಾರಕ್ಕೆ ಅಪರಂಜಿ ಆಭಾರಿ.

ಅವಿಸ್ಮರಣೀಯ ನಗೆಗಾರರು–13

# ಜಿ.ಎಸ್. ಸೂರ್ಯನಾರಾಯಣ ರಾವ್ ( ನಾಗೂಶ್ರೀ ಸೂರಿ)

✍ಶಿವಕುಮಾರ್



ಅವಿಸ್ಮರಣೀಯ ನಗೆಗಾರರು ಸರಣಿಯ ಈ ಹಿಂದಿನ ಹಲವು ಅಂಕಣಗಳಲ್ಲಿ ಕೊರವಂಜಿ ಮಾಸಪತ್ರಿಕೆಗೆ ಲೇಖನಗಳನ್ನು ನೀಡಿ ಪತ್ರಿಕೆಯನ್ನು ಶ್ರೀಮಂತಗೊಳಿಸಿದ ಮಹನೀಯರುಗಳನ್ನ ಪರಿಚಯಿಸುವ ಕಾರ್ಯವನ್ನು ನಡೆಸಿದ್ದಾಯಿತು. ಈ ಲೇಖನದಿಂದ ಮೊದಲುಗೊಂಡು, ಅಪರಂಜಿ ಮಾಸಪತ್ರಿಕೆಗೆ ಲೇಖನಗಳನ್ನು ನೀಡಿ ಪ್ರೋತ್ಸಾಹಿಸಿದ ಲೇಖಕ ಲೇಖಕಿಯರನ್ನು ಓದುಗರಿಗೆ ಪರಿಚಯಿಸುವ ಪ್ರಯತ್ನವನ್ನು ಪ್ರಾರಂಭಿಸುತ್ತಿರುವೆ. ಅಪರಂಜಿಯ ಮೊದಲ ಸಂಚಿಕೆ ಹೊರಬಂದದ್ದು ಅಕ್ಟೋಬರ್ 1984ರಲ್ಲಿ. ನಾಲ್ಕು ದಶಕಗಳಿಗೂ ಮೀರಿದ ಈ ಅನಧಿಯಲ್ಲಿ ಅನೇಕ ಖ್ಯಾತನಾಮರು ಅಪರಂಜಿಗೆ ಲೇಖನಗಳನ್ನು ನೀಡಿ ಪತ್ರಿಕೆಯನ್ನು ಶ್ರೀಮಂತಗೊಳಿಸಿದರು. ತೊಂಭತ್ತರ ದಶಕದ ಪ್ರಾರಂಭದಲ್ಲಿ ಒಬ್ಬ ಹೊಸ ನಗೆಗಾರರು ನಮ್ಮ ಬಳಗವನ್ನು ಸೇರಿದರು. "ನಾಗೂಶ್ರೀಸೂರಿ" ಎಂಬ ಕಾವ್ಯನಾಮದಡಿ ಬರೆಯಲು ಪ್ರಾರಂಭಿಸಿದ ಈ ಮಹನೀಯರ ಪೂರ್ಣ ನಾಮಧೇಯ, ಗೂಳೂರು ಸೂರ್ಯನಾರಾಯಣ ರಾವ್. ಈ ಪ್ರತಿಭಾವಂತ ಲೇಖಕರನ್ನು ಪರಿಚಯಿಸುವಾಗ ಅವರನ್ನು ಬಹುವಚನದಲ್ಲಿ ಸಂಬೋಧಿಸುವುದು ನಮ್ಮ ನಡುವಣ ಆಪ್ತ ಗೆಳೆತನಕ್ಕಾಗುವ ಅಪಚಾರ ಎಂಬುದು ನನ್ನ ಭಾವನೆ. ನನ್ನ ಮಟ್ಟಿಗೆ ಅವನು ಎಂದಿಗೂ ಸೂರಿ.

ಸೂರಿ ನನಗೆ ಇಂಜಿನಿಯರಿಂಗ್ ಸಹಪಾಠಿ. ಓದು ಮುಗಿಸಿದ ತಕ್ಷಣ ನಾವಿಬ್ಬರೂ ಎಚ್.ಎಂ.ಟಿ.ಸೇರಿದೆವು. ಅವನು ಮೇಂಟೆನನ್ಸ್ ವಿಭಾಗಕ್ಕೆ ಸೇರಿದರೆ, ನಾನು ಡಿಸೈನ್ ವಿಭಾಗಕ್ಕೆ ಆಯ್ಕೆಯಾದೆ. ಎಂಭತ್ತರ ದಶಕದ ಪ್ರಾರಂಭದಲ್ಲಿ ನಾನು ಅಪರಂಜಿ ಪತ್ರಿಕೆಯ ಹೊಣೆಯನ್ನು ಹೊರುವ ವೇಳೆಗಾಗಲೇ ನಾನು ಎಚ್.ಎಂ.ಟಿ. ಕೆಲಸಕ್ಕೆ ರಾಜೀನಾಮೆಯನ್ನಿತ್ತು ನನ್ನದೇ ಉದ್ಯಮ ನಡೆಸುತ್ತಿದ್ದೆ. ಸೂರಿ ಸಹಾ ಎಚ್.ಎಂ.ಟಿ ಬಿಟ್ಟು ಬೇರೊಂದು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ. ಪ್ರಾರಂಭದ ಹಲವು ಅಪರಂಜಿ ಸಂಚಿಕೆಗಳನ್ನು ನೋಡಿ ಸೂರಿಗೂ ಬರೆಯುವ ಉತ್ಸಾಹ ಬಂತು. ನನಗೆ ಅದರಲ್ಲೇನೂ ಆಶ್ಚರ್ಯ ಕಾಣಲಿಲ್ಲವೆನ್ನಿ. ಸೂರಿಯದು ಮೊದಲಿನಿಂದಲೂ ಬಹು ಮೊನಚಾದ ಹಾಸ್ಯಪ್ರಜ್ಞೆ, ವ್ಯಂಗ್ಯ ಚಿತ್ರ ರಚನೆ, ಅಣಕು ಕವನ, ನಗೆ ಬರಹ ಇವೆಲ್ಲದರಲ್ಲೂ ಅವನಿಗೆ ಅಸಾಧಾರಣ ಪ್ರತಿಭೆ ಇತ್ತು. ಅಪರಂಜಿಗೆ ಸೂರಿ ಬರೆಯಲು ಪ್ರಾರಂಭಿಸಿದ ಮೇಲೆ, ನಮ್ಮಿಬ್ಬರ ಸಂಪರ್ಕ ಇನ್ನೂ ಹತ್ತಿರವಾಯಿತು. ಎಪ್ರಿಲ್ 1986 ರ ಸಂಚಿಕೆಗೆ ಬರೆಯಪ ಪ್ರಾರಂಭಿಸಿದ ಸೂರಿಯ ನಗೆ ಸಾಹಿತ್ಯ ಸೃಷ್ಠಿ ಅಕ್ಟೋಬರ್ 2007 ರ ವರೆಗೆ ಎರಡು ದಶಕಗಳಿಗೂ ಮೀರಿದ ಅವಧಿಯಲ್ಲಿ ನಡೆಯಿತು. ಸೂರಿಯ ಸಾಹಿತ್ಯ ವೈವಿಧ್ಯಮಯ.. ಅಣಕು ಕವನಗಳು, ಹರಟೆಗಳು, ವ್ಯಂಗ್ಯಚಿತ್ರಗಳು ಇವುಗಳ ಜೊತೆಗೆ ಜಂಬಲ್ಸ್ ಎಂಬ

ಒಂದು ವಿಶಿಷ್ಟ ಪದಬಂಧ, ಇವೆಲ್ಲಾ ಅವನ ಪ್ರತಿಭೆಯ ಫಲಶ್ರುತಿ. ಜಂಬಲ್ಸ್ ಅಂದರೇನು ಎಂಹುದನ್ನು ವಿವರಿಸುವ ಬದಲು, ಒಂದು ಪದಬಂಧವನ್ನೇ ಕೆಳಗೆ ನೀಡಿರುವೆ.

ಸೂರಿ ಸ್ನೇಹ ಜೀವಿ. ಅವನ ಅಂತಃಕರಣ ಬಹು ನವಿರು. ಕಾರ್ಪೊರೇಟ್ ಸಂಸ್ಥೆಗಳ ಕಚ್ಚಾಟದ ಪರಿಸರ ಅವನಿಗೆ ಒಗ್ಗಲಿಲ್ಲ. ಹಾಗಾಗಿ ವೃತ್ತಿಜೀವನ ಅವನಿಗೆ ನಿರಾಶಾದಾಯಕವಾಗಿತ್ತು ತನ್ನ ಬರಹಗಳ ಮೂಲಕ ತೃಪ್ತಿಯನ್ನು ಕಾಣುವ ಪ್ರಯತ್ನವನ್ನ ಅವನು ನಡೆಸಿದ್ದ. ಒಂದು ಸಂಜೆ ಅವನೊಂದಿಗೆ ಕುಳಿತು ಹರಟುತ್ತಿದ್ದಾಗ, ಒಮ್ಮೆಲೇ, "ಶಿವು, ದೇವರಿಗೂ ಶೋಚನೀಯ ಪರಿಸ್ಥಿತಿ ಬರುತ್ತೇನೋ?" ಎಂದು ಅಮಾಯಕನಂತೆ ಕೇಳಿದ. ಇವ ಏಕೆ ಹೀಗೆ ಮಾತನಾಡುತ್ತಿದ್ದಾನೆ ಅನ್ನಿಸಿದರೂ, ಗೆಳೆತನಕ್ಕೆ ಕಟ್ಟುಬಿದ್ದು, ಪ್ರಾಮಾಣಿಕ ಉತ್ತರ ಕೊಡೋಣ, ಕುಹಕ ಬೇಡ ಅನ್ನಿಸಿತು. "ಖಂಡಿತ ಇಲ್ಲ ಸೂರಿ. ದೇವರು ಸತ್‌ಚಿತ್‌ಆನಂದ ಸ್ವರೂಪಿ. ಅವನಿಗೆ ಮಾನವರಂತೆ ಶೋಚನೀಯ ಪರಿಸ್ಥಿತಿ ಒದಗುವುದು ಹೇಗೆ ಸಾಧ್ಯ ?" ಅಂತ ಉತ್ತರಿಸಿದೆ.

ಅವ ಹೇಳಿದ. "ನಿನಗೇ ತಿಳಿದಿರೋ ಹಾಗೆ, ನನ್ನ ಪರಿಸ್ಥಿತಿ ಶೋಚನೀಯವಲ್ಲದಿದ್ದರೂ ಅದಕ್ಕೆ ಬಹು ದೂರವೇನೂ ಅಲ್ಲ. ಆದರೆ ನಮ್ಮ ಸ್ವಾಮೀಜಿ, 'ನೀನೇ ದೇವರು. ಆ ಅಹಮ್ ಬ್ರಹ್ಮಾಸ್ಮಿ ಅನ್ನೋ ಜ್ಞಾನ ನಿನಗೆ ಅಂತರ್ಗತವಾಗಿಲ್ಲ ಅಷ್ಟೇ.' ಅಂತ ಮೊನ್ನೆ ಪ್ರವಚನದಲ್ಲಿ ಹೇಳಿದ್ರು. ಅಟ್ ಲೀಸ್ಟ್, ನಿನ್ನಲ್ಲೇ ದೇವರು ಇದ್ದಾನೆ ಅಂತಲಾದರೂ ಹೇಳಿದ್ರೆ, ಏನೋ ಒಂದು ಮೂಲೇಲಿ ಅವ ಕುಳಿತು ನನ್ನ ಪಡಿಪಾಟಲನ್ನ ನೋಡ್ತಾ ಇದಾನೇನೋ ಅಂದ್ಕೋತಾ ಇದ್ದೆ. ನನಗೆ ಯವತ್ತೂ ನಾನೇ ದೇವರು ಅಂತ ಅನ್ನಿಸೇ ಇಲ್ಲವಲ್ಲೋ" ಅಂತ ಹೇಳಿ, ಪ್ಲೇಟಿನಲ್ಲಿದ್ದ ಪಕೋಡಕ್ಕೆ ಕೈ ಹಾಕಿದ.

ಸೂರಿಗೆ ಇಂತಹ ಗಹನವಾದ ಚಿಂತನೆಗಳು ಅಂದ್ರೆ ಬಹು ಇಷ್ಟ. ಹೇಗಾದ್ರೂ ಮಾಡಿ ವೈಜ್ಞಾನಿಕವಾಗಿಯೇ ದೇವರನ್ನ ತಿಳಿಯಬೇಕು ಅಂತ ಅವನ ಹಂಬಲ. ಸ್ಟೀಫನ್ ಹಾಕಿಂಗ್, ವೈನ್‌ಬರ್ಗ್, ಇವರನ್ನೆಲ್ಲಾ ಓದಿಕೊಂಡು, ಕ್ವಾಂಟಮ್ ಫೀಲ್ಡ್ ಅಂದ್ರೆ ಹಿರಣ್ಯಗರ್ಭಾನೇ ಅಂತ ಕಂಡಕಂಡೋರ್ನೆಲ್ಲಾ ಕೇಳಿ, ಅವ್ರು ಇವನನ್ನ ಕಂಡರೆ ಅನುಮಾನಿಸೋ ಹಾಗೆ ಮಾಡಿಕೊಂಡು ಬಿಟ್ಟಿದ್ದ.

ಸೂರಿ ನನ್ನನ್ನು ಭೇಟಿಮಾಡಿದಾಗಲೆಲ್ಲಾ, ಅವನು ನನ್ನನ್ನು ಕುರಿತು, "ಶಿವು, ಅದು ಹೇಗೆ ನೀನು ಭಗವದ್ಗೀತೆನ ಪೂರ್ತಿ ಓದಿ ಮುಗಿಸ್ದೆ? ನನಗೆ ಮೂರು ಪುಟ ಓದೋ ಹೊತ್ತಿಗೆ ಮುನ್ನೂರು ಶಂಶಯಗಳು ಹುಟ್ಟಿರುತ್ವೆ. ಓದು ಮುಂದುವರಿಯುಕ್ಕೇ ಆಗಲ್ಲ." ಅಂತ ಪಾಚಾಡಿಕೊಳ್ತಾ ಇದ್ದದ್ದು ನನಗಿನ್ನೂ ನೆನಪಿನಲ್ಲಿದೆ. 2012ರಲ್ಲಿ ಬೆಂಗಳೂರಿನಲ್ಲಿ ಮೆಟ್ರೋ ಶುರುವಾದಾಗ ನನ್ನನ್ನ ಮೆಟ್ರೋದಲ್ಲಿ ಒಂದು ಸಲ ಸುತ್ತಾಡಿಸು ಅಂತ  ಸೂರಿ ನನಗೆ ದುಂಬಾಲು ಬಿದ್ದಿದ್ದ. ಸರಿ, ಅಂತ ಹೇಳಿ ಒಮ್ಮೆ ಸೂರಿಯನ್ನೂ ಒಳಗೊಂಡಂತೆ ಏದಾರು ಗೆಳೆಯರು ಒಟ್ಟಿಗೆ ಕ್ರಿಕೆಟ್ ಸ್ಟೋಡಿಯಮ್ ಹತ್ತಿರ ಕಾರನ್ನು ನಿಲ್ಲಿಸಿ, ಎಂ.ಜಿ.ರೋಡ್ ಸ್ಟೇಷನ್ನಿನಿಂದ ಬಯ್ಯಪ್ಪನ ಹಳ್ಳಿಯವರೆಗೂ ಮೆಟ್ರೋದಲ್ಲಿ ಪಯಣಿಸಿ ಅಲ್ಲಿಂದ ಹಿಂದಕ್ಕೆ ಬಂದಿದ್ದೆವು.

ಈ ಜಾಲಿರೈಡ್‌ನಿಂದ ಸೂರಿಪಟ್ಟ ಆನಂದ ಅಷ್ಟಿಷ್ಟಲ್ಲ. ಅಮೇಲೆ ಕ್ಲಬ್‌ಹೌಸ್‌ನಲ್ಲಿ ಒಟ್ಟಿಗೆ ಊಟ ಮುಗಿಸಿ ಸೂರಿಯನ್ನ ಬೀಳ್ಕೊಟ್ಟಿದ್ದೆ. ಅದೇ ನಮ್ಮ ಕೊನೆಯ ಭೇಟಿಯಾಗಿತ್ತೆಂದು ಅಂದು ನನಗೆ ತಿಳಿದಿರಲಿಲ್ಲ. ಅದರ ಮುಂದಿನ ವಾರ ಅವನು ಪತ್ನೀ ಸಮೇತನಾಗಿ ಮಂತ್ರಾಲಯಕ್ಕೆ ಹೋಗಿದ್ದು ಅಲ್ಲಿಂದ ಟ್ರೈನಿನಲ್ಲಿ ಬೆಂಗಳೂರಿಗೆ ಹಿಂತಿರುಗುತ್ತಿದ್ದಾಗ  ದಾರಿಯಲ್ಲೇ ಅಸು ನೀಗಿದ್ದು ಅನಂತರ ತಿಳಿಯಿತು.

ಸೂರಿಗೆ ಈಗಲಾದರೂ ಅವನ ಕ್ವಾಂಟಮ್ ಫೀಲ್ಡ್–ಹಿರಣ್ಯಗರ್ಭ ಕಾನನ್‌ಡ್ರಮ್ಮಿಗೆ ಉತ್ತರ ದೊರಕಿರಬಹುದೆಂದು ನನ್ನ ಆಶಯ.

ಸೂರಿಯ ನಗೆಪ್ರಜ್ಞೆಯನ್ನು ಉದಹರಿಸುವ ಒಂದು ಲೇಖನವನ್ನು ಆರಿಸುವ ಸಲುವಾಗಿ ಆತನ ಎಲ್ಲ ಲೇಖನಗಳ ಮೇಲೂ ಒಮ್ಮೆ ಕಣ್ಣಾಡಿಸಿದೆ. ಕೊನೆಗೆ ಷಾರ್ಟ್‌ಲಿಸ್ಟ್ ಮಾಡಿದ ಪಟ್ಟಿಯಿಂದ ಈ ಕೆಳಗಿನ ಲೇಖನವನ್ನು ಉದ್ಧರಿಸಿರುವೆ.

ರಾಮೇಶ್ವರಕ್ಕೆ ಹೋದ್ರೂ....

ಮುಂಚೆ ನಾನು ಸರಿಯಾಗೇ ಇದ್ದೆ. ಈಚೆಗೆ ಒಂದು ನಾಕೈದು ವರ್ಷದಿಂದಲೇ ಅಂತ ಹೇಳಬಹುದು. ನಾನು ಯಾವದಾದರೂ ಚಿಂತೇನ ತಲೆಗೆ ಹಚ್ಚಿಕೊಂಡು ಒದ್ದಾಡ್ತಾ ಇರೋದು. ನನ್ನ ತಲೆ ತಿನ್ತಾ ಇರೋ ವಿಷಯಗಳಾದ್ರೂ ಎಂತಹವು ಅನ್ತೀರ – ಯಾರ ಮುಂದಾದ್ರೂ ಹೇಳಿಕೊಂಡೆ ಅಂದ್ರೆ ನಕ್ಕು ಬಿಡ್ತಾರೆ ಅಷ್ಟೇ. ಆದರೆ ಈ ಚಿಂತೆ ನನ್ನ ತಲೇಲಿ ಇರೋ ತನಕ ನನ್ನ ಅವಸ್ಥೆ ಬೇಡ ಬೇಡ. ಆಯ್ತು, ಹೋಗೋವಾಗಾದರೂ ಸುಮ್ನೆ ಹೊಗತ್ವಾ ಇವು ? ಊಹುಂ. ಮತ್ತೆ ಒಂದೋ ಎರಡೋ ಹೊಸ ಚಿಂತೆಗಳನ್ನ ಮರಿ ಹಾಕೇ ಹೋಗತ್ವೆ.

ನಾನೂ ಪರಿಸ್ಥಿತೀನ ಸುಧಾರಿಸೋಕ್ಕೆ ಅಂತ ಏನೆಲ್ಲಾ ಮಾಡಿಲ್ಲ. ಯೋಗ, ಮೆಡಿಟೇಷನ್ನು. ಗುಳಿಗೆಗಳು ಒಂದೇ ಎರಡೇ. ಯಾವುದೂ ಪ್ರಯೋಜನಕ್ಕೆ ಬರಲಿಲ್ಲ ಅಷ್ಟೇ. ಕಡೇಗೆ ಒಂದು ಸಾರಿ ನಿಮ್ಹಾನ್ಸ್‌ಗೆ ಹೋಗಾದರೂ ತೋರಿಸ್ಕೊಂಡು ಬರೋಣವೇ ಅಂತಲೂ ಆಲೋಚನೆ ಬಂತು. ಆಮೇಲೆ ಸದ್ಯ, ವಿಷಯ ಅಕ್ಕಪಕ್ಕದವರಿಗೆ ಗೊತ್ತಾಗಿಬಿಟ್ಟು ನನಗೆ ತಲೆಸರಿಯಿಲ್ಲ ಅಂತ ಪುಕಾರು ಹುಟ್ಟಿದ್ರೆ ಎಲ್ಲೀ ಗ್ರಹಚಾರ ಅಂದ್ಕೊಂಡು ಆ ಯೋಚನೆ ಬಿಟ್ಟಿದ್ದಾಯಿತು.

ಮುಂಚೆ ಮುಂಚೆ ನನ್ನ ಅವಸ್ಥೆನ ನೋಡಿ ತಮಾಷೆ ಮಾಡ್ತಾ ಇದ್ದ ನನ್ಹೆಂಡತೀಗೂ ಈಗೀಗ ಅರ್ಥವಾಗ್ತ ಇದೆ, ನಕ್ಕುಬಿಟ್ಟು ಉಡಾಯಿಸೋ ಅಷ್ಟು ಹಗುರಾ ಅಲ್ಲ ವಿಷಯಾ ಅಂತ. ಅವಳೂ ಪಾಪ ಏನಾದರೂ ಒಂದು ತನ್ನ ಕೈಲಾದ್ದನ್ನ ಮಾಡ್ತಾ ಇರ್ತಾಳೆ. ಕಂಡ ಕಂಡ ದೇವರುಗಳಿಗೆಲ್ಲಾ ಹರಕೆ ಹೊರೋದು, ಊರಲ್ಲಿರೋ ಜೋಯಿಸರುಗಳ ಹತ್ರವೆಲ್ಲಾ ನನ್ನ ಜಾತಕ ತೋರಿಸೋದು. ಅಷ್ಟೇಕೆ ಒಂದೆರಡು ಸಲ ಮಾರ್ಕೆಟ್ ಹತ್ತಿರ ಹೋಗಿ ಶಾಸ್ತ್ರಾನೂ ಕೇಳೋದು ಕೂಡಾ ಮಾಡಿದ್ದಾಳೆ.

ಮಾನ್ನೆ ಶನಿವಾರ ನಾನು ಆಫೀಸಿನಿಂದ ಬರೋಹೊತ್ಗೆ ಇವಳು ಒಂದು ಹೊಸಾ ಸಲಹೆ ಇಟ್ಕೊಂಡು ಕಾಯ್ತಾ ಇದ್ಲು. "ರೀ, ಇವತ್ತು ಮಧ್ಯಾಹ್ನ ಪಾತಕ್ಕ ಬಂದಿದ್ರು ಮೈಸೂರು ರಸ್ತೆ ಘಾಳಿ ಆಂಜನೇಯ ಬಹಾಳ ಸತ್ಯ ಅಂತ. ಒಂದು ಸಲ ಹೋಗಿ ಅಷ್ಟೋತ್ತರ ಮಾಡಿಸ್ಕೊಂಡು ಬಂತೂ ಅಂದ್ರೆ ನಿಮಗೆ ಖಂಡಿತ ತೊಂದರೆ ಪರಿಹಾರ ಆಗತ್ತಂತೆ. ನಾಡಿದ್ದು ಸೋಮವಾಕ ನಿಮಗೆ ಹ್ಯಾಗೂ ಆಫ್ ಇದೆಯಲ್ಲ. ಹೆಗಿ ಬರೋಣವಾ?"

ಹೀಗಾಗಿ ನಾವು ಇವತ್ತು ಬೆಳಗ್ಗೆ ಆ ಗುಡೀಗೆ ಬಂದದ್ದು. ನನಗೇನು ದೇವರಲ್ಲಿ ಭಯ, ಭಕ್ತಿ ಇಲ್ಲಾ ಅಂತಲ್ಲ. ಆದರೂ ಒಂದಪ ಅನುಮಾನ. ಅಲ್ಲ, ಒಂದೊಂದು ಗುಡೀಲೂ ಸಾವಿರಾರು ಭಕ್ತರು ಅದು ಕೊಡು ಇದು ಕೊಡು ಅಂತ ಈಗಾಗಲೇ ಹಾಕಿಕೊಂಡಿರೋ ಅಹವಾಲುಗಳನ್ನೇ ಇನ್ನೂ ವಿಲೇವಾರಿ ಮಾಡುಕ್ಕೆ ಆಗ್ದೇ ಇರೋವಾಗ, ಈಗ ನಾನೂ ಒಂದು ಹೊಸ ಅರ್ಜಿ ಹಾಕಿದ್ರೆ, ಅದು ಫೈಸಲ್ ಆಗೋದಾದರೂ

ಯಾವ ಕಾಲಕ್ಕೆ? ಆದರೆ ಇವಳಿಗೋ ಅಂಥಾ ಯಾವ ಸಂದೇಹಾನೂ ಇದ್ದಹಾಗೆ ಕಾಣಿಸ್ಲಿಲ್ಲ. ಹನುಮಂತ ರಾಯ ಖಂಡಿತಾ ಬೇಗ ಫಲ ಕೊಡ್ತಾನೆ ಅನ್ನೋ ಭರವಸೆ ಅವಳ ಮುಖದಲ್ಲಿ.

"ರೀ, ಈ ಸ್ವಾಮಿ ಮಹಾತ್ಮೆ ಎಂಥಾದ್ದು ಅಂತ ನೋಡಿದ್ರಾ ? ಗುಡೀ ಹತ್ರ ಬರೋಕ್ಕಿಲ್ಲ ಆಗಲೇ ಒಂದು ಥರಾ ಮನಸ್ಸಿಗೆ ಹಾಯಿ ಅನ್ನಿಸ್ತಾ ಇದೆ ಅಲ್ವಾ ?"

–ಗುಡಿಯ ಮುಂದೆ ಚಪ್ಲೀ ಬಿಡ್ತಾ ಇವಳು ಸಂತೋಷದಿಂದ ಹೇಳಿದ ಮಾತಿದು.

ಇವಳ ಮಟ್ಟಿಗೇನೋ ಆ ಮಾತು ನಿಜಾ ಇರಬಹುದು. ಆದರೆ ನನಗಂತೂ ಅದೇ ಘಳಿಗೇಲಿ ಒಂದು ಹೊಸ ಚಿಂತೆ ಆರಂಭ. ಏನಿಲ್ಲ, ಆ ಚಪ್ಲೀ ನೋಡ್ಕೊಳ್ಳೋ ಹುಡುಗಾ ಕೊಟ್ಟನಲ್ಲಾ ಆ ಟೋಕನ್ನು, ಅದು ಆರನೇ ನಂಬರೋ, ಒಂಭತ್ತನೇ ನಂಬರೋ ಸರಿಯಾಗಿ ಗೊತ್ತಾಗೋಥರಾ ಇರಲಿಲ್ಲ. ಹಾಗೇಂತ ಕೇಳಿದ್ದಕ್ಕೆ ಅವ, "ಸಾರ್, ನಿಮ್ಮ ನಂಬರು ಒಂಭತ್ತೇ ಸಾರ್. ಇಲ್ಲಿ ನೋಡಿ ಆರನೇ ನಂಬರ್ನೋವು ಇಲ್ಲಿವೆ" ಅಂತ ಆರನೇ ನಂಬರ್ ಗೂಡಿನಲ್ಲಿದ್ದ ತ್ಯಾಪೇ ಹಾಕಿದ್ದ ಎರಡು ಜತೇ ಚಪ್ಲಿಗಳನ್ನ ತೋರಿಸ್ದ. ನನಗೂ ಸಮಾಧಾನ ಆದ ಹಾಗೆ ಆಗಿ ಒಳಕ್ಕೆ ಹೋದೆ.

ಆದರೆ ದೇವರ ಮುಂದೆ ಹೋಗಿ ನಿಲ್ಲೋ ಹೊತ್ತಿಗೆ ಆ ಸಮಾಧಾನವೆಲ್ಲಾ ಹಾರಿಹೋಗಿ ಮತ್ತೆ ಅದೇ ವಿಷಯದ ಬಗ್ಗೆ ತಿಂತೆ ಅಂಟಿಕೊಂಡ್ತು. ಅಲ್ಲಾ, ಆ ಹುಡುಗಾ ನನಗೆ ಏನೇ ಹೇಳಿದ್ರೂನೂವೆ ಅಕಸ್ಮಾತ್ ಆ ಆರನೇ ನಂಬರಿನವನು ನನಗಿಂತ ಮುಂಚೆ ಹೊರಗೆ ಬಂದು ಟೋಕನ್ ಕೊಟ್ರೆ ಮಿಸ್ಟೇಕ್ ಮಾಡ್ಕೊಂಡು ನಮ್ಮ ಚಪ್ಲಿಗಳನ್ನ ಅವನಿಗೆ ಕೊಟ್ಟುಬಿಡೋಲ್ಲ ಅನ್ನೋದು ಯಾವ ಗ್ಯಾರಂಟಿ? ನಿಯತ್ತಿನ ಜನಗಳಾದ್ರೋನೋ ಪರವಾಗಿಲ್ಲ. ನಮ್ಮದು ಹರಕು ಚಪ್ಲೀನಪ್ಪ ಅಂತ ಹೇಳಿ ನಮ್ಮದನ್ನ ವಾಪಸು ಮಾಡಬಹುದು. ಆದರೆ ಸಿಕ್ಕಿದ್ದೇ ಸಾಕು ಅನ್ನೋ ಜನಗಳಾಗಿದ್ರೆ? ನಂದೂ ಇವಳ್ದೂ ಇಬ್ಬರದ್ದೂ ಹೊಸಾ ಚಪ್ಲಿಗಳು ಉಡೀಸ್ ಅಷ್ಟೇ.

ಛೆ, ಎಂಥಾ ಕೆಲಸ ಆಗಿ ಹೋಯ್ತು. ಅಲ್ಲ, ಇರೋ ಚಿಂತೆಗಳನ್ನ ಹರಿಸ್ಕೊಳ್ಳೋಣ ಅಂತ ಬಂದ್ರೆ, ಇಲ್ಲೇ ಒಂದು ಹೊಸಾ ಚಿಂತೆ ಶುರು ಆಯ್ತಲ್ಲಾ.!

ಅರ್ಚಕರು ಅಷ್ಟೋತ್ತರ ಶುರೂ ಮಾಡ್ಕೊಂಡರೂ ನನ್ನ ಮನಸ್ಸೆಲ್ಲಾ ಹೊರಗಡೆ ಇದ್ದ ಚಪ್ಲಿಗಳ ಮೇಲೇನೆ. ಎಷ್ಟು ತಲೆ ಕೆರಕೊಂಡ್ರೂ , ಹಾಳಾದ್ದು ಯಾವ ಮಾರ್ಗಾನೂ ಕಾಣಲೊಲ್ಲದು. .......ಯುರೇಕಾ ! ಅರೆ, ಹೀಗೆ ಮಾಡ್ಬೆ ! ಈಗಲೇ ಆ ಚಪ್ಲಿ ಹುಡುಗನ ಹತ್ರಾ ಹೋಗೋದು. ನಮ್ಮ ಚಪ್ಲಿಗಳನ್ನ ಹನ್ನೊಂದನೇ ನಂಬರಿನ ಗೂಡಿಗೆ ಬದಲಾಯಿಸೋದು, ಒಂಭತ್ತನೇ ನಂಬರ್ ಬದಲು ಹನ್ನೊಂದನೇ ನಂಬರ್ ಟೋಕನ್ನು ತಗೊಳ್ಳೋದು–ಆವಾಗ ಎಷ್ಟೇ ತಿರುಗಾ ಮುರುಗಾ ಮಾಡಿದ್ರೂ ಹನ್ನೊಂದು ಹನ್ನೊಂದೇ– ಅಂದ್ರೆ ನಮ್ಮ ಚಪ್ಲಿಗಳು ಭದ್ರ.....

ಆದರೆ ಈ ಐಡಿಯಾ ಬರೋದಕ್ಕೂ, ಅಲ್ಲಿ ಮಂಗಳಾರತಿ ಶುರೂ ಆಗೋದಕ್ಕೂ ಸರೀ ಹೋಗಿದ್ದರಿಂದ ನನಗೆ ಜಾಗ ಬಿಡೋಕ್ಕೆ ಆಗದೇ ಹೋಯಿತು.

ಮಂಗಳಾರತಿ ಆಗ್ತಾ ಇದ್ದ ಅಷ್ಟು ಹೊತ್ತೂ ದೇವರನ್ನ ನಾನು ಭಕ್ತಿಯಿಂದ ಬೇಡಿಕೊಂಡದ್ದು ಇಷ್ಟೇ – "ಅಪ್ಪಾ ಘಾಳಿ ಹನುಮಂತರಾಯಾ, ನಮ್ಮ ಹೊಸ ಚಪ್ಲೀಗಳು ಹವಾ ಆಗದ ಹಾಗೆ ನೋಡ್ಕೋ" ಅಷ್ಟೊಂದು ಶ್ರದ್ಧೆ, ಭಕ್ತಿಯಿಂದ ಯಾವ ದೇವರನ್ನೇ ಆಗಲಿ, ನಾನು ಬೇಡಿಕೊಂಡದ್ದು ಇದೇ ಮೊದಲು ಎನ್ನಬಹುದು.

ತೀರ್ಥ ಪ್ರಸಾದಾ ಆಗೋದೇ ತಡ, ನಾನು ಆಚೆಗೆ ಓಡಿದೆ. ಸದ್ಯ, ನಮ್ಮ ಚಪ್ಲೀಗಳು ಅಲ್ಲೇ ಭದ್ರವಾಗಿ ಇದ್ವು. ಆ ಹುಡುಗನ ಹತ್ರಾ ನಮ್ಮ ಚಪ್ಲೀಗಳನ್ನು ಇಸುಗೊಂಡು, ಅವನ ಕೈಗೆ ಒಂದು ರೂಪಾಯಿ ಹಾಕಿ, ಚಿಲ್ಲರೇ ಕಾಸಿಗೂ ಕಾಯದೇ, ಇವಳು ಬರೋದೇ ಕಾಯ್ತಾ ಅಲ್ಲೇ ಖುಷಿಯಾಗಿ ನಿಂತುಕೊಂಡಿದ್ದೆ.

ನವಗ್ರಹಗಳಿಗೆ ನಮಸ್ಕಾರ ಹಾಕಿಕೊಂಡು ಆಚೆ ಬಂದ ಇವಳಿಗೆ ನನ್ನ ಮುಖ ನೋಡಿ ಏನನ್ನಿಸ್ತೋ,

"ಈ ಆಂಜನೇಯ ನಾವು ಅಂದುಕೊಂಡದ್ದಕ್ಕಿಂತ ತುಂಬಾ ಸತ್ಯಾ ರೀ. ಅಲ್ಲ ನೋಡಿ, ಒಂದು ಸಲ ನಮಸ್ಕಾರ ಹಾಕೋಕ್ಕಿಲ್ಲ , ಆಗಲೇ ನಿಮ್ಮ ತಲೇಲಿದ್ದ ಯಾವುದೋ ಭಾರೀ ಚಿಂತೆ ಪರಿಹಾರ ಆದ ಹಾಗೆ ಆಗಿ, ಮುಖಾ ಸಂತೋಷವಾಗಿದೆ."

ಹೌದು, ಅನ್ನೋ ಥರದಲ್ಲಿ ನಾನು ತಲೆ ಆಡಿಸ್ದೆ. ಆದರೆ ಪರಿಹಾರ ಆದ ಆ ದೊಡ್ಡ ಚಿಂತೆ ಯಾವುದೂ ಅಂತ ಮಾತ್ರ ಅವಳಿಗೆ ಹೇಳೋಕ್ಕೆ ಮನಸ್ಸು ಬರಲಿಲ್ಲ.

* * *

ಸೂರಿಗೆ ಅಣಕು ಕವನಗಳನ್ನು ಬರೆಯುವುದೆಂದರೆ ಬಲು ಖುಷಿ. ಅರುವತ್ತರ ದಶಕದ ಖ್ಯಾತಿಯ ಸಿನಿಮಾ ಹಾಡು, "ಬೇಕರಾರ್ ಕರ್ ಕೆ ಹಮೇ ಯೂನ ಜಾಯಿಯೇ..." ಧಾಟಿಯಲ್ಲಿ ಸೂರಿ ರಚಿಸಿರುವ ಈ ಅಣಕವಾಡನ್ನು ಸ್ವಲ್ಪ ಗಮನಿಸಿ.

**ಫಾಸಿಪಟ್ಟು ಕೂತೆ ನಾನು**

ಫಾಸಿಪಟ್ಟು ಕೂತೆ ನಾನು ಹೆಚ್ಚು ಕಾಸಿಗೆ
ನೀವು ಕೊಂಚ ಹೇಳಿ ನೋಡಿ ನಮ್ಮ ಬಾಸಿಗೆ ॥ ಪೆ ॥

ಅನ್ನ ಸಾರು ತಿನ್ನುತಿದ್ರೆ ಮನೆಯಲಿ
ಇರುತೆ ಕೊಂಚ ಕಾಸು ಮಂತು ಕೊನೆಯಲಿ
ಹೊರಗೆ ಹೋಗಿ ಒಂದು ಬಾರಿ ತಿಂದು ಬಂದರೆ
ಅರ್ಧ ಜೇಬು ಖಾಲಿಯಾಗಿ ಪಡುವೆ ತೊಂದರೆ
ಫಾಸಿಪಟ್ಟು ಕೂತೆ ನಾನು.......

ಮಾವ ಕೊಟ್ಟ ಸೂಟು ಈಗ ಮಾಸಿದೆ
ಬೇರೆ ಬೇಕು ಆದ್ರೆ ಎಲ್ಲಿ ಕಾಸಿದೆ ?
ಹೊಲಿಯ ಬಹುದು ಅರ್ಧ ಪ್ಯಾಂಟು ಒಂದು ಕಾಲಿಗೆ
ಇನ್ನು ಅರ್ಧಕಾಯಬೇಕು ಬರುವ ಸಾಲಿಗೆ
ಫಾಸಿಪಟ್ಟು ಕೂತೆ ನಾನು.........

■

**ಅದ್ಸರಿ, ರೂಟ್ ಮ್ಯಾಪ್ ಯಾಕೆ..?**

ಗುಂಡ ಡಾಕ್ಟರ್ ಹತ್ತಿರ–ನೀವು ವಾಕಿಂಗ್ ಮಾಡಿ ಆರೋಗ್ಯಕ್ಕೆ ಒಳ್ಳೆಯದು ಅಂತ ಬರೆದಿದ್ದೀರಾ, ರೂಟ್ ಮ್ಯಾಪ್ ಕೊಟ್ಟಿದ್ದೀರಾ, ಯಾಕೆ ಡಾಕ್ಟ್ರೇ? ಎಂದಾಗ ಡಾಕ್ಟರ್–ಏನಿಲ್ಲ, ಆ ದಾರಿಯಲ್ಲೇ ಸಾಗಿದರೆ, ಅಲ್ಲಿ ನಿಮಗೆ ಯಾವುದೇ ಹೋಟೆಲ್, ದರ್ಶಿನಿ, ಬೇಕರಿ, ಬೋಂಡಾ ಅಂಗಡಿ ಇರುವುದಿಲ್ಲ...! ಎಂದಾಗ, ಗುಂಡ–ಓಹ್, ಭಲೇ, ಭಲೇ ಡಾಕ್ಟ್ರೇ ಅಂದ ಮನಸ್ಸಿನಲ್ಲೇ ಬೈಯ್ದುಕೊಳ್ಳುತ್ತಾ....!

**–ವಿ.ವಿಜಯೇಂದ್ರ ರಾವ್**

# ಪುಟ್ಟ ರಾಜಕುಮಾರ

**ಭಾವಾನುವಾದ: ಬಿ.ಸ್.ಶೈಲಜಾ**

ಅತ್ಯಂತ ಕುಶಲ ಪೈಲಟ್ ಎಂದು ಹೆಸರುವಾಸಿಯಾಗಿದ್ದ ಆಂಟೊನಿ ದೆ ಸೇಂಟ್ ಎಕ್ಸುಪ್ರಿ (ಆಂತನಿ ಸೆಜ್ಸು ಪೆರಿ ಎಂದು ಉಚ್ಚಾರಿಸುತ್ತಾರೆ) ರಚಿಸಿದ ಈ ಪುಸ್ತಕ ಬಹಳ ಜನಪ್ರಿಯವಾಗಿದೆ. ಅಸಂಬದ್ಧ ಎನ್ನಿಸಬಹುದಾದ ಕಲ್ಪನಾ ಲಹರಿಯಲ್ಲಿ ನಮ್ಮನ್ನು ಮೀಯಿಸುವ ಇದು ಆಲಿಸ್ ಇನ್ ವಂಡರ್ ಲ್ಯಾಂಡ್, ಗಲಿವರ್ನ ಪ್ರವಾಸ, ಮೈ ಫ್ರೆಂಡ್ ಮಿಸ್ಟರ್ ಲೀಕಿ (ಜೆ ಬಿ ಎಸ್ ಹಾಲ್ಡೇನ್) – ಇವುಗಳ ವರ್ಗಕ್ಕೆ ಸೇರುತ್ತದೆ. ಮಕ್ಕಳಿಗೆಂದು ಬರೆದದ್ದು; ದೊಡ್ಡವರಿಗೆ ಮುಸುಕಿನೊಳಗಿನ ಗುದ್ದು!

**ಪುಟ್ಟ ರಾಜಕುಮಾರ 1**


**ಒಂದು**

ನನಗಾಗ ಸುಮಾರು ಆರು ವರ್ಷ. ಕಾಡುಗಳನ್ನು ಕುರಿತ "ಪ್ರಕೃತಿಯ ನೈಜ ಕತೆಗಳು" ಎಂಬ ಒಂದು ಪುಸ್ತಕದಲ್ಲಿ ಒಂದು ಅದ್ಭುತ ಚಿತ್ರ ಕಂಡು ದಂಗಾದೆ. ಹೆಬ್ಬಾವೊಂದು ಪ್ರಾಣಿಯನ್ನು ತಿನ್ನುತ್ತಿರುವ ಚಿತ್ರ. ಸುಮಾರು ಹೀಗಿತ್ತು; ಇದು ಅದರ ಪ್ರತಿ. (ನಾನು ರಚಿಸಿದ್ದು)




ಆ ಪುಸ್ತಕದಲ್ಲಿ ಬರೆದಿದ್ದ ಪ್ರಕಾರ 'ಈ ಹೆಬ್ಬಾವುಗಳು ಪ್ರಾಣಿಯನ್ನು ನುಂಗಿಬಿಡುತ್ತವೆ; ಅಗಿಯುವುದಿಲ್ಲ. ತಿಂದಾದ ಮೇಲೆ ಅವುಗಳಿಗೆ ಓಡಾಡಲೂ ಆಗುವುದಿಲ್ಲ. ಆರು ತಿಂಗಳು ನಿದ್ದೆ ಮಾಡಿ ಅದನ್ನು ಜೀರ್ಣಿಸಿಕೊಳ್ಳುತ್ತವೆ'

ಈ ವಿಷಯ ನನ್ನ ತಲೆ ಕೆಡಿಸಿತು. ಕಾಡಿನಲ್ಲಿ ಏನೆಲ್ಲ ರಹಸ್ಯಗಳಿವೆ ಎಂದು ಆಶ್ಚರ್ಯವಾಯಿತು. ಒಂದು ಬಣ್ಣದ ಪೆನ್ಸಿಲ್ ತೆಗೆದುಕೊಂಡು ಅನೇಕ ವಿಫಲ ಪ್ರಯತ್ನಗಳ ನಂತರ ನನ್ನ ಮೊದಲ ಚಿತ್ರ ರಚಿಸಿದೆ. ಅದು ಹೀಗಿತ್ತು.



ನನ್ನ ಈ ಮಹಾ ಕಲಾಕೃತಿಯನ್ನು ದೊಡ್ಡವರಿಗೆ ತೋರಿಸಿದೆ. ಈ ಚಿತ್ರ ನೋಡಿ ನಿಮಗೆ ಭಯವಾಗುತ್ತಿದೆಯೇ ಎಂದು ಕೇಳಿದೆ. ಅವರೆಲ್ಲರ ಉತ್ತರ – "ಭಯ? ಹ್ಯಾಟ್ ನೋಡಿ ಯಾರಾದರೂ ಭಯ ಪಡುತ್ತಾರೆಯೇ?' ಆದರೆ ನಾನು ರಚಿಸಿದ್ದು ಹ್ಯಾಟ್ ಅಲ್ಲ. ನನ್ನ ಚಿತ್ರದ ಜೀವಾಳ – ಆನೆಯೊಂದನ್ನು ತಿಂದು ಜೀರ್ಣಿಸಿಕೊಳ್ಳುತ್ತಿರುವ ಹೆಬ್ಬಾವು. ಆದರೆ ದೊಡ್ಡವರಿಗೆ ಅದು ಅರ್ಥವಾಗದ್ದರಿಂದ ನಾನು ನನ್ನ ಎರಡನೆ ಕಲಾಕೃತಿಯನ್ನು ರಚಿಸಬೇಕಾಯಿತು. ಹೆಬ್ಬಾವಿನ ಹೊಟ್ಟೆಯೊಳಗೆ ಆನೆಯನ್ನು ಬಿಡಿಸಿ

ತೋರಿಸಿದೆ – ನನ್ನ ಚಿತ್ರದ ಮಹತ್ವ ಅವರಿಗೆ ಸ್ಪಷ್ಟವಾಗಿ ತಿಳಿಯಲಿ ಎಂದು. ಇಗೋ ಹೀಗೆ.



ಆದರೆ ಈ ದೊಡ್ಡವರಿದ್ದಾರಲ್ಲ, ಈ ಬಾರಿ ಚಿತ್ರ ಹೇಗಿದೆ ಎಂದು ಹೇಳಲೇ ಇಲ್ಲ. ಬದಲಿಗೆ ದೊಡ್ಡ ಉಪದೇಶ ಕೊಟ್ಟರು. ಹೆಬ್ಬಾವಿನ ಹೊರಗಿನ ನೋಟವಾಗಲೀ ಒಳಗಿನದಾಗಲೀ ಎರಡೂ ಕಲಾಕೃತಿಗಳನ್ನು ಬದಿಗಿರಿಸಿ, ಭೂಗೋಳ, ವಿಜ್ಞಾನ, ಇತಿಹಾಸ ಮತ್ತು ವ್ಯಾಕರಣದಂತಹ ವಿಷಯಗಳ ಬಗ್ಗೆ ಗಮನ ಕೊಡಬೇಕೆಂದರು. ಹಾಗಾಗಿ ಆರನೆಯ ವಯಸ್ಸಿನಲ್ಲಿಯೇ ನಾನು ಮಹಾನ್ ಕಲಾವಿದನಾಗಬೇಕೆನ್ನುವ ನನ್ನ ಆಸೆಯನ್ನು ಕೈಬಿಡಬೇಕಾಯಿತು. ನನ್ನ ಎರಡೂ ಕಲಾಕೃತಿಗಳ ವೈಫಲ್ಯದಿಂದ ನಾನು ಬಹಳ ನಿರಾಶನಾದೆ. ದೊಡ್ಡವರು ತಾವಾಗಿಯೇ ಏನನ್ನೂ ತಿಳಿದುಕೊಳ್ಳಲಾರರು. ಬಿಡಿಸಿ ಬಿಡಿಸಿ ಹೇಳಬೇಕು ಇದು ಮಕ್ಕಳಿಗೆ ಬಹಳ ಕಷ್ಟದ ಕೆಲಸ.

ನಾನು ಬೇರೆಯದೇ ಉದ್ಯೋಗ ಆಯ್ಕೆ ಮಾಡಿಕೊಂಡೆ. ವಿಮಾನ ಹಾರಿಸಲು ಕಲಿತೆ. ಭೂಮಿಯ ಎಲ್ಲ ಭಾಗಗಳ ಮೇಲೆ ಹಾರಿದ್ದೇನೆ. ಅಲ್ಲಿ ನನ್ನ ಭೂಗೋಳ ಜ್ಞಾನ ಬಹಳ ಉಪಯೋಗಕ್ಕೆ ಬಂದಿತು. ಈಗಲೂ ಕೆಳಗೆ ನೋಡಿದ ಕೂಡಲೇ ಅದು ಚೀನಾ ಆಗಿರಬಹುದೇ ಅಥವಾ ಆರಿಝೋನಾ ಆಗಿರಬಹುದೇ ಎಂದು ತಕ್ಷಣ ಹೇಳಬಲ್ಲೆ. ರಾತ್ರಿಯಲ್ಲಿ ದಾರಿ ತಪ್ಪಿಸಿ ಕೊಂಡರೆ ಇದು ಬಹಳ ಉಪಯೋಗಕ್ಕೆ ಬರುತ್ತದೆ.

ನನ್ನ ಈ ಸುದೀರ್ಘ ಜೀವನದಲ್ಲಿ ಅನೇಕ ದೊಡ್ಡವರನ್ನು ಭೇಟಿಯಾಗಿದ್ದೇನೆ. ಬಹಳ ಉಪಯುಕ್ತ ವಿಷಯಗಳ ಕುರಿತು ಮಾತನಾಡಿದ್ದೇನೆ. ಅವರನ್ನು ಬಹಳ ಹತ್ತಿರದಿಂದ ಗಮನಿಸಿದ್ದೇನೆ. ಆದರೆ ಅವರ ಬಗ್ಗೆ ನನ್ನ ಹಳೆಯ ಅಭಿಪ್ರಾಯಗಳೇನೂ ಬದಲಾಗಿಲ್ಲ.

ಕೆಲವರು ಬಹಳ ಸಮಚಿತ್ತರು ಎಂದು ನನಗೆ ಅನ್ನಿಸಿದರೆ ನನ್ನ ಮೊದಲನೆಯ ಕಲಾಕೃತಿಯನ್ನು ಅವರಿಗೆ ತೋರಿಸುತ್ತೇನೆ. ಅದು ಇನ್ನೂ ನನ್ನ ಬಳಿ ಸುರಕ್ಷಿತವಾಗಿದೆ. ಇದೊಂದು ಪ್ರಯೋಗವಷ್ಟೇ. ಆ ವ್ಯಕ್ತಿ ನಿಜವಾಗಿಯೂ ಅರ್ಥಮಾಡಿಕೊಳ್ಳಬಲ್ಲನೇ ಎಂದು ಪರೀಕ್ಷಿಸುವ ಪ್ರಯೋಗ. ಅವನು / ಅವಳು ಈ ಚಿತ್ರವನ್ನು ನೋಡಿ 'ಓಹೋ ಹ್ಯಾಟ್ ಇದು' ಎಂದೇ ಹೇಳುತ್ತಾರೆ. ಆಗ ನಾನು ಹೆಬ್ಬಾವು, ಪ್ರಾಣಿ, ಕಾಡು, ನಕ್ಷತ್ರ ಈ ಯಾವುದೇ ವಿಷಯ ಪ್ರಸ್ತಾಪ ಮಾಡುವುದಿಲ್ಲ. ಅವರ ಮಟ್ಟಕ್ಕೆ 'ಇಳಿದು' ಗೋಲ್ಫ್, ಸೇತುವೆ, ರಾಜಕೀಯ, ಕತ್ತಿನ ಟೈ – ಹೀಗೆ ಏನೇನೋ ಮಾತನಾಡುತ್ತೇನೆ. ಆ ದೊಡ್ಡ ಮನುಷ್ಯರಿಗೆ 'ಒಬ್ಬ ಸುಸಂಸ್ಕೃತ'ನೊಡನೆ ಮಾತನಾಡಿದೆವೆಂದು ಸಮಾಧಾನವಾಗುತ್ತದೆ.

**ಎರಡು**

ಒಟ್ಟಿನಲ್ಲಿ ಮಾತನಾಡಲು ಯಾರೂ ಸಿಗದೇ ನಾನು ಒಂಟಿಯಾಗಿಯೇ ನನ್ನ ಜೀವನ ಕಳೆದೆ – ಆರು ವರ್ಷದ ಹಿಂದಿನವರೆಗೂ. ಆಗ ನನ್ನ ಪುಟ್ಟ ವಿಮಾನ ದಡಕ್ಕನೆ ಸಹಾರಾ ಮರುಭೂಮಿಯ ಮೇಲೆ ಕುಸಿದುಬಿಟ್ಟಿತು. ನನ್ನ ಜೊತೆ ಯಾವ ಮೆಕ್ಯಾನಿಕ್ ಇರಲಿಲ್ಲ. ಪ್ರಯಾಣಿಕರಂತೂ ಇರಲೇ ಇಲ್ಲ. ಹಾಗಾಗಿ ರಿಪೇರಿ ಕೆಲಸವನ್ನು ಒಬ್ಬಂಟಿಯಾಗಿಯೇ ಕೈಗೆತ್ತಿಕೊಳ್ಳಬೇಕಾಯಿತು. ಅದು ನನ್ನ ಜೀವನ್ಮರಣದ ಪ್ರಶ್ನೆಯಾಗಿತ್ತು. ನೀರು ಒಂದು ವಾರಕ್ಕೆ ಸಾಕಾಗುವಷ್ಟು ಮಾತ್ರ ಇತ್ತು.

ಮೊದಲ ರಾತ್ರಿ, ಆ ಮರಳಿನ ಮೇಲೇ ನಿದ್ದೆ ಮಾಡಿದೆ. ನನ್ನ ಸನಿಹದ ಮಾನವ ಸುಮಾರು 1500 ಮೈಲಿ ದೂರದಲ್ಲಿದ್ದ. ಆದ್ದರಿಂದ ಸಮುದ್ರದಲ್ಲಿ ಹಡಗಿನ ದುರಂತವಾಗಿ ದೋಣಿ ಹಿಡಿದು ದಾರಿ ತಪ್ಪಿದ ನಾವಿಕನ ಪರಿಸ್ಥಿತಿಯೇ ನನ್ನದಾಗಿತ್ತು. ಬೆಳಗಾಗುತ್ತಿದ್ದ ಹಾಗೇ ಕೀಚಲು ದನಿಯೊಂದು ನನ್ನನ್ನು ಎಬ್ಬಿಸಿತು. ಆಶ್ಚರ್ಯವಾಗುವುದು ಸಹಜವೇ ಅಲ್ಲವೇ? ■

# ಶ್ರದ್ಧಾಂಜಲಿ

## ಅರುಣಾ ಕಾರಂತ



ಅಪರಂಜಿಯ ಪ್ರಾರಂಭದ ದಿನಗಳಲ್ಲಿ, ಪತ್ರಿಕೆಗೆ ಬರಹಗಳನ್ನು ತಪ್ಪದೇ ಬರೆದು ಜನಪ್ರಿಯ ಲೇಖಕಿ ಎನ್ನಿಸಿಕೊಂಡಿದ್ದ ಅರುಣಾ ಕಾರಂತ ಇನ್ನಿಲ್ಲ.

ಮಿತ್ರ ವೈದ್ಯರೊಡನೆ ಒಮ್ಮೆ ನೀನಾಸಮ್ ಕಾರ್ಯಕ್ರಮವೊಂದರ ಸಲುವಾಗಿ ಸಾಗರಕ್ಕೆ ತೆರಳುತ್ತಿದ್ದಾಗ, ಹಾದಿಯಲ್ಲಿ ಸಿಕ್ಕಿದ ಉಳವಿ ಗ್ರಾಮದಲ್ಲಿ ಸ್ವಲ್ಪ ನಿಂತು ಹೋಗೋಣ ಅಂತ ನಾನು ಸಲಹೆಮಾಡಿದೆ. "ಈ ಕುಗ್ರಾಮದಾಗೇನ್ಮಾಡ್ತೀಯಲೇ?" ಅಂತ ಮಿತ್ರ ಛೇಡಿಸಿದ." ಇಲ್ಲಿ ನನ್ನ ತಂಗಿ ಅರುಣಾ ಇದ್ದಾಳೆ. ಅವಳನ್ನ ನೋಡದೇ ಮುಂದೆ ಸಾಗುವ ಪ್ರಶ್ನೆಯೇ ಇಲ್ಲ" ಎಂದು ಹೇಳುತ್ತಾ ನಾನು ಕಾರನ್ನು ನಿಲ್ಲಿಸಿದೆ. ರಸ್ತೆ ಬದಿಯಲ್ಲಿ ಸ್ವಲ್ಪ ಎತ್ತರದಲ್ಲಿ ಅವರ ಮನೆ. ಅರುಣಾ ಮತ್ತು ರಮೇಶ್ ಕಾರಂತ್ ನಮ್ಮನ್ನು ಬಹು ಆದರದಿಂದ ಮನೆಗೆ ಬರಮಾಡಿಕೊಂಡರು. ಅವಲಕ್ಕಿ ಬೆಲ್ಲ, ಸಂಡಿಗೆ ಇವುಗಳ ಉಪಹಾರದ ನಂತರ, ಅರುಣಾ ತಾನು ಸಂಗ್ರಹಿಸಿಟ್ಟ ಚಿಟ್ಟೆಗಳನ್ನು ಸಂಭ್ರಮದಿಂದ ತೋರಿಸಿದಳು. ಮನೆಯ ಹಿಂದಿನ ತೋಟಗಲ್ಲಿ ಎತ್ತರದ ತೆಂಗಿನಮರಗಳು ನಮ್ಮನ್ನು ಕೈಬೀಸಿ ಕರೆದವು. ಅದನ್ನಲ್ಲಾ ನಮಗೆ ತೋರಿಸುತ್ತಾ, "ಈ ಗಿಡಗಳನ್ನೆಲ್ಲಾ ನಾನು ತಲೆ ಬಾಗಿ ನೀರು ನೀಡಿ ಬೆಳೆಸಿದೆ. ಈಗ ಅವನ್ನ ತಲೆ ಎತ್ತಿ ನೋಡುವಂತಾಗಿದೆ" ಅಂತ ರಮೇಶ್ ಹೆಮ್ಮೆಯಿಂದ ಹೇಳಿದರು.

ಅರುಣಾ ಕಾರಂತ ಅಪರಂಜಿಗೆ ಬರೆಯಲು ಪ್ರಾರಂಭಿಸಿದ್ದು 1994ರಲ್ಲಿ ಅವರ ಮೊದಲ ಲೇಖನ "ಕಿಟ್ಟಣ್ಣನ ಕೊರಿಯರ್ ಸರ್ವೀಸ್". ತಿಳಿಹಾಸ್ಯದಿಂದ ಕೂಡಿದ ಈ ಲೇಖನ ಅವರ ಇತರ ಬರಹಗಳಿಗೆ ನಾಂದಿಯಾಯಿತು. ಜೀವನೋತ್ಸಾಹದಿಂದ ಕೂಡಿದ ಇವರ ಬರಹದ ಶೈಲಿ ಓದುಗರಿಗೆಲ್ಲಾ ಮೆಚ್ಚುಗೆಯಾದದ್ದು ಆಶ್ಚರ್ಯವೇನಿಲ್ಲ. 2008ರವರೆಗೆ ಅರುಣಾ ಅಪರಂಜಿಗೆ ತಪ್ಪದೇ ಬರೆಯುತ್ತಿದ್ದರು. ಒಂದು ಅಪಘಾತದಲ್ಲಿ ಇವರಿಗೆ ಪುತ್ರವಿಯೋಗವಾದನಂತರ, ಆ ಆಘಾತದಿಂದ ಚೇತರಿಸಿಕೊಳ್ಳುವುದು ಇವರಿಗೆ ಕಷ್ಟವಾಯಿತು. ಹಲವು ದಿನಗಳ ಹಿಂದೆ ಇವರ ಪತಿ ರಮೇಶ್, ಅರುಣಾರವರ ನಿಧನದ ಬಗ್ಗೆ ತಿಳಿಸಿದಾಗ ಎಲ್ಲ ಹಳೆಯ ನೆನಪುಗಳು ಮರುಕಳಿಸಿದವು. ಅಗಲಿದ ಸೋದರಿಯ ಆತ್ಮಕ್ಕೆ ಇಗೋ ನಮ್ಮೆಲ್ಲರ ಅಶ್ರು ತರ್ಪಣ. ಓಂ ಶಾಂತಿಃ, ಶಾಂತಿಃ ಶಾಂತಿಃ.

# ಶ್ರದ್ಧಾಂಜಲಿ
## ಕೃಷ್ಣ ಸುಬ್ಬರಾವ್



ಅಪರಂಜಿಯ ಬಳಗದ ಹಿರಿಯ ಸಾಹಿತಿಗಳಾಗಿ, ಕೊರವಂಜಿ ಅಪರಂಜಿ ಟ್ರಸ್ಟಿನೊಡನೆ ಕೈ ಜೋಡಿಸಿ, ಹನ್ನೆರಡು ವರ್ಷಗಳ ಕಾಲ ಸತತವಾಗಿ ಹಾಸ್ಯೋತ್ಸವ ಸಮಾರಂಭಗಳಿಗೆ ಅತ್ಯಂತ ಯಶಸ್ವಿಯಾಗಿ ಸಾರಥ್ಯವನ್ನು ನಡೆಸಿದ ಕೃಷ್ಣ ಸುಬ್ಬರಾವ್ ಇನ್ನಿಲ್ಲ.

ನನಗೆ ಕೃಷ್ಣರ ಪರಿಚಯವಾದದ್ದು 1993ರಲ್ಲಿ. ಇವರು ಅಪರಂಜಿಗಾಗಿ ಬರೆದ ಮೊದಲ ನಗೆ ಲೇಖನ "ನೈವೇದ್ಯಾಲಂಕಾರ"ವು ಆಗಸ್ಟ್ 1993 ರಲ್ಲಿ ನಮ್ಮ ಪತ್ರಿಕೆಯಲ್ಲಿ ಬೆಳಕು ಕಂಡಿತು. ಅನಂತರ ದಶಕಗಳಷ್ಟು ಕಾಲ ಸತತವಾಗಿ ಅಪರಂಜಿಗೆ ಕೃಷ್ಣರು ಅನೇಕ ಲೇಖನಗಳನ್ನು ನೀಡಿದರು. 1994 ಇಸವಿಯ ಜೂನ್ ತಿಂಗಳ ಒಂದು ಭಾನುವಾರ, ಕೃಷ್ಣ ಮತ್ತು ಗೋಪಾಲ್ ಒಟ್ಟಿಗೆ ನಮ್ಮ ಮನೆಗೆ ಲೋಕಾಭಿರಾಮವಾಗಿ ಮಾತನಾಡಲು ಬಂದರು. ಅವರು ಸಂಭಾಷಣೆ ಮುಗಿಸಿ ಎದ್ದು ಹೋಗುವ ಸಮಯಕ್ಕೆ ಸರಿಯಾಗಿ ಜೋರಾಗಿ ಮಳೆ ಸುರಿಯಲಾರಂಭಿಸಿತು. ಮಳೆ ನಿಲ್ಲುವವರೆಗೆ ಕಾಯುತ್ತಾ ಕುಳಿತಾಗ ಹಾಸ್ಯೋತ್ಸವದ ಪರಿಕಲ್ಪನೆಯನ್ನು ಕೃಷ್ಣ ನಮ್ಮಿಬ್ಬರ ಮುಂದಿಟ್ಟರು. ಮುಂದಾದುದೆಲ್ಲ ಚಾರಿತ್ರಿಕ ದಾಖಲೆ ಎನ್ನಬಹುದು. ಮೊದಲಿಗೆ ಕೈಗಾರಿಕಾರಂಗದ ಸಾಹಿತ್ಯ ವೇದಿಕೆ, ಅಪರಂಜಿ ಬಳಗದೊಂದಿಗೆ ಕೈಜೋಡಿಸಿ ಭಾರತೀಯ ವಿದ್ಯಾಭವನದಲ್ಲಿ ಒಂದು ಅದ್ಧೂರಿ ನಗೆ ಕಾರ್ಯಕ್ರಮವನ್ನು ಸೃಷ್ಟಿಸಿದೆವು. "ಹತ್ತು ವರ್ಷದ ಹಬ್ಬ" ಎಂಬ ಶೀರ್ಷಿಕೆಯಿಂದ ನಡೆದ ಈ ಉತ್ಸವದಲ್ಲಿ, ಸಿ.ಆರ್. ಸಿಂಹ, ಮಾಸ್ಟರ್ ಹಿರಣ್ಣಯ್ಯ, ಅ.ರಾ.ಸೇ. ಮೊದಲಾಗಿ ಅನೇಕ ಖ್ಯಾತನಾಮರು ಭಾಗವಹಿಸಿದ್ದರು. ಇದಾದದ್ದು 1994ರಲ್ಲಿ. ಇದರ ನಂತರ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಒಂದು ಬೃಹತ್ ವೇದಿಕೆಯನ್ನು ಕಲ್ಪಿಸಿ ಹಾಸ್ಯಬ್ರಹ್ಮ ಮತ್ತು ಕೊರವಂಜಿ ಅಪರಂಜಿ ಟ್ರಸ್ಟ್ ಒಟ್ಟಾಗಿ ಸೇರಿ ಹಾಸ್ಯೋತ್ಸವಗಳ ಸರಣಿಯನ್ನೇ ನಡೆಸಿದವು. ನಾ.ಕಸ್ತೂರಿಯವರ ಸಂಸ್ಮರಣೆಯಿಂದ ಮೊದಲುಗೊಂಡು, ರಾ.ಶಿ., ಕೈಲಾಸಮ್, ಜಿ.ಪಿ.ರಾಜರತ್ನಂ ಇವರೇ ಮೊದಲಾಗಿ ಅನೇಕ ಹಾಸ್ಯ ದಿಗ್ಗಜರ ನೆನೆಪಿನಲ್ಲಿ ಹಾಸ್ಯೋತ್ಸವಗಳು ನೆರವೇರಿದವು. ಇದೆಲ್ಲದರ ಹಿಂದಿನ ಮೂಲ ಚಾಲನ ಶಕ್ತಿಯೆಂದರೆ ಅಗಲಿದ ಮಿತ್ರ ಕೃಷ್ಣ ಸುಬ್ಬರಾವ್. ಕೃಷ್ಣರ ಅದಮ್ಯ ಉತ್ಸಾಹ, ಕಾರ್ಯಕ್ಷಮತೆ, ಸಮಯ ಪ್ರಜ್ಞೆ ಅತ್ಯಂತ ಎತ್ತರದ ಮಟ್ಟದ್ದು. ಆ ದಿನಗಳಲ್ಲಿ ನಮ್ಮ ಕಾರ್ಯಕ್ರಮಗಳು ಒಂದೆರಡು ನಿಮಿಷ ತಡವಾಗುವುದೂ ಸಹಾ ಬಹು ಅಪರೂಪವಾಗಿತ್ತು.

ವ್ಯಕ್ತಿಗತವಾಗಿ ಹೇಳುವುದಾದರೆ ನನಗೆ ಅವರೊಂದಿಗಿನ ಸ್ನೇಹ ಬಹು ಅಪ್ಯಾಯಮಾನವಾಗಿತ್ತು. ಈಚಿನವರೆಗೂ ಅವರು ತಿಂಗಳಿಗೊಮ್ಮೆ ಭಾನುವಾರದಂದು ನಮ್ಮ ಮನೆಗೆ ಬಂದು ಹರಟೆ ಹೊಡೆದು, ಯಾವುದಾದರೊಂದು ಪುಸ್ತಕವನ್ನು ಓದಲು ತೆಗೆದುಕೊಂಡು ಹೋಗುತ್ತಿದ್ದರು. ನನ್ನ ದಿವಂಗತ ಪತ್ನಿ ಮಂಗಳಾ ತೀವ್ರ ಬೇನಯಿಂದ ನರಳುತ್ತಿದ್ದಾಗ , ಅವರಿಗೆ ಕೃಷ್ಣರ ಶ್ರೀಮತಿಯವರು ರಕ್ತದಾನ ಮಾಡಿದ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆ.

ಭಗವಂತನು ಅಗಲಿದ ಆತ್ಮಕ್ಕೆ ಚಿರಶಾಂತಿಯನ್ನೀಯಲಿ ಎಂದು ಅಪರಂಜಿ ಮಂಡಿಯೂರಿ ಪ್ರಾರ್ಥಿಸುತ್ತಾಳೆ. ಓಂ ಶಾಂತಿಃ, ಶಾಂತಿಃ ಶಾಂತಿಃ.

# ಅಂಚೆ ಇಲಾಖೆ ಪವಾಡಗಳು

ಶಾಂತಾನಾಗರಾಜ್

ಪೂರ್ಣಚಂದ್ರ ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' ನಿಮಗೆಲ್ಲ ನೆನಪಿರಬಹುದು. ಅದು ಹಳ್ಳಿಯಲ್ಲಿ ಒಂದು ಅಂಚೆಕಚೇರಿಯನ್ನು ಉಳಿಸಿಕೊಳ್ಳುವ ಉಪಾಯವನ್ನು ಕುರಿತಾದದ್ದು. ಅದಕ್ಕೆ ಕಾರಣ 'ಹಳ್ಳಿಯವರಿಗೆ ಪೋಸ್ಟಾಫೀಸಿನ ಅಗತ್ಯವೇ ಇರಲಿಲ್ಲ, ಹಾಗಾಗಿ ಅವರು ಕಾಗದಗಳನ್ನು ಬರೆಯುವ ಪ್ರಯತ್ನವನ್ನೇ ಮಾಡಲಿಲ್ಲ. ಆಗ ಸರ್ಕಾರ ಪೋಸ್ಟಾಫೀಸನ್ನು ಎತ್ತಂಗಡಿ ಮಾಡುವ ನಿರ್ಧಾರ ಮಾಡುತ್ತದೆ. ಆದ್ದರಿಂದ ಅಲ್ಲಿ ಉದ್ಯೋಗಿಯಾಗಿದ್ದ ಅದೇ ಊರಿನ ಪೋಸ್ಟ್ ಮಾಸ್ಟರನಿಗೆ 'ಪೋಸ್ಟಾಫೀಸೇ ಎತ್ತಂಗಡಿಯಾದರೆ, ತಾನು ಬೇರೆ ಊರಿಗೆ ವರ್ಗವಾಗಿ ಹೋಗಬೇಕಾದ ಅನಿವಾರ್ಯ ಎದುರಾಗುತ್ತದೆ'. ಆದ್ದರಿಂದಲೇ "ಈ ಕಾರ್ಡಿನ ಸಂದೇಶವನ್ನು ಬರೆದು ಹನ್ನೊಂದು ಜನರಿಗೆ ಪೋಸ್ಟ್ ಮಾಡಿದರೆ ನಿಮಗೆ ಧನಲಕ್ಷ್ಮಿ ಒಲಿಯುತ್ತಾಳೆ. ಇಲ್ಲದಿದ್ದರೆ ಕೆಡುಕಾಗುತ್ತದೆ" ಎಂದು ಆಸೆಯನ್ನೂ ಭಯವನ್ನೂ ಒಟ್ಟಿಗೇ ಹುಟ್ಟಿಸುತ್ತಾನೆ. ಆದರೆ ನನ್ನ ಗುಮಾನಿ ಏನೆಂದರೆ ಆ ಕಾಲದಲ್ಲಿ ಯಾರಮನೆಗೂ ಸರಿಯಾದ ಅಂಚೆ ವಿಳಾಸವೇ ಇರಲಿಲ್ಲ. ಎಷ್ಟೋ ಜನರಿಗೆ ತಮ್ಮ ಮನೆಯ ಅಂಚೆವಿಳಾಸ ಗೊತ್ತಿಲ್ಲಿಲ್ಲ. ಜನರು ತಮತಮಗೆ ತೋಚಿದ ವಿಳಾಸಗಳನ್ನು ಬರೆಯುತ್ತಿದ್ದರು! ಆದರೆ ನಂಬಿದರೆ ನಂಬಿ ಬಿಟ್ಟರೆ ಬಿಡಿ, ಹೇಗೇ ವಿಳಾಸವನ್ನು ಬರೆದರೂ ಸಕಾಲದಲ್ಲಿ ಸರಿಯಾದ ವ್ಯಕ್ತಿಗೆ ಪತ್ರ ತಲುಪಿಸುವ 'ಪವಾಡ'ವನ್ನಂತೂ ಅಂಚೆ ಇಲಾಖೆ ಮಾಡುತ್ತಿತ್ತು. ಅಂಥಾ ಒಂದೆರಡು ಪವಾಡಗಳ ಕಥೆ ಈ ಕೆಳಗೆ.

ಇದು 1950 ರ ಕಾಲಮಾನದ ಕಥೆ. ಚನ್ನಗಿರಿ ಹತ್ತಿರದ ಹಾನಿಹಳ್ಳಿ ಎನ್ನುವುದು ನಮ್ಮ ದೊಡ್ಡಮ್ಮನ ಊರು. ಆಕೆ ಅರವತ್ತು ದಾಟಿದ ವಿಧವೆ. ಜೊತೆಗೆ ಮಡಿಹೆಂಗಸು. ಆಕೆಯ ಎರಡು ದೌರ್ಬಲ್ಯಗಳು ಹಳ್ಳಿಯಲ್ಲಿ ಜನಜನಿತವಾಗಿದ್ದವು. ಒಂದು ಅತಿಮಡಿ ಎರಡು ಗಠವಾಣಿ. ಆಕೆಯ ಹೆಸರು ಸುಂದ್ರಾಬಾಯಿ ಎಂದಿದ್ದರೂ ಹಳ್ಳಿಯಜನ 'ಮಡಿಯಮ್ಮ ಅಥವಾ ಗಟವಾಣಮ್ಮ' ಎಂದೇ ಗುರುತಿಸುತ್ತಿದ್ದರು. ಇದು ಎಲ್ಲಾ ನೆಂಟರಿಗೂ ತಿಳಿದಿತ್ತು ಎನ್ನುವುದು ವಿಶೇಷವೇನಲ್ಲ. ಯಾಕೆಂದರೆ ಸ್ವತಃ ಆಕೆಗೂ ತಿಳಿದಿತ್ತು. ಈ ಬಗ್ಗೆ ಮೊದಮೊದಲು ಹಳ್ಳಿಗರ ಜೊತೆ ಜಗಳವಾಡುತ್ತಿದ್ದವರು, ಕೊನೆಗೆ ಅದೇ ತಮ್ಮ ಬಿರುದೇನೋ ಎನ್ನುವ ಬಿಮ್ಮಾನದಲ್ಲಿ 'ಪದ್ಮಶ್ರೀ, ಪದ್ಮಭೂಷಣ' ಸ್ವೀಕರಿಸಿದಂತೆ ಇವನ್ನೂ ಸ್ವೀಕರಿಸಿಬಿಟ್ಟಿದ್ದರು!

ಇಂತಿಪ್ಪ ನಮ್ಮ ದೊಡ್ಡಮ್ಮನಿಗೆ ಸಿದ್ದಾಪುರದಲ್ಲಿದ್ದ ನಮ್ಮ ಅಣ್ಣ ತನ್ನ ಹೊಸಮನೆಯ ಗೃಹಪ್ರವೇಶದ ಆಹ್ವಾನಪತ್ರಿಕೆಯನ್ನು ಅಂಚೆಯಲ್ಲಿ ಕಳಿಸಬೇಕಾದ ಪ್ರಸಂಗ ಬಂತು. ನಾವು ಹತ್ತಿರದ ಬಂಧುಗಳು ನಮ್ಮಲ್ಲಿ ಏನೇ ಸಮಾರಂಭವಾದರೂ ಯಾರಾದರೂ ಅವರ ಊರಿಗೇ ಹೋಗಿ ಅವರನ್ನು ಕರೆತರುತ್ತಿದ್ದೆವು. ಏಕೆಂದರೆ ಏಕಾಂಗಿನಿಯಾಗಿದ್ದ, ಯಾವ ಆದಾಯವೂ ಇಲ್ಲದೇ, ಇದ್ದ ಒಂದೇ ಎಕರೆ ಜಮೀನಿನಲ್ಲಿ ರೈತ ಕೊಡುವ ದೇಣಿಗೆಯಿಂದ ಬದುಕಿದ್ದ ಆಕೆಯ ಬಗ್ಗೆ ಗಠವಾಣಿಯಾದರೂ ಸಹಾನುಭೂತಿ ಇತ್ತು. ಈ ಬಾರಿ ಗೃಹಪ್ರವೇಶಕ್ಕೆ ಯಾರನ್ನಾದರೂ ಕಳಿಸಲು ಕೊನೆಯ ಘಳಿಗೆಯವರೆಗೂ ಪ್ರಯತ್ನಿಸಿ, ಯಾರೂ ಸಿಗದೇ ಇನ್ನು ಮೂರುದಿನ ಉಳಿದಿದೆ ಎನ್ನುವಾಗ ನಮ್ಮಣ್ಣ ಅಂಚೆ ಇಲಾಖೆಯ ಮೊರೆಹೋದ. ಆದರೆ ದೊಡ್ಡಮ್ಮನ ವಿಳಾಸ ಗೊತ್ತಿಲ್ಲ. ಕಡೆಗೆ ನಿರುಪಾಯನಾಗಿ 'ಸುಂದ್ರಮ್ಮ ಉರುಫ್ ಗಠವಾಣಮ್ಮ, ಹಾನಿಹಳ್ಳಿ' ಎಂದು ಬರೆದು

ಫೋಸ್ಟ್ ಮಾಡಿದ. ಇದೊಂಥರಾ 'ನಾ ಸತ್ಹಾಗಿರಬೇಕು : ನೀ ಅತ್ಹಾಗಿರಬೇಕು' ಎನ್ನುವ ಕಿಲಾಡಿತನ ನಮ್ಮಣ್ಣನದು ! ಯಾಕೆಂದರೆ ದೊಡ್ಡಮ್ಮನನ್ನು ಅವನು ಮನಃಪೂರ್ತಿ–ಯಾಗೇನೂ ಆಹ್ವಾನಿಸಿರಲಿಲ್ಲ. ಅವನು ಶಾಲೆಯ ಹೆಡ್ ಮಾಸ್ಟರ್. ತನ್ನ ಸಹೋದ್ಯೋಗಿಗಳನ್ನೂ ಆಹ್ವಾನಿಸಿದ್ದಾನೆ. ಈ ದೊಡ್ಡಮ್ಮನೋ ತೆಪ್ಪಗಿರುವವರೇ ಅಲ್ಲ. ಹೊಸಬರು, ಹಳಬರೆನ್ನದೇ ಮನಸ್ಸಿಗೆ ಬಂದಹಾಗೆ ಟೀಕೆ ಮಾಡುವವರೇ. ಆದ್ದರಿಂದ ದೊಡ್ಡಮ್ಮ ಹೇಗೂ ಬರುವುದಿಲ್ಲ. ವಿಳಾಸ ಸರಿಯಿಲ್ಲದೇ ಪತ್ರಿಕೆ ತಲುಪುವುದಿಲ್ಲ ಎಂದು ನಿಶ್ಚಿಂತನಾಗಿದ್ದ! ಗೃಹಪ್ರವೇಶದ ಹಿಂದಿನ ಸಂಜೆ ದೊಡ್ಡಮ್ಮ ಪ್ರತ್ಯಕ್ಷರಾಗಿಬಿಟ್ಟರು!! "ಏನೋ ಪುಟ್ಟಣ್ಣ ಬುದ್ಧಿಯಿದೆಯಾ ನಿನಗೆ? ವಿಳಾಸ ಹಾಗಾ ಬರೆಯೋದು? ಬರೀ ಕಾಗದ ಬರೆದ್ರೆ ಆಯ್ತಾ? ನಾನೇನು ಕಾಗದದಮೇಲೇ ಕೂತ್ಕೊಂಡ್ ಬರಕ್ಕಾಗತ್ತ? ಬಸ್ ಛಾರ್ಜಿನ ಹಣನ ಮನಿಯಾರ್ಡರ್ ಮಾಡ್ವೇಡ್ವ? ಎಲ್ಲಿ ತೆಗೆ ಐವತ್ತು ರೂಪಾಯಿ" ಅಂತ ಆವಾಜ್ ಹಾಕಿದರು!!! ನಮ್ಮಣ್ಣ ಮನದಲ್ಲೇ ಅಂಚೆ ಇಲಾಖೆಗೆ ಶಾಪ ಹಾಕಿದ.

ಇದು ಯಾವುದೋ ಹಳ್ಳಿಯಲ್ಲಿ ನಡೆದ ಘಟನೆ ತಾನೆ ? ಎಂದುಕೊಳ್ಳಬೇಡಿ. ಬೆಂಗಳೂರಂಥಾ ಬೆಂಗಳೂರಿನಲ್ಲೂ ಇಂಥಾ ಅಂಚೆ ಪವಾಡಗಳು ನಡೆದಿರುವುದಕ್ಕೆ ನಾನೇ ಸಾಕ್ಷಿಯಾಗಿದ್ದೇನೆ. 1950–60 ರ ದಶಕದ ಅವಧಿಯಲ್ಲಿ ಬೆಂಗಳೂರಿನ 'ರಾಜಾಜಿನಗರ' ಎನ್ನುವ ಬಡಾವಣೆ ಇನ್ನೂ ಸರಿಯಾಗಿ ಕಣ್ಣೇ ಬಿಟ್ಟಿರಲಿಲ್ಲ. ಈಗ ಸೆಕೆಂಡ್ ಬ್ಲಾಕ್ ಎಂದು ಕರೆಸಿಕೊಳ್ಳುವ ಜಾಗದಲ್ಲಿ ಸರ್ಕಾರ ಸಾಲುಸಾಲಾಗಿ ಪುಟ್ಟಪುಟ್ಟ ಮನೆಗಳನ್ನು ಕಟ್ಟಿ ಸರ್ಕಾರಿ ನೌಕರರಿಗೆ ಕೊಟ್ಟಿತ್ತು. ಅದರಾಚೆ ಬರೀ ಹೊಲಗಳೂ ಚಿಕ್ಕಚಿಕ್ಕ ಗುಡಿಸಲು ಮತ್ತು ಮನೆಗಳಿದ್ದವು. ಕೇತಮಾರನಹಳ್ಳಿ, ನಾರಾಯಣಪುರ, ಶಿವನಹಳ್ಳಿ ಹೀಗೇ ಸುತ್ತಲೂ ಹಳ್ಳಿಗಳೇ ಇದ್ದುವು. ಕಾರ್ಪೊರೇಷನ್ ಆಫೀಸಿನವರು ಸರಿಯಾದ ಮಣ್ಣಿನ ರಸ್ತೆಗಳನ್ನು ನಿರ್ಮಿಸತೊಡಗಿದಾಗ 'ಇಲ್ಲಿ ಹೊಸ ಬಡಾವಣೆಗಾಗಿ ಸೈಟುಗಳನ್ನಾಗಿ ಮಾಡಲು ಹೊಲಗಳನ್ನು ಸರ್ಕಾರ ಕಿತ್ತುಕೊಳ್ಳುತ್ತಾರಂತೆ' ಎನ್ನುವ ಪುಕಾರು ಹುಟ್ಟಿಕೊಂಡಿತು. ಸರ್ಕಾರ ಕಡಿಮೆಹಣ ಕೊಡುತ್ತದೆ ಮತ್ತು ಪಡೆಯಲು ಆಫೀಸಿಗೆ ಎಡತಾಕಬೇಕು ಎನ್ನುವ ಭಯಕ್ಕೆ ಹಳ್ಳಿಗರು ಜಮೀನನ್ನು ಸಿಕ್ಕಸಿಕ್ಕ ದರಕ್ಕೆ ಮಾರಲು ತೊಡಗಿದ್ದನ್ನು ಕಂಡು ಕಾರ್ಪೊರೇಷನ್ ತಾನೇ ಸಾರಾಸಗಟಾಗಿ ಕೊಂಡು ಸೈಟುಗಳನ್ನು ಮಾಡಲು ತೊಡಗಿದ್ದಷ್ಟೇ ಅಲ್ಲದೇ ಸರ್ಕಾರಿ ಅಧಿಕಾರಿಗಳನ್ನು ಕೊಳ್ಳಲು ಪ್ರೇರೇಪಿಸಿತು. ಅವರುಗಳೋ "ಅಯ್ಯೋ ಊರಾಚೆಯಿದೆ. ಮಟಮಟ ಮದ್ಯಾಹ್ನ ತಲೆ ಒಡೆದರೂ ಕೇಳುವವರಿಲ್ಲ" ಎಂದೆಲ್ಲಾ ಉದ್ಗರಿಸಿ ನಿರಾಕರಿಸಿದರು. ಆದರೂ ಸರ್ಕಾರದ ಒತ್ತಡ ಜಾಸ್ತಿಯಾಯಿತು. ನಮ್ಮ ತಂದೆ 'ರಾಜಾಜಿನಗರ ಐದನೇ ಬ್ಲಾಕಿನಲ್ಲಿ ಸ್ವಲ್ಪ ಮನೆಗಳಿವೆ. ಅಲ್ಲಿ ಕೊಳ್ಳಬಹುದು' ಎಂದು ಐನೂರು ರೂಪಾಯಿಕೊಟ್ಟು ಒಂದು ಸೈಟು ಕೊಂಡರು. ನಮ್ಮ ತಂದೆಯ ಕಸಿನ್ 'ಐನೂರು ರೂಪಾಯಿ ದುಬಾರಿಯಾಯಿತು' ಎಂದು ಮುನ್ನೂರು ರೂ ಕೊಟ್ಟು ಫಸ್ಟ್ ಬ್ಲಾಕಿನಲ್ಲಿ ಒಂದು ಸೈಟು ಕೊಂಡು ಮನೆಯನ್ನೂ ಕಟ್ಟಿಸಿಬಿಟ್ಟರು.

ಯಥಾಪ್ರಕಾರ ಗೃಹಪ್ರವೇಶದ ಆಹ್ವಾನಪತ್ರಿಕೆ ಮುದ್ರಿಸಬೇಕು. ವಿಳಾಸ ಏನೆಂದು ಬರೆಯುವುದು? ಸೈಟ್ ರಿಜಿಸ್ಟ್ರೇಷನ್ ಮಾಡಿದಾಗ ಸೈಟ್ ನಂಬರ್ ಮತ್ತು ಕೇತಮಾರನಹಳ್ಳಿ ಎನ್ನುವ ಗುರುತು ಕೊಟ್ಟಿದ್ದಾರೆ ಅಷ್ಟೆ. ಇನ್ನೂ ಮಣ್ಣಿನ ರಸ್ತೆಯಾದ್ದರಿಂದ ಅದಕ್ಕೆ ನಂಬರ್ ಕೊಟ್ಟಿಲ್ಲ. ಇವರ ಮನೆಯ ಪಕ್ಕ ಒಂದು ಹೆಂಚಿನ ಮನೆಯಿದೆ. ಅದು ಒಬ್ಬ ರೈತನದು. ಆತ ಜಮೀನನ್ನೆಲ್ಲಾ ಮಾರಿ ಮನೆಯನ್ನು ಮಾತ್ರ ಉಳಿಸಿಕೊಂಡಿದ್ದಾನೆ. ಏಕೆಂದರೆ ಆತನ ಚಿಕ್ಕ ಮನೆಯ ಮುಂದೆ ಸ್ವಲ್ಪ ವಿಶಾಲ ಜಾಗವಿದೆ. ಅಲ್ಲಿ ಆರು ಹಸುಗಳನ್ನು ಕಟ್ಟಿದ್ದಾನೆ. ಇಡೀ ರಸ್ತೆಯಲ್ಲಿ ಇವೆರಡೇ ಮನೆಗಳು!!! ಆಹ್ವಾನ ಪತ್ರಿಕೆಯಲ್ಲಿ

ಮನೆಯ ವಿಳಾಸ ಈ ರೀತಿ ಮುದ್ರಿಸಲಾಯಿತು. 'ರಾಜಾಜಿನಗರದ ಹೊಸ ಬ್ಲಾಕಿನ ಹೊಸ ಮನೆ. ಪಕ್ಕದ ಹೆಂಚಿನ ಮನೆಯಲ್ಲಿ ಆರುಹಸು ಕಟ್ಟಲಾಗಿದೆ'! ಈ ವಿಳಾಸವನ್ನಿಟ್ಟುಕೊಂಡು ಕರಾರುವಾಕ್ಕಾಗಿ ನೆಂಟರಿಷ್ಟರೆಲ್ಲಾ ಗೃಹಪ್ರವೇಶಕ್ಕೆ ಬಂದರು! ಅಷ್ಟೇ ಅಲ್ಲ ಒಂದೆರಡು ವರ್ಷಗಳವರೆಗೆ ಅವರಮನೆಯ ಅಂಚೆವಿಳಾಸವೂ ಇದೇ ಆಗಿತ್ತು. ಮನಿಯಾರ್ಡರ್ ಕೂಡಾ ತಪ್ಪದೇ ಕೈಸೇರಿದವು ಎಂದರೆ ಅಂಚೆ ಇಲಾಖೆಯ ಪವಾಡದ ಸಾಮರ್ಥ್ಯವನ್ನು ನೀವೇ ಊಹಿಸಿಕೊಳ್ಳಿ!!!


ಹೀಗೆಲ್ಲಾ ಪವಾಡಗಳನ್ನು ಮಾಡುತ್ತಿದ್ದ ಅಂಚೆ ಇಲಾಖೆ ನಾವು ಯಾರೂ ಊಹಿಸದಷ್ಟು ಬದಲಾಗಿ ಹೋಗಿದೆ. ಅದಕ್ಕೂ ಒಂದು 'ಇತ್ತೀಚೆಗೆ ನಡೆದ ಪ್ರಸಂಗ' ವನ್ನು ಹೇಳುತ್ತೇನೆ, ಕೇಳುವಂಥವರಾಗಿ. ನನ್ನ ಮೊಮ್ಮಗಳು ಲಂಡನ್ನಿನಲ್ಲಿ ಉದ್ಯೋಗವನ್ನು ಹಿಡಿದು ಅಲ್ಲಿಗೆ ಹಾರಲು ಸಿದ್ಧಳಾದಳು. ಹೊರಡುವ ಹಿಂದಿನ ದಿನ "ಅಜ್ಜಿ ನಾವು ಸಿಂಗಪುರದಲ್ಲಿದ್ದಾಗ ನೀವು ಇಲ್ಲಿಂದ ಎಷ್ಟು ಚೆಂದದ ಪತ್ರಗಳನ್ನು ಬರೆಯುತ್ತಿದ್ದಿರಿ. ನಾವು ಅದಕ್ಕಾಗಿ ಕಾಯುತ್ತಿದ್ದವು. ನಿಮ್ಮ ಕಾಗದ ಕೈಲಿ ಹಿಡಿದರೆ ನೀವೇ ಎದುರಿಗೆ ಕುಳಿತು ಮಾತಾಡಿದಂತೆನಿಸುತ್ತಿತ್ತು. ಈ ಭಾವ ವಾಟ್ಸ್ ಆಪ್ ಮೆಸೇಜಿನಲ್ಲಿ ಬರಲ್ಲ. ನಾನು ಲಂಡನ್ನಿಗೆ ಹೋದ ಮೇಲೆ ಅಲ್ಲಿನ ಅಂಚೆ ವಿಳಾಸ ಕಳಿಸುತ್ತೇನೆ. ನೀವು ತಿಂಗಳಿಗೊಂದಾದರೂ ಪತ್ರ ಬರೆಯಿರಿ. ನಾನೂ ಬರೆಯುತ್ತೇನೆ" ಎಂದು ಹೇಳಿದಾಗ, ಅವಳ ಅಗಲುವಿಕೆಯ ನೋವು ದುಪ್ಪಟ್ಟಾದಂತೆನಿಸಿ ಇಬ್ಬರೂ ಮನಸೋ ಇಚ್ಛೆ ಅಳುತ್ತಾ ಅವಳಿಚ್ಛೆಯನ್ನು ಸ್ವೀಕರಿಸಿ "ಆಗಲಿ ಪುಟ್ಟಮ್ಮ" ಅಂತ ಮಾತುಕೊಟ್ಟುಬಿಟ್ಟೆ.

ಕೆಲವೇ ದಿನಗಳಲ್ಲಿ ನನ್ನ ವಾಟ್ಸ್ ಆಫ್‌ಪಿಗೆ ಅವಳ ವಿಳಾಸದ ಮೆಸೇಜ್ ಟಪ್ ಎಂದು ಬಂದು ಬಿತ್ತು! ಸರಿ ನನ್ನ ಪತ್ರ ಬರಹದ ಯಜ್ಞ ಪ್ರಾರಂಭವಾಗಿಯೇ ಹೋಯಿತು. ಅವಳು ಹೋದಮೇಲೆ, ಇಲ್ಲಿ ಮನೆಯ ಮೂಲೆಮೂಲೆಯಲ್ಲೂ ಶೂನ್ಯ ಆವರಿಸಿದ್ದು, ಅವಳ ರೂಮು ಭಣಭಣ ಅನ್ನುತ್ತಿರುವುದು, ಅವಳ ವಾಡ್ರೋಬು ಗೊಳೋ ಎಂದು ಅಳುತ್ತಿರುವುದು, ಅವಳು ಬೇಡವೆಂದು ಬಿಟ್ಟುಹೋದ ಕಿವಿಯ ಆಭರಣಗಳು, ಬಳೆಗಳ ಗೊಂಚಲುಗಳು, ಕಾಲಿನಗೆಜ್ಜೆಗಳು ತಮ್ಮ ಶಬ್ದವನ್ನೇ ಕಳೆದುಕೊಂಡು ತನ್ನೊಡತಿಗಾಗಿ ಕನವರಿಸುತ್ತಿರುವುದು, ಹೀಗೇ ಏನೇನೋ ವಿವರಿಸಿ, ಅವಳು ಅಲ್ಲಿ ಓದುತ್ತಾ ನಾಲ್ಕುಹನಿ ಕಣ್ಣೀರು ಸುರಿಸುವ ಚಿತ್ರವನ್ನು ಕಲ್ಪಿಕೊಳ್ಳುತ್ತಾ, ನಾನೂ ಕಣ್ಣೀರನ್ನು ತುಳುಕಿಸುತ್ತಾ, ನಾಲ್ಕುಪುಟಗಳ ಪತ್ರ ಬರೆದೆ. ಯಾವುದೋ ಜಮಾನಾದಲ್ಲಿ ತಂದಿದ್ದ Air Mail ಕವರ್ ಹುಡುಕಿ ಪತ್ರಹಾಕಿ ಶ್ರದ್ಧೆಯಿಂದ ಅವಳ ಮತ್ತು ನನ್ನ ವಿಳಾಸ ಬರೆದು, ಬ್ರಹ್ಮ ಬಂದು ಪ್ರಯತ್ನಿಸಿದರೂ ತೆರೆಯಲಾಗದಂತೆ ಬಲವಾಗಿ ಅಂಟಿಸಿ, ಮಗ ಆಫೀಸಿಗೆ ಹೊರಟಾಗ ಅವನ ಕೈಗಿತ್ತು 'ಪೋಸ್ಟಾಫೀಸಿನಲ್ಲಿ ಸ್ಟ್ಯಾಂಪನ್ನು ಕೊಂಡು ಅಂಟಿಸಿ ಪೋಸ್ಟ್ ಮಾಡಲು' ಹೇಳಿದೆ. ಮಗ ಅಚ್ಚರಿಯಿಂದ ನನ್ನ ಮುಖ ನೋಡುತ್ತಾ "ಅಮ್ಮ ಇದೀಗ ದುಬಾರಿಯಾಗಿದೆ ಗೊತ್ತಾ" ಅಂದ. ನಾನು 'ನನಗ್ಯಾವುದೂ ಲೆಕ್ಕಕ್ಕೇ ಇಲ್ಲ' ಎನ್ನುವ ಫ್ಯಾಂಟಮ್ ಪೋಸ್ ಕೊಟ್ಟು "ಆಗಲಿ ಐನೂರು ರೂ ಆದರೂ ಚಿಂತೆಯಿಲ್ಲ. ಅದು ನನ್ನ ಮೊಮ್ಮಗಳಿಗಿಂತ ಹೆಚ್ಚೇನಲ್ಲ" ಅಂತ ದಬಾಯಿಸಿದೆ. ಪಾಪ! ಮಾತೃ ವಾಕ್ಯಪರಿಪಾಲಕ ಮಗ ಸುಮ್ಮನೇ ತೆಗೆದುಕೊಂಡು ಹೋದ. ಸಂಜೆ ಮನೆಗೆ ಬಂದವನೇ ನಾಕೊಟ್ಟ ಕವರನ್ನು ನನ್ನ ಟೇಬಲ್ ಮೇಲೆ ಟಪ್ ಎಂದೆಸೆದು" ಪೋಸ್ಟಾಫೀಸಿನಲ್ಲಿ ನನಗೆಷ್ಟು ಅವಮಾನವಾಯಿತು ಗೊತ್ತಾ? ಅವರೆಲ್ಲಾ 'ಇದೇನ್ಸಾರ್ ಇಮೇಲು ವಾಟ್ಸ್ಯಾಪು ಕಾಲದಲ್ಲಿ ಈ ಕಾಗದ ತಂದಿದೀರಿ 'ಅಂತ ನಕ್ಕರು ಗೊತ್ತಾ! ಮೂವತ್ತು ವರ್ಷದಿಂದ ಐಟಿ ಫೀಲ್ಡಿನಲ್ಲಿ ಕೆಲಸಮಾಡುತ್ತಿರುವ ನನಗೆ ಹೇಗಾಗಿರಬೇಡ ಹೇಳು ? ಅದೂ ಅಲ್ದೆ

ಇದಕ್ಕೆ ಎರಡೂವರೆ ಸಾವಿರ ರೂಪಾಯಿ ಸ್ಟ್ಯಾಂಪ್ ಅಂಟಿಸಬೇಕಂತೆ! ಬೇಕಿತ್ತಾ ಇದೆಲ್ಲ"? ಅಂತ ಗುರಾಯಿಸಿದ!! ನಾನು ಮನಸ್ಸಿನಲ್ಲೇ ಅಂಚೆ ಇಲಾಖೆಗೆ ಶಾಪ ಹಾಕುತ್ತಾ ಸುಮ್ಮನಾದೆ!

ಆದರೂ ಪಾಪ ! ನೀವೇನೇ ಹೇಳಿ ಈ ಆಧುನಿಕ ಸಲಕರಣೆಗಳು ಬಂದು ಮನುಷ್ಯನ ಭಾವಕೋಶಗಳನ್ನೆಲ್ಲಾ ಬರಡು ಮಾಡಿಬಿಟ್ಟಿದೆ. ಒಂದು ಕಾಲದಲ್ಲಿ ಪತ್ರಿಕೆಗಳಿಗೆ ಕಥೆ, ಕವನ, ಲೇಖನಗಳನ್ನು ಕಳಿಸಿ, ಸಂಪಾದಕರ ಪತ್ರಕ್ಕಾಗಿ ಜಾತಕ ಪಕ್ಷಿಯಂತೆ ಕಾಯುತ್ತಾ, 'ನಿಮ್ಮ ಬರಹ ಸ್ವೀಕಾರವಾಗಿದೆ' ಎನ್ನುವ ಸಂದೇಶ ಬಂದರೆ ಸ್ವರ್ಗಕ್ಕೆ ಮೂರೇಗೇಣು ಎನ್ನುವಂತೆ ಸಂಭ್ರಮಿಸುತ್ತಾ, 'ನಿಮ್ಮ ಬರಹವನ್ನು ಪ್ರಕಟಿಸಲು ಸಾಧ್ಯವಿಲ್ಲವೆಂದು ವಿಷಾದಿಸುತ್ತೇವೆ' ಎನ್ನುವ ಪತ್ರಬಂದರೆ, ಆಕಾಶವೇ ತಲೆಮೇಲೆ ಕಳಚಿ ಬಿದ್ದಂತೆ ಪರಿತಪಿಸುತ್ತಾ 'ಸಂಭ್ರಮ ಸಂಕಷ್ಟ' ಗಳ ತೂಗುಯ್ಯಾಲೆಯಾಡಿಸುತ್ತಿದ್ದ, ಅಂಚೆ ಇಲಾಖೆ ಈಗ 'ಹಣ ಶೇಖರಿಸುವ, ಬಡ್ಡಿಕೊಡುವ ಬ್ಯಾಂಕ್ ಆಗಿ ಕೂತಿದೆ.

ಹೊಸ ಸುಖವನ್ನು ಪಡೆಯಲು ಹಳೆಯ ಸುಖವನ್ನು ಕಳೆದುಕೊಳ್ಳಲೇ ಬೇಕಲ್ಲ!!!? ■




ಬೇಲೂರು ರಾಮಮೂರ್ತಿಯವರ ನೂತನ ಹಾಸ್ಯ ಸಂಕಲನ ರಂಗೋಲಿ ಮದುವೆ. ಇದರಲ್ಲಿ ಮುದ ಕೊಡುವ 28 ತಿಳಿ ಹಾಸ್ಯದ ಲಘು ಲೇಖನಗವೆ. ವಿಶೇಷವಾಗಿ ಬಿಸಿಬಿಸಿ ಗಸಗಸೆ ಪಾಯಸ, ಕಸವೆಂಬ ರಸಾನುಭವ ಯಾತ್ರೆ, ವನಭೋಜನದ ಒಳಗೆ ಹೊರಗೆ, ಉಪಚಾರವೆಂಬ ಸಂಸ್ಕೃತಿ ಮುಂತಾದ ಲೇಖನಗಳು ಹೆಚ್ಚು ಆಪ್ಯಾಯಮಾನವಾಗಿವೆ.

**ರಂಗೋಲಿ ಮದುವೆ**

ಪ್ರಕಾಶಕರು – ಪ್ರಿಸಂ ಬುಕ್ಸ್, ಬೆಂಗಳೂರು

ಪುಟಗಳು 144. ಬೆಲೆ ರೂ. 195/–

ಪುಸ್ತಕ ಕೊಳ್ಳಲು ಸಂಪರ್ಕಿಸಿ.

99023 69191 – orders@prismbooks.com

# ಹಿಂದಿ ಹಾಡಿ – ಕನ್ನಡ ಜೋಡಿ

ಅಣಕು ರಾಮನಾಥ್

ಕಹೀ ದೂರ್ ಜಬ್ ದಿನ್ ಢಲ್ ಜಾಯೇ
ಸಾಂಝ್ ಕೀ ದುಲ್ಹನ್ ಬದನ್ ಚುರಾಯೇ
ಚುಪ್ ಕೇ ಸೇ ಆಯೇ
ಮೇರೇ ಖಯಾಲೋಂಕೀ ಆಂಗನ್ ಮೇ
ಕೋಯೀ ಸಪನೋಂಕೇ ದೀಪ್ ಜಲಾಯೇ; ದೀಪ್ ಜಲಾಯೇ

ಎಲ್ಲೋ ದೂರ ಬೆಳಕಾಗಿರೆ ಕ್ಷೀಣ
ಸಂಜೆವಧುವು ತಾ ತನುವನು ಬಳಸೆ ಮೆಲ್ಲನೆ ಸಾಗೆ
ನನ್ನೀ ಕಲ್ಪನೆಯ ಅಂಗಳದಲ್ಲಿ
ಕನಸಿನ ದೀಪವನಾರೋ ಬೆಳಗೆ... ದೀಪವ ಬೆಳಗೇ...

ಕಭೀ ಯೂ ಹೀ ಜಬ್ ಹುಯೀ ಬೋಝಿಲ್ ಸಾಸೇ
ಭರ್ ಆಯೀ ಬೈಠೇ ಬೈಠೇ ಜಬ್ ಯೂ ಹೀ ಆಂಖೇ
ತಭೀ ಮಚಲ್ ಕೇ ಪ್ಯಾರ್ ಸೇ ಚಲ್ ಕೇ
ಛುಯೇ ಕೋಯೀ ಮುಝೇ ಪರ್ ನಜರ್ ನ ಆಯೇ; ನಜರ್ ನ ಆಯೇ

ಕೆಲವೊಮ್ಮೆ ಶ್ವಾಸವು ಭಾರವೆನಿಸಿರೆ
ಕುಳಿಕುಳಿತಂತೆಯೆ ಕಣ್ತುಂಬುತಿರೆ
ಕೂಡಲೆ ಮಿಡಿದು ಒಲವಲಿ ತುಡಿದು
ತಬ್ಬುವ ಅವಳು ಕಾಣಳು ಎನಗೆ; ಕಾಣಳು ಎನಗೇ

ಕಹೀ ತೋ ಯೇ ದಿಲ್ ಕಭೀ ಮಿಲ್ ನಹೀ ಪಾತೇ
ಕಹೀ ಸೇ ನಿಕಲ್ ಆಯೇ ಜನಮೋಂಕೇ ನಾತೇ
ಘನೀ ಥೀ ಉಲ್ಝನ್ ಬೈರೀ ಅಪನಾ ಮನ್
ಅಪನಾ ಹೀ ಹೋಕೇ ಸಹೇ ದರ್ದ್ ಪರಾಯೇ; ದರದ್ ಪರಾಯೇ

ಕೆಲವೊಮ್ಮೆ ಸೇರವು ಈ ಹೃದಯಗಳು
ಕೆಲವೆಡೆ ದೊರೆವುವು ಜನುಮದ ಜೋಡಿ
ಬಲು ಬಾಧೆಗೊಂಡು ಮನ ಖತಿಗೊಂಡು
ಎನಗಾಗದೆನ್ನಮನ ಪರರಿಗೆ ಮಿಡಿಯೆ; ಪರರಿಗೆ ಮಿಡಿಯೆ

ದಿಲ್ ಜಾನೇ ಮೇರೇ ಸಾರೇ ಭೇದ್ ಎ ಗೆಹರೇ
ಹೋ ಗಯೇ ಕೈಸೇ ಮೇರೇ ಸಪನೇ ಸುನಹರೇ
ಏ ಮೇರೆ ಸಪನೇ ಯಹೀ ತೋ ಹೈ ಅಪನೇ
ಮುಝುಸೇ ಜುದಾ ನ ಹೋಂಗೇ ಇನ್ ಕೇ ಏ ಸಾಯೇ ; ಇನ್ಕೇ ಏ ಸಾಯೇ

ಎನ್ನ ಮನ ತಿಳಿದಿದೆ ನನ್ನ ಎಲ್ಲ ಗುಟ್ಟು
ಹೇಗಾಯ್ತು ಸುವರ್ಣದ ಕನಸೆಂಬ ಪಟ್ಟು
ಈ ಸ್ವಪ್ನ ರಾಶಿ ಇದೇ ನನ್ನ ಆಸ್ತಿ
ಇದರ ನೆರಳು ಸಹ ಅಗಲದು ಎನ್ನ; ಅಗಲದು ಎನ್ನ. ■

# ಪುಕ್ಕಟ್ಟೆ ದೌಲತ್ತಗಳು !

ಇ.ಅರ್. ರಾಮಚಂದ್ರನ್

ಅಜ್ಜಿ ಟಿವಿ ನೋಡುತ್ತಾ 'ಇದೇನೋ ಅನ್ಯಾಯ!' ಅಂತ ಉದ್ಗರಿಸಿದರು.

'ಅಜ್ಜಿ! ಟೇಕ್ ಇಟ್ ಈಸಿ. ರಿಲ್ಯಾಕ್ಸ್. ಪ್ರೆಶರ್ ಮಾಡ್ಕೋ ಬೇಡ. ನಿನ್ನ ಹೆಲ್ತ್ಗೆ ಅದು ಒಳ್ಳೇದಲ್ಲ.'

'ನಮ್ಮ ಎಂಎಲ್ಎ ಗಳಿಗೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಐಪಿಎಲ್ ಕ್ರಿಕೆಟ್ ಮ್ಯಾಚ್ ನೋಡೋಕ್ಕೆ ಫ್ರೀ ಪಾಸ್ ಬೇಕಂತೆ. ಪಬ್ಲಿಕ್ ಜೊತೆ ಕ್ಯೂನಲ್ಲಿ ನಾವು ನಿಲ್ಲಕ್ಕಾಗಲ್ಲ, ನಾವು VIP. ನಮಗೆ ಐದು ಪಾಸ್ ಕೊಡಿ ಅಂತಾನೆ! ಎಷ್ಟು ನಾಚಿಗ್ಗೇಡಲ್ವಾ!'

'ಬಿಟ್ಟಿ ಕೇಳೋದು ಬಿಟ್ಟಿ ಇಸ್ಕೊಳೋದು ಇದೆಲ್ಲಾ ಇವರಿಗೆ ಮಾಮೂಲ್ ಅಜ್ಜಿ'.

'ಅದರಲ್ಲೂ ಅವನು ಎಂಎಲ್ ಏ ಅಲ್ವಾ! ಮಾತುಮಾತಿಗೆ ಅವ್ನು,' ನಾವು VIP, ಸಾಧಾರಣ ಪಬ್ಲಿಕ್ ಅಲ್ಲಾ' ಅಂತಾನಲ್ಲ!'

'ಅಜ್ಜಿ! ಇದೆಲ್ಲ ಆದ್ಮೇಲೆ ಕೊನೆಗೂ ಎಂಎಲ್ಏ ಗಳಿಗೆ ತಲಾ ಎರಡೆರೆಡು ಪಾಸ್ ಗಿಟ್ಟಿಸಿಬಿಟ್ರು. ಅದರ ಜೊತೆಗೆ ನಾವು ಸಾಧಾರಣ ಪಬ್ಲಿಕ್ ಜೊತೆ ಕೂರಲ್ಲ ನಾವು VIP... ನಮಗೆ ಬೇರೆ ಪ್ರತ್ಯೇಕ ಜಾಗ ಮಾಡಿ ಕೂರಿಸಿ ಎಂದರು. ಹಾಗೇ ಮಾಡಿಸಿಕೊಂಡು ಅವರು ಮ್ಯಾಚ್ ನೋಡಿದರು!'

'ಇವ್ರಿಗೆ ಕೈ ತುಂಬಾ ಸಂಬಳ ಬರುತ್ತೆ. ಟಿ. ಎ, ಡಿ. ಎ, ಅಂತಾನೂ ಕೊಡ್ತಾರೆ. ಮನೆ ಫ್ರೀ. ಕಾರು, ಡ್ರೈವರ್, ಫೋನ್, ಆಳು, ಕಾಳು ಎಲ್ಲಾನೂ ಫ್ರೀನೇ! ಆದ್ರೂ ಬಿಟ್ಟೀ ಪಾಸ್ ಕೊಡಿ ಅಂತ ಅಂಗಲಾಚಿ ಬೇಡ್ತರಲ್ಲೋ!

'ಅಜ್ಜಿ! ಅವ್ರು ಬೇಡ್ತಿಲ್ಲ ನಾವು VIP, ಇದು ನಮ್ಮ ಹಕ್ಕು ಅಂತ ಧಿಮಾಕು.'

'ನಮ್ಮ ಸೈಟ್ ಯಾವುದೊ ಕುಗ್ರಾಮದಲ್ಲಿದೆ. ನಾವು VIP. ಪಬ್ಲಿಕ್ ಜೊತೆ ಇರಕ್ಕಾಗಲ್ಲ ನಮಗೆ ಸಿಟಿಲಿ ಬದಲಾಯಿಸಿ ಕೊಡಿ ಅಂತ ಅವರಿಗೆ ಬೇಕಾದ ಜಾಗದಲ್ಲಿ ಸೈಟ್ ಹಾಕಿಸ್ಕೊಳ್ತಾರೆ ಮುಂದೆ. ನೋಡ್ಕೋ'

'ಆಗುತ್ತೆ ಅಜ್ಜಿ. ಆಗ್ಲೇ ಆಗಿದೆ. ಮುಂದೆ ಇನ್ನೂ ಆಗುತ್ತೆ.'

'ನಾಳೆ ಇದೂ ಬರುತ್ತೆ ... 'ನಾವು' ಜನ ಸೇವೆನೇ ಜನಾರ್ಧನ ಸೇವೆ 'ಅಂತ 24x7 ಹಗಲೂ ರಾತ್ರಿ ದುಡೀತೀವಿ. ನಮ್ಮ ಸುಖ ದುಃಖನ ಯಾರಾದ್ರೂ ವಿಚಾರ್ಸಿದಾರ? ಕಾಂತಾರ, ಬಾಹುಬಲಿ, ಕೆಜಿಎಫ್, ಧುರೆಂಧರ್ ಆ ತರಹ ಪಿಕ್ಚರ್‌ಗಳು ನಾವು ನೋಡೇ ಇಲ್ಲ...ಯಶ್ ಯಾರೂಂತ ಕೂಡ ನಮಗೆ ಗೊತ್ತಿಲ್ಲ. ನಮ್ಮ ಫ್ಯಾಮಿಲಿ ಮತ್ತು, ಫ್ರೆಂಡ್ಸ್, ಜೊತೆ ನೋಡೋಕ್ಕೆ ಈ ಪಿಕ್ಚರ್‌ಗಳನ್ನ ನಮಗಾಗಿ ಒಂದು ಸಾಯಂಕಾಲ ಫ್ರೀ ಶೋ ಮಾಡಲಿ. ನಾವು VIP... ಪಬ್ಲಿಕ್ ಜೊತೆ ಕ್ಯೂ ನಲ್ಲಿ ನಿಂತರೆ ಚೆನ್ನಾಗಿ ಕಾಣಿಸಲ್ಲ'

'ಇದು ಖಂಡಿತ ಬರುತ್ತೆ ಅಜ್ಜಿ '

'ಹಾಗೆ... ನಾವು ಮನೇವ್ರು ಸ್ನೇಹಿತರ ಜೊತೆ ಒಟ್ಟಿಗೆ ಬ್ರೇಕ್ಫಸ್ಟ್ ಮಾಡೋಣ ಅಂತ ಹೊರಟ್ರೆ ಎಲ್ಲ ಕಡೆ ರಷ್ಯೋ ರಷ್ಷು! ವಿದ್ಯಾರ್ಥಿ ಭವನ್‌ಗೆ ಹೋಗೋಣಾಂದ್ರೆ ಬೀದೀಲೇ ಟೋಕನ್ ಕೊಟ್ಟು ಹೋಟೆಲ್ ಮುಂದೆ ನಿಲ್ಲಿಸ್ತಾರೆ. ನಾವು VIPಯಾಗಿ ಅದನ್ನು ಹಿಡ್ಕೊಂಡು ಪಬ್ಲಿಕ್ ತರಾ ಕಾಯ್ಬೇಕಾ? ಎಂಟಿಆರ್ಗೆ ಹೋದ್ರೆ ಅಲ್ಲಿ ಪಬ್ಲಿಕ್ ಜೊತೆ ಒಂದು ವೈಟಿಂಗ್ ರೂಮಲ್ಲಿ ಕೂಡಿ ಹಾಕಿ ಅಲ್ಲಿ ಕಾಯಕ್ಕೆ ಹೇಳ್ತಾರೆ. VIP ಆಗಿ ಪಬ್ಲಿಕ್ ಮದ್ಯೆ ಕಾಯ್ತಾ ನಿಂತಿದ್ರೆ ನಮ್ಮ ಸ್ಟೇಟಸ್‌ಗೆ ಅದು ಚೆನ್ನಾಗಿರುತ್ತಾ? ನಮಗೇ ಒಂದು ಬೇರೆ ಕೋಣೇಲಿ ಸಪರೇಟಾಗಿ ಸರ್ವ್ ಮಾಡ ಬಹುದಲ್ಲಾ...? ಎಕ್ಸ್ಟ್ರಾ ರೂಮ್ 8'x10' ಮಾಡ್ಕೊಡೋದಕ್ಕೆ ಏನು ಬೇಕೋ ಅದು ಹೆಲ್ಪ್ ಮಾಡೋದಕ್ಕೆ ನಾವು ರೆಡಿ. ನಮ್ಮ

ಜನರಿಗೆ ಹೆಲ್ಪ್ ಮಾಡ್ದೆ ಬೇರೆ ಯಾರಿಗೆ ಮಾಡೋದು ಹೇಳಿ'



'ಅಜ್ಜಿ ಸರಿಯಾಗಿ ಹೇಳ್ದೆ. ಇದು ಬರುತ್ತೆ.'

'ಕೊನೆಗೆ ಇದೂ ಮುಂದೆ ಬರುತ್ತೆ ನೋಡ್ಕೋ'.

'ಏನಜ್ಜಿ?'

'ಪೊಲಿಟಿಕ್ಸ್‌ನಲ್ಲಿದ್ರೂ ನಮಗೆ ದೇವರು ದಿಂಡರಲ್ಲಿ ಬಹಳ ಜಾಸ್ತಿ ಭಕ್ತಿ. ನಮ್ ಕಿವಿಗೆ ದೇವರನಾಮ ಯಾವಾಗ್ಲೂ ಬೀಳ್ತಿದ್ರೆ ಜೀವನ ಸಾರ್ಥಕ ಅನ್ಸುತ್ತೆ. ಬೆಂಗಳೂರು ಫೋರ್ಟ್ ಹೈ ಸ್ಕೂಲ್ ಆವರಣದಲ್ಲಿ ರಾಮನವಮಿ ಒಂದು ತಿಂಗಳು ಭರ್ಜರಿಯಾಗಿ ನಡೆಯುತ್ತೆ. ದಿನಾ ಸಾಯಂಕಾಲ 3 ಘಂಟೆ ಸಂಗೀತ ನಡೆಯುತ್ತೆ. ಇಂಪಾದ ಶಾಸ್ತ್ರೀಯ ಸಂಗೀತ ಕೇಳಕ್ಕೆ ಯಾರಿಗೆ ಇಷ್ಟ ಇರಲ್ಲ? ನಾವು VIP ಯಾಗಿ ಅಲ್ಲಿ ಪಬ್ಲಿಕ್ ಮಧ್ಯೆ ಟಿಕೆಟ್, ಪಾಸ್ ಅಂತ ಓಡಾಡಿದ್ರೆ ಚೆನ್ನಾಗಿರುತ್ತಾ? ನಮಗೇ ಸ್ಟೇಜ್ ಹತ್ರ ಒಂದು ಸಣ್ಣ ಗಾಜಿನ ಎ ಸಿ ಕಂಪಾರ್ಟ್ಮೆಂಟ್ ಮಾಡಿ ಅಲ್ಲಿ ಒಳಗಡೆ ಸ್ಟಿರಿಯೊ ಸೌಂಡ್ ಸಿಸ್ಟಮ್ ಹಾಕಿಕೊಟ್ಟರೆ ಕೂತ್ಕೊಂಡು 'ರಾಮ, ಕೃಷ್ಣ' ಅಂತ ಸಂಗೀತ ಕೇಳ್ತಿವಿ. ಜನಾರ್ಧನ ಸೇವೆ ಅಂತ ಸೇವೆ ಮಾಡೋವ್ರಿಗೆ ಇದೊಂದು ಮಾಡ್ಕೊಡೋಕ್ಕೆ ಆಗಲ್ವ?'

'ಹೌದು'.

'ಕೊನೆಗೆ ಇದು ಆಗುತ್ತೆ. ಜನಸೇವೆ ಮಾಡ್ತಾ ಮಾಡ್ತಾ ಎಷ್ಟೋ ಸಲ ನಮ್ಮ ಮನೆ ಮಕ್ಕಳನ್ನೇ ಮರೆತುಬಿಡ್ತಿವಿ. ಎಲ್ಲ ಮನೆಗಳಲ್ಲಿ ಬೇಸಿಗೆ ರಜಕ್ಕೆ ಟ್ರಿಪ್, ಟೂರ್ ಮಾಡಿ ಬರ್ತಾರೆ. ನಮ್ಮ ಜನಸೇವೆ ಮಧ್ಯೆ ಮನೇಲಿ ಮಕ್ಕಳಿದ್ದಾರೆ ಅನ್ನೋದನ್ನ ಮರೆತುಬಿಡ್ತಿವಿ. ಅವರನ್ನು ಬೇಸಿಗೆ ರಜಕ್ಕೆ, ಸಿಮ್ಲಾಗೋ, ಕಾಶ್ಮೀರಕ್ಕೋ, ಕೊನೆ ಪಕ್ಷ ಗೋವಾಕ್ಕೋ ಒಂದು ವಾರ ಕರ್ಕೊಂಡು ಹೋಗಕ್ಕೆ 'ಮೇಕ್ ಮೈ ಟ್ರಿಪ್', ಟ್ರಾವೆಲ್ ನೆಕ್ಸ್ಟ್, ಈಸ್ ಮೈ ಟ್ರಿಪ್ ಅಥವಾ ಯಾತ್ರ ಅಂತಹ ಕಂಪನಿಗಳು, 'ನಿಮ್ಮನ್ನು ನಾವು ಮರೆತಿಲ್ಲ ಹೋಗಿ ಬನ್ನಿ' ಎಂದು ನಮಗೋಸ್ಕರ ಒಂದು ವಾರ ಹೋಟೆಲ್ನಲ್ಲಿ ರಿಸರ್ವ್ ಮಾಡಿ ಹೋಗಿಬರುವುದನ್ನು ಬುಕ್ ಮಾಡಿದರೆ VIP ಯಾಗಿ ಕೆಲಸ ಮಾಡಿದ್ದಕ್ಕೆ ಸಾರ್ಥಕ ಅಂತ ಅನ್ಸುತ್ತೆ.'

'ನಿಜನೇ ಅವ್ರು ಹೇಳೋದು, ಅಜ್ಜಿ. ಎಲ್ಲ ನಿಜಾನೆ. ಎಲ್ಲಾ ಫ್ರೀಯಾಗಿ ಇರ್ಬೇಕು ಅಷ್ಟೇ!

'ಅವ್ರಿಗೆ ಅದೇ ಮುಖ್ಯ ಕಣೋ!' ■

ದಂನಆ

- ✓ ನೋವು ತನಗಾದರೆ ಮಾತ್ರ ನೋವು. ಬೇರೆಯವರಿಗೆ ಆದರೆ ಅದು ಅವರ ಹಣೆ ಬರಹ.
- ✓ ಸಾವಿನವರೆಗೂ ಕೆತ್ತಿದರೂ ಪರಿಪೂರ್ಣ ಶಿಲ್ಪವಾಗದ ಏಕೈಕ ಶಿಲೆ ಮನುಷ್ಯ.
- ✓ ಇನ್ ದಿ ಎಂಡ್ ವಿ ಆರ್ ಆಲ್ ಸ್ಟೋರೀಸ್. ಮೇಕ್ ಇಟ್ ಎ ಗುಡ್ ಒನ್. ಓಕೆ?!
- ✓ ಅಪ್ಪನ ದುಡ್ಡಿನಲ್ಲಿ ಖರೀದಿ ಮಾಡಿದ ದುಬಾರಿ ಸುಗಂಧ ದ್ರವ್ಯಕ್ಕಿಂತ ದುಡಿದು ಬಂದ ಮಗಳ ಬೆವರಿನ ವಾಸನೆ ಅದೆಷ್ಟೊ ಶ್ರೇಷ್ಠ.
- ✓ ಪ್ರೊಆಕ್ಟಿವ್ ಪೀಪಲ್ ಕ್ಯಾರಿ ದೇರ್ ಓನ್ ವೆದರ್ ವಿತ್ ದೆಮ್.
- ✓ ನೀವು ನಿಮ್ಮ ತಪ್ಪುಗಳಿಂದ ಸಾಕಷ್ಟು ಕಲಿಯಲು ಸಾಧ್ಯ, ಅವುಗಳನ್ನು ನಿರಾಕರಿಸದೇ ಇದ್ದಲ್ಲಿ.
- ✓ ಸತ್ಯ ಯಾವಾಗಲೂ ಇದ್ದದ್ದೇ, ಸುಳ್ಳನ್ನು ಮಾತ್ರ ಹುಟ್ಟುಹಾಕಬೇಕಾಗಿ ಬರುತ್ತದೆ.
- ✓ ಯು ಕೆನಾಟ್ ಟಾಕ್ ಯುವರ್ ವೆ ಔಟ್ ಆಫ್ ಎ ಪ್ರಾಬ್ಲಮ್ ಯು ಬೆಹೇವ್ಡ್ ಯುವರ್ ವೆ ಇಂಟು ಇಟ್.
- ✓ ಸೋಲಿಗೆ ಹೆದರುವವನು ಗೆಲ್ಲಲು ಸಾಧ್ಯವೇ ಇಲ್ಲ.
- ✓ ಭಾಗ್ಯದ ಒಂದು ಬಾಗಿಲು ಮುಚ್ಚಿದರೆ ಇನ್ನೊಂದು ತೆಗೆಯುತ್ತದೆ. ಆದರೆ ಮುಚ್ಚಿದ ಬಾಗಿಲನ್ನೇ ದಿಟ್ಟಿಸಿ ನೋಡುತ್ತಾ ಕುಳಿತವರು ತೆರೆದ ಇನ್ನೊಂದು ಬಾಗಿಲನ್ನು ಗಮನಿಸುವುದೇ ಇಲ್ಲ.
- ✓ ಇಫ್ ಯು ಡೋಂಟ್ ಬ್ಯುಲ್ಡ್ ಯುವರ್ ಡ್ರೀಂ ಸಮ್‌ಒನ್‌ಎಲ್ಸ್ ವಿಲ್ ಹೈರ್ ಯು ಟು ಹೆಲ್ಪ್ ದೆಮ್ ಬ್ಯುಲ್ಡ್ ದೇರ್ಸ್.
- ✓ ಹಣ ಮಾತನಾಡತೊಡಗಿದಾಗ ಯಾರೂ ವ್ಯಾಕರಣದತ್ತ ಗಮನ ಹರಿಸರು.
- ✓ ನೀವು ಎಷ್ಟೇ ಒಳ್ಳೆಯವರಾಗಿದ್ದರೂ ಇನ್ನಷ್ಟು ಒಳ್ಳೆಯವರಾಗಲು ಅವಕಾಶ ಇದ್ದೇ ಇರುತ್ತದೆ.
- ✓ ಇಫ್ ಯು ಕೆನಾಟ್ ಬಿ ಎ ಗುಡ್ ಎಕ್ಸಾಂಪಲ್ ದೆನ್ ಯು ವಿಲ್ ಹ್ಯಾವ್ ಟು ಬಿ ಎ ಹಾರಿಬಲ್ ವಾರ್ನಿಂಗ್.
- ✓ ನೀವು ಜೊತೆಗಿದ್ದೀರಿ ಎಂದು ಯಾರು ಹೆಮ್ಮೆ ಪಡುತ್ತಾರೊ ಅವರ ಜೊತೆಗಿರಿ.
- ✓ ಇಫ್ ಯು ನೊ ವಾಟ್ ವಾಸ್ ಸೆಡ್ ಇನ್ ಯುವರ್ ಆ್ಯಬ್ಸೆನ್ಸ್ ಯು ವುಡ್ ಸ್ಟಾಪ್ ಸ್ಮೈಲಿಂಗ್ ವಿತ್ ಎ ಲಾಟ್ ಆಫ್ ಪೀಪಲ್.
- ✓ ಹಣದಿಂದ ಸುಖ ಕೊಳ್ಳಲಾಗದು ಎನ್ನುವವರಿಗೆ ಎಲ್ಲಿ ಶಾಪಿಂಗ್ ಮಾಡಬೇಕು ಎಂದು ಗೊತ್ತಿರುವುದಿಲ್ಲ. ■

# ಅಕ್ಷರಾಭ್ಯಾಸ–ಅಪ್ಪಿಕೋ

**✍ನಂದಿನಿ ಕಾಪಡಿ**

ಮುಂಗಾರಿನ ಜಿಟಿಜಿಟಿ ಮಳೆ. ಗೆಳತಿ ಜಾನು ಹೊರದೇಶದಿಂದ ಪರ್ಮನೆಂಟಾಗಿ ವಾಪಸು ಬಂದಿದ್ದೇನೆ. ನಿಮ್ಮೆಲ್ಲರೊಂದಿಗೆ ಕಾಲ ಕಳೆಯಬೇಕು ಮನೆಗೆ ಬನ್ನಿ ಎಂದು ಐದಾರು ಗೆಳತಿಯರನ್ನು ಮನೆಗೆ ಕರೆದಿದ್ದಳು. ಅವರ ಮನೆ ತುಂಬಾ ದೂರ. ದೊಡ್ಡ ಟ್ಯಾಕ್ಸಿ ಮಾಡಿಕೊಂಡು ಅಷ್ಟು ದೂರ ಹೋದೆವು.

ಜಾನು ತುಂಬಾ ಪ್ರೀತಿಯಿಂದಲೇ ಒಳ ಬರ ಮಾಡಿಕೊಂಡಳು. ಪತಿ ವಾಸು ಒಳಗೆ ಧ್ಯಾನ ಮಾಡುತ್ತಿದ್ದಾರೆ ಆಮೇಲೆ ಕೆಳಗೆ ಬರುತ್ತಾರೆ ಎಂದಳು. ಎಲ್ಲರ ಆಗಿನ ಈಗಿನ ಪರಿಸ್ಥಿತಿ ವಿಚಾರಿಸಿಕೊಂಡಳು. ನಮ್ಮ ಪಂಕಜ –ಪಂಕು "ಜಾನು, ಅಷ್ಟು ದೂರ ದಿಂದ ಬಂದಿದ್ದೇವೆ. ಕುಡಿಯಲು ಏನಾದರೂ ಕೊಡ್ತೀಯಾ ಎಂದಾಗಲೇ ಜಾನು ಒಳಗೆ ಹೋಗಿ ಟ್ರೋಪಿಕಾನ ಜ್ಯೂಸನ್ನು ತಂದಳು. ಕಾಫಿ ಇಲ್ವೇನೇ ಈ ಚಳಿಯಲ್ಲಿ ಜೂಸು ಬೇಡವಾಗಿತ್ತು ಎಂದು ಗೊಣಗಿಕೊಂಡಳು ಪಂಕು.

ಅಲ್ಲ, ನೀವು ಆ ದೇಶ ಬಿಟ್ಟು ಬಂದದ್ದು ಯಾಕೆ ಪಂಪಣ್ಣನ ಪ್ರತಾಪವೇ ಹೇಗೆ ಎಂದು ರಜನಿ ಕೇಳಿದಾಗ ಜಾನುವಿನ ಒಳಗೊಂದಲ ಮಳೆ, ಗುಡುಗಿನ ಆರ್ಭಟ ದಂತೆಯೇ ಹೊರ ಬಂದಿತು. ಅವಳ ಮಾತಿನಲ್ಲೇ ಕೇಳಿ....

ನಮ್ಮ ಪೀಳಿಗೆಯವರೇ ಮೂರ್ಖರು. ಶತ ಮೂರ್ಖರು. ತಂದೆ ತಾಯಿ ಮಾತೆಲ್ಲ ಕೇಳಿದ್ವಿ. ಟೀಚರ್ ಹೇಳಿದ್ದೆಲ್ಲ ಮಾಡಿದ್ವಿ. ಪಾಠ ಚೆನ್ನಾಗಿ ಓದಿದ್ವಿ. ಅಡಿಗೆ ಮಾಡೋದು ಕಲಿತವಿ. ಮದುವೆ ಮಾಡಿಕೊಂಡ್ವಿ. ಮನೆ ಕಟ್ಟಿದ್ವಿ. ಮಕ್ಕಳಾಯ್ತು ಅವರನ್ನ ಓದಿಸಿದ್ವಿ. ಸರಿ ಉಚ್ಚ ಶಿಕ್ಷಣ ಅಂತ ಪಶ್ಚಿಮದ ಕಡೆಗೆ ಗೂಡು ಬಿಟ್ಟು ಹೋದ್ರು. ಮದುವೆ ಮಾಡ್ಕೊಂಡ್ರು. ಅವ್ರಿಗೂ ಮಕ್ಕಳಾಯ್ತು. ಈಗ ನೆನಪಿಗೆ ಬಂದ್ರು ತಂದೆ ತಾಯಿ. ಎಲ್ಲೂ ಇಲ್ಲದ ಪ್ರೀತಿಯಿಂದ ಕರೆಸ್ಕೊಂಡ್ರು. ಇಲ್ಲಿಂದ ಪ್ರಾರಂಭವಾಯ್ತು ನಮ್ಮ ಅಕ್ಷರಾಭ್ಯಾಸ.



"ನಾವೆಲ್ಲರೂ ಅವಳ ಮುಖ ನೋಡಿದೆವು. ಎಂ ತಹ ಅಕ್ಷರಾಭ್ಯಾಸ ? ಬೇರೆ ಭಾಷೆ ಕಲಿತರೆ ಎಂದು ಏ ಅಂದರೆ ಆಯಾಕೆಲಸ. ಬಿ ಅಂದರೆ ಬೇಬಿ ಸಿಟರ್ಕೆಲಸ. ಸಿ ಅಂದರೆ ಕುಕ್ ಕೆಲಸ. ಎಲ್ಲರಿಗೂ ಥನ್ ಡಿಯಾಗಿ ರುಚಿಯಾದ ಅಡಿಗೆ ಮಾಡಿ ಹಾಕುವುದು. ಮಕ್ಕಳು ದೊಡ್ಡವರಾಗುವ ತನಕ. ಡಿ ಅಂದರೆ ಡ್ರೈವರ್. ಮೊದಲ ಮೂರು ನನ್ನ ಸುಪರ್ದಿನಲ್ಲಿ ನಡೆಯಿತು. ನಮ್ಮ ವಾಸುಗೆ ಡ್ರೈವರ್ ಕೆಲಸ. ವರ್ಷಾನುಗಟ್ಟಲೆ

ಭಾರತದಲ್ಲಿ ಎಡ ಭಾಗದಲ್ಲಿ ಡ್ರೈವ್ ಮಾಡಿ ಅಲ್ಲಿಗೆ ಹೋಗಿ ಮೂರು ಸಲ ಪರೀಕ್ಷೆ ಕೊಟ್ಟು ಕಡೆಗೂ ಅಲ್ಲಿನ ಡ್ರೈವಿಂಗ್ ಲೈಸೆನ್ಸ್ ಪಡೆದರು ವಾಸು. ಆದರೆ ವರ್ಷಗಟ್ಟಲೆ ಡ್ರೈವ್ ಮಾಡಿದ ಸಂಸ್ಕಾರ ಹೋಗಲಿಲ್ಲ ನೋಡು. ಎಲ್ಲೋ ಎಡ ಭಾಗಕ್ಕೆ ತಿರುಗಿ ಯಾವುದೋ ಕಂಭಕ್ಕೆ ಹೊಡೆದು ಡ್ರೈವಿಂಗ್ ಲೈಸೆನ್ಸ್ ಕ್ಯಾನ್ಸಲ್ ಆಯ್ತು. ಮಾಡಲು ಕೆಲಸವಿಲ್ಲ. ಹೊರಗೆ ಹೋಗಲು ಸಾಧ್ಯವಿಲ್ಲ. ಮಕ್ಕಳು ದೊಡ್ಡವರಾದರು. ಈಗ ನಮ್ಮ ಸಹಾಯ ಬೇಡ. ಪಂಪಣ್ಣನ ನೆವ ಬರುವ ಮುನ್ನವೇ ನಾವೇ ವಾಪಸು ಬಂದು ಬಿಟ್ಟೆವು."

ಈ ಎಬಿಸಿಡಿ ಕಥೆ ನನ್ನ ಮಗಳು ಸಾರಾ ಮತ್ತು ಮಗ ವಿಕ್ಕಿ ಇಬ್ಬರ ಮನೆಗಳಲ್ಲೂ ನಡೆಯಿತು.

ಈಗ ನಮ್ಮ ಕೊಂಕು ಪಂಕಜಾಳ ಸರದಿ. "ಅದೇನೇ, ಸಾ ರ ವಿಕ್ಕಿ ಹೀಗೆ ಹೆಸರು? ಸರಸ್ವತಿ, ವಿಕ್ರಂ ಹೆಸರುಗಳು ಎಷ್ಟು ಚೆನ್ನಾಗಿದ್ದವು !

ಜಾನು ಕೆಕ್ಕರಗಣ್ಣಿನಿಂದ ಒಮ್ಮೆ ಪಂಕಜಳ ಕಡೆ ನೋಡಿ "ಅಲ್ಲಲ್ಲ ಹಾಗೇ ಕಣೆ . ಅಲ್ಲಿನ ಜನರಿಗೆ ಸರಿ ಹೋಗುವ ಹಾಗೆ ಹೆಸರು ಇಟ್ಟಿಕೊತಾರೆ. passport ನಲ್ಲಿ ನಮ್ಮ ಹೆಸರುಗಳೇ ಇವೆ ಎನ್ನುತ್ತಾ ಯಜಮಾನರನ್ನು ಕರೆಯಲು ಮೇಲೆ ಹೋದಳು.

"ಸಾಕಪ್ಪ, ಈ ಜನರ ಬೂಟಾಟಿಕೆ" ಎಂದಳು ರಜನಿ. ಅವಳೋ ಅಪ್ಪಟ ಭಾರತೀಯಳು. ದೇಶ ಬಿಟ್ಟು ಸುತ್ತಾಡಲೂ ಹೊರ ದೇಶಕ್ಕೆ ಹೋಗದವಳು.

ಮಧು ತಾನು ತಂದಿದ್ದ ಚಕ್ಕುಲಿ ಕೋಡುಬಳೆ ಹೊರ ತೆಗೆದಳು. ಎಲ್ಲರೂ ಕುರುಕುತ್ತಾ ಇದರೊಂದಿಗೆ ಬಿಸಿ ಬಿಸಿ ಕಾಫಿ ಇದ್ದಿದ್ದರೆ ಎಂದು ಕಿರಿ ಕಿರಿ ಮಾಡುತಿದ್ದಂತೆ, ವಾಸು ಕೆಳಗೆ ಬಂದರು. ಕಾಲಿಗೆ ಹೊಸ ಮಾದರಿಯ ಸ್ಪೋರ್ಟ್ಸ್ ಷೂ! ಬ್ರಾಂಡೆಡ್ ಟೀ ಶರ್ಟ್. ಹಾಗೆಯೇ ಬ್ರಾಂಡೆಡ್ ಟ್ರ್ಯಾಕ್ ಪ್ಯಾಂಟ್. ಎಲ್ಲರನ್ನೂ ವಿಚಾರಿಸಿಕೊಂಡರು. "ಅಲ್ಲರೀ ವಾಸು, ನೀವು ಧ್ಯಾನ ಮಾಡುತ್ತಿದ್ದೀರಿ ಎಂದಳು ಜಾನ. ನೋಡಿದರೆ ಯಾವುದೋ ಸ್ಪೋರ್ಟ್ಸ್ ಆಡಲು ಅಥವಾ ನೋಡಲು ಹೋಗುತ್ತಿದ್ದೀರಾ" ಎಂದಳು ಮಧು. ಹಾಗೆಯೇ ತಾನು ತಂದಿದ್ದ ಚಕ್ಕುಲಿ ಕೋಡುಬಳೆಗಳನ್ನು ಅವರಿಗೆ ಕೊಟ್ಟಳು. ಚಕ್ಕುಲಿ ತಿನ್ನುತ್ತಾ ವಾಸು ಹೇಳಿದರು : ನೋಡಮ್ಮ ಮಧು! ಆ ದೇಶದ ಸಂಸ್ಕಾರ. ಯಾವಾಗಲೂ ಚೆನ್ನಾಗಿ ಡ್ರೆಸ್ ಮಾಡಿಕೊಂಡಿರಬೇಕು. ಧ್ಯಾನ ಮಾಡುವಾಗ ಶೂ ಹಾಕಿಕೊಂಡಿರಲಿಲ್ಲ. ಸಮಾಧಾನ ಆಯ್ತಾ ?"

"ಇಲ್ಲಿಗೆ ಬಂದ ಮೇಲೆ ಹೇಗೆ ಕಾಲ ಕಳೆಯುತ್ತಿದ್ದಿರಾ" ಎಂದು ನಾನು ಕೇಳಿದೆ. ನೋಡಿ, ನಮ್ಮ ದೇಶದಲ್ಲಿ ಕಾಲ ಕಳೆಯಲು ಬೇಕಾದಷ್ಟು ಸವಲತ್ತಿವೆ. ಈಗಲೇ ನೋಡಿ, ನಾನು ಆನ್ಲೈನ್ ಸಂಸ್ಕೃತ ಭಾಷೆ ಮಾತಾಡುವ ಕ್ಲಾಸ್ಸಿಗೆ ಹೊರಟಿದ್ದೇನೆ. ಆಮೇಲೆ ಸಿಗೋಣ" ಎಂದು ಮತ್ತೆ ಮೇಲೆ ಹೋದರು.

"ಪರವಾಗಿಲ್ಲ. ವಾಸು ತಮ್ಮ ಭಾರತೀಯತನ ಚೂರೂ ಬಿಟ್ಟಿಲ್ಲ" ಎಂದು ನನ್ನ ಅಂಬೋಣ ಜಾನು ಮೇಲೆ ನೋಡುತ್ತಾ ಪತಿದೇವರು ಒಳಗೆ ಹೋದರೆಂದು ಖಾತ್ರಿ ಮಾಡಿಕೊಂಡು "ವಾಸುವಿನ ಸಾಹಸಗಳನ್ನು ಕೇಳಿ. ಇಲ್ಲಿಗೆ ಬಂದ ಮೇಲೆ ಹೊತ್ತೇ ಹೋಗುವುದಿಲ್ಲ ಎನ್ನುತ್ತಾ ಸಿಕ್ಕ ಸಿಕ್ಕ ಸಾಹಸ ಮಾಡಿದರು. ಮೊದಲಿಗೆ ಬಂದದ್ದು "ಅಪ್ಪಿಕೋ" ಇಲ್ಲ ಇಲ್ಲ, ನನ್ನನ್ನೂ ಅಲ್ಲ, ಬೇರೆಯವರನ್ನೂ ಅಲ್ಲ. whatsapp ಫಾರ್ವರ್ಡ್‌ನಲ್ಲಿ ವೃಕ್ಷಗಳನ್ನು ಅಪ್ಪಿಕೋ. ಒಂದು ಅದ್ಭುತ ಅನುಭವವಾಗುತ್ತದೆ ಎಂದು

ಓದಿಕೊಂಡು ಮರು ದಿನವೇ ಹತ್ತಿರದ ಮರವೊಂದನ್ನು ಹುಡುಕಿಕೊಂಡು ಹೋದರು. ದೀರ್ಘವಾಗಿ ಉಸಿರು ತೆಗೆದು ಕೊಳ್ಳುತ್ತಾ ಎರಡೂ ಕೈಗಳನ್ನು ವಿಶಾಲವಾಗಿ ಚಾಚಿ, ಮರವನ್ನು ಅಪ್ಪಿಕೊಂಡು ಕಣ್ಣು ಮುಚ್ಚಿದರು. ಹತ್ತು ಗಳಿಗೆ ಕಳೆದಿರಬೇಕು. ಬೇಗೆ ಬೇಗ ಕೈಗಳನ್ನು ಹಿಂದಕ್ಕೆಳೆದುಕೊಂಡು "ಜಾನು, ಏನೋ ಕಚ್ಚಿದ ಹಾಗಾಯ್ತು ಎಂದು ಹೊರ ಬಂದರು. ನೋಡಿದರೆ ಸಾವಿರಾರು ಕೆಂಪು ಗೊದ್ದಗಳು ಮೈ ತುಂಬ ಆವರಿಸಿಕೊಂಡಿವೆ. ಬೇಗ ಬೇಗ ಝಾಡಿಸಿದರೂ ಹೋಗಲಿಲ್ಲ. ನೋಡ ನೋಡುತ್ತಾ ಇವರ ಮುಖ ಕೆಂಪಾಗಿ ಊದತೊಡಗಿತು. ಹೊರಗಿನಿಂದ ತಮಾಷೆ ನೋಡುತ್ತಿದ್ದ ಜನ ಬೇರೆ! ಒಬ್ಬ ವೃದ್ಧ ಮಹಿಳೆ "ಅಯ್ಯೋ ಪಾಪ, ನೋಡಲು ಚೆನ್ನಾಗೆ ಇದ್ದಾರೆ. ಆದರೆ ಈ ತರಹ ಹುಚ್ಚು. ನೋಡಿ ಅಮ್ಮ ಅವರನ್ನು ನಿಮಹಾನ್ಸ್‌ಗೆ ಕರೆದುಕೊಂಡು ಹೋಗಿ : ಎಂದು ಸಲಹೆ ಬೇರೆ ಕೊಟ್ಟರು. ಸರಿ, ಮನೆಗೆ ಹೋಗಿ, ಇವರು ಬೇರೆ ಬಟ್ಟೆ ಧ್ದರಿಸಿ, ಡಾಕ್ಟರ್ ಹತ್ತಿರ ಹೋಗುವವರೆಗೆ ಮೈ, ಮುಖವೆಲ್ಲ ಕೆಂಪಾಗಿ, ವಿಪರೀತ ಕಡಿತವಾಗಿ ಎಮರ್ಜೆನ್ಸಿಗೆ ಹೋಗಬೇಕಾಯಿತು. ಒಂದು ವಾರದ ಔಷಧಿಗಳು. ಅಲ್ಲಿಗೆ ಅಪ್ಪಿಕೋ ಭಾಗ ಒಂದು ಮುಕ್ತಾಯವಾಯಿತು.

ಎಲ್ಲರೂ ಮನಃಪೂರ್ತಿ ನಕ್ಕೆವು ! ಜಾನು ಮುಂದುವರೆಸಿದಳು. ಇನ್ನೊಂದು ವಾಟ್ಸ್ಯಾಪ್ ಫಾರ್ವರ್ಡ್ ಬಂತು. ಗೋವನ್ನು ಅಪ್ಪಿಕೋ ಎಂದು.

ಈ ಊರಿನಲ್ಲಿ ಈಗ ಹಸು ಕಾಣಿಸುವುದೇ ಅಪರೂಪ. ಹಾಗೂ ಹುಡಿಕಿಕೊಂಡು ಒಬ್ಬ ಗೊಲ್ಲನ ಪರಿಚಯ ಮಾಡಿಕೊಂಡು ಬಂದರು. ಪಂಚಮಿಯ ದಿನ. ಬೆಳ್ಳಂಬೆಳಿಗ್ಗೆ ಸ್ನಾನ ಮಾಡಿ, ಮಡಿ ಪಂಚೆ ಸೀರೆ ಧರಿಸಿ ಗೊಲ್ಲನ ಮನೆಗೆ ಹೋದೆವು. ಗೊಲ್ಲ ನವನೀತ್ ನಮ್ಮ ಕಡೆ ನೋಡಿ ಹಸುವನ್ನು ಪೂಜೆ ಮಾಡಲು ಕೊಡುತ್ತೇನೆ. ಆದರೆ ಸಾವಿರ ರೂಪಾಯಿ ಮೊದಲು ಕೊಡ ಬೇಕು ಅಂದು ಕಂಡೀಶನ್' ಹಾಕಿದ. ಮನಸ್ಸಿನಲ್ಲಿ ಬೈದುಕೊಂಡೇ ಸರಿ ಎಂದರು ವಾಸು. ಬಹಳ ಭಕ್ತಿಯಿಂದ ಪುಣ್ಯಕೋಟಿ ಹಾಡನ್ನು ಹಾಡುತ್ತ "ತಾಯಿ ಗೋವೇ, ನೀನೇ ಪಾಲಿಸು" ಎನ್ನುತ್ತಾ, ಅರಿಶಿನ ಕುಂಕುಮ ಹೂವು ಪೂಜೆ ಮಾಡಿ, ಬಾಳೆ ಹಣ್ಣು ತಿನ್ನಿಸಿ ಅದರ ಬೆನ್ನು ಸವರಿ, ಅದರ ಮೈ ಅಪ್ಪಿಕೊಂಡರು. ಹಸುವಿನ ಶರೀರದಲ್ಲಿ 33 ಕೋಟಿ ದೇವರುಗಳೂ ವಾಸಿಸುತ್ತಾರೆ ಎನ್ನುತ್ತಾ ನಕ್ಕರು. ಮುಂದಿನ ಕ್ಷಣ ಆ ಹಸುವೋ ಜೋರಾಗಿ ಕಾಲೆತ್ತಿ ಇವರನ್ನು ಒದ್ದು ಬೀಳಿಸಿತು. ಬಟ್ಟೆಯೆಲ್ಲ ಸಗಣಿ! ಏಳಲು ಆಗುತ್ತಿಲ್ಲ. ನವನೀತನೇ ಎಬ್ಬಿಸಿ ಕೂರಿಸಿದ. ಸ್ವಾಮಿ ನಿಮಗೆ ಹುಚ್ಚೇ ? ಪೂಜೆ ಮಾಡಿದ್ರೆ ಸಾಕಾಗಿತ್ತು. ಅದನ್ನು ಅಪ್ಪಿಕೊಳ್ಳಲು ಯಾಕೆ ಹೋದಿರಿ ಎಂದ. ಒಂದು ನಿಮಿಷ ಇವರು ಗಾಬರಿಯಾಗಿದ್ದರು. ನವನೀತನ ಹೆಂಡತಿ ಒಳಗಿನಿಂದ ಕಾಫಿ ತಂದುಕೊಟ್ಟಳು. ಸರಿ ಅವನ ಸಂಭಾವನೆ ಕೊಟ್ಟುಹೊರಟೆವು. ಇವರಿಗೂ ಕಾಲು ಕೈ ಎರಡೂ ಊದಿಕೊಂಡು ಸೀದಾ ಆಸ್ಪತ್ರಗೆ ಹೋದೆವು. fracture ಏನೂ ಇಲ್ಲ. ಬರೀ ಸ್ಪ್ರೈನ್ ಎಂದು ಕಳಿಸಿದರು ಅಲ್ಲಿಗೆ ಮುಗಿಯಿತು ಅಪ್ಪಿಕೋ ಕಥೆ ಶಾಶ್ವತವಾಗಿ.."


ನಮ್ಮ ಪಂಕುವಿಗೆ ಹಸಿವಾಗಿತ್ತು . ಜಾನು ಏನು ಅಡಿಗೆ ಮಾಡಿದೀಯೆ ಎಂದು ಅಡಿಗೆ ಮನೆಗೇ ಹೋದಳು. ಜನು ನಗುತ್ತ ಸುರ್ಪ್ರೈಸ್ ಎನ್ನುತ್ತಲೇ ಮೊಬೈಲಿನಲ್ಲಿ ಬರೆಯಲು ಶುರು ಮಾಡಿದಳು. ಹತ್ತೇ ನಿಮಿಷಗಳಲ್ಲಿ swiggy ಹುಡುಗ ಬಂದ. mcdonald ನ ದೊಡ್ಡ ಚೀಲದಿಂದ, ಬರ್ಗರ್, ಫ್ರೆಂಚ್ ಫ್ರೈಸ್ ಮುಂತಾದುವುಗಳನ್ನು ತೆಗೆದ. ದೊಡ್ಡ coke ಬಾಟಲುಗಳೂ ಹೊರ ಬಂದವು.

ನಿಮಗೋಸ್ಕರ ಪನೀರ್ ಟಿಕ್ಕಾ ಮಸಾಲಾ burgers ತರಿಸಿದ್ದೀನಿ. ತಿನ್ನಿ ಅನ್ನುತ್ತಾ

ತಟ್ಟೆ ಚಮಚಗಳನ್ನು ತಂದಳು. ಅಯ್ಯೋ ಕರ್ಮ ! ಮನೆಯಲ್ಲಿ ಒಂದು ಅನ್ನ ಸಾರು ಮಾಡಿದ್ದರೂ ನಡೆಯುತ್ತಿತ್ತು ಈ ಹಾಳು ಬರ್ಗರ್ ಯಾರು ತಿನ್ನುತ್ತಾರೆ ಎಂದು ಮುಖ ಸಿಂಡರಿಸಿಕೊಂಡಳು. ಪಾಪ ಜಾನು ನಾನು ಅಡಿಗೆ ಮಾಡುತ್ತಾ ಕೂತಿದ್ದರೆ ನಿಮ್ಮ ಜೊತೆ ಹರಟೆ ಹೇಗೆ ಸಾಗುತ್ತಿತ್ತು ಎಂದು ಸಮಾಧಾನ ಹೇಳಿದಳು. ವಾಸು ಕೆಳಗೆ ಬಂದರು. ಎಲ್ಲರೂ ಬರ್ಗರ್ ಮುಜುಗರ ಪಟ್ಟಿಕೊಂಡೇ ತಿಂದೆವು. coke ಯಾರೂ ಕುಡಿಯಲಿಲ್ಲ. ಪಂಕು ಏಕಾದಶಿ ಎನ್ನುತ್ತಾ ಜಾರಿಕೊಂಡಳು.

ಊಟ ಆಯ್ತು. ಡ್ರೈವರ್ ನಾಗಣ್ಣ ಫೋನಾಯಿಸಿದ ಮಳೆಯಲ್ಲಿ ತುಂಬಾ ಟ್ರಾಫಿಕ್ ಜಾಮ್ ಆಗಿದೆ' ಹೋಗೋಣ ಎಂದು. ಸರಿ, ಎಲ್ಲರೂ ಬೈ ಬೈ ಹೇಳಿ ಟ್ಯಾಕ್ಸಿಯಲ್ಲಿ ಕುಳಿತೆವು. ಹೋಗುವ ಮುನ್ನ ವಾಸು selfy ತೆಗೆದರು.

ಇನ್ನೂ ಅರ್ಧ ಕಿಲೋಮಿಟರೂ ಹೋಗಿರಲಿಲ್ಲ. ಪಂಕು ಡ್ರೈವರ್ ಗೆ ಗಾಡಿ ನಿಲ್ಲು. ಅಲ್ಲೇ ಉಡುಪಿ ಹೋಟಲು ಕಾಣುತ್ತಿದೆ ಅಂದಳು. ಎಲ್ಲರೂ ಇಳಿದೆವು. ಪಂಕು ಹೊಟ್ಟೆ ತುಂಬಾ ಬಿಸಿಬೇಳೆ ಭಾತ್ ಮೊಸರನ್ನ ತಿಂದರೆ, ನಾವುಗಳು ಬಿಸಿ ಬಿಸಿ ಈರುಳ್ಳಿ ಪಕೋಡ ಫಿಲ್ಟರ್ ಕಾಫಿ ಆಸ್ವಾದಿಸುತ್ತ "ಮುಂಗಾರು ಮಳೆಯಲ್ಲಿ ಬಜ್ಜಿ ಬೋಂಡಾದ ಸಮಾನವಿಲ್ಲ ಎನ್ನುತ್ತಾ. ಡ್ರೈವರ್ ಕರೆದು ಅವನಿಗೂ ತಿನ್ನಿಸಿದೆವು. abcd, ಅಪ್ಪಿಕೋ ಕಥೆಗಳನ್ನು ನೆನಪಿಸಿಕೊಂಡು ನಗುತ್ತ ಇನ್ನೊಂದೆರಡು ಪ್ಲೇಟು ಆಲೂ ಬೋಂಡಾ ತರಿಸಿದೆವು. ಮುಂಗಾರು ಮಳೆ ಸಂತೋಷದಿಂದ ಇನ್ನೂ ಜೋರಾಯಿತು. ■



# ಯುದ್ಧಕ್ಕೂ ರಿಮೋಟ್ ಕಂಟ್ರೋಲ್

ಗೀತಾ ಕುಂದಾಪುರ

ಇತ್ತೀಚೆಗೆ ಪೇಪರಿನಲ್ಲಿ ಬಂದ ಬಿಸಿ ಬಿಸಿ ಸುದ್ದಿಯೊಂದು ತಣ್ಣಗಾಗದೆ ಮನದಲ್ಲಿ ಹಬೆಯಾಡುತ್ತಿತ್ತು. ಟಿವಿಯ ರಿಮೋಟ್ ಕಂಟ್ರೋಲ್ ಯಾರ ಕೈಯಲ್ಲಿ ಇರಬೇಕೆಂಬ ವಿಷಯದಲ್ಲಿ ಗಂಡ, ಹೆಂಡತಿಗೆ ಜಗಳವಾಗಿ ಡೈವೋರ್ಸ್ ಆಯಿತಂತೆ!!? ಅದೇನು ಸುದ್ದಿ? ನಮ್ಮ ಮನೆಯಲ್ಲೂ ಆಗಾಗ ರಿಮೋಟ್ ಕಂಟ್ರೋಲಗಾಗಿ ಕದನಗಳು ನಡೆಯುತ್ತಿರುತ್ತದೆ, ಡೈವೋರ್ಸ್ ಆಗಿಲ್ಲವಷ್ಟೆ' ಎಂದು ಹೂಂಕರಿಸಿದರು ಪತಿ ಪರಮೇಶ್ವರ. ಅದೇ ಅದೇ ಹಳಸಲು ಸುದ್ದಿಯನ್ನು ಕನ್ನಡ, ಮಲಯಾಳಂ, ಹಿಂದಿ, ಇಂಗ್ಲೀಷ್ ಭಾಷೆಯಲ್ಲಿ ಕೇಳುವ ಗಂಡನ ಅಭ್ಯಾಸಕ್ಕೆ ಬೇಸತ್ತು ? ರಿಮೋಟ್ ಎಲ್ಲಿದೆ ಕೊಡ್ರಿ' ಎಂದು ಹಲವು ಸಲ ನಾನು ಕೂಗಾಡಿದ್ದೆ ಎಂದು ಒಪ್ಪಿಕೊಳ್ಳುತ್ತೇನೆ. ನಾನು ನೋಡುವ ರಿಯಾಲಿಟಿ ಶೋಸ್ ಬಗ್ಗೆ ಚೂರೂ ಉತ್ಸಾಹ ತೋರಿಸದೆ ? ಇದೆಂತದು ಮಾರಾಯ್ತಿ? ಸ್ವಲ್ಪವೂ ಸಿರಿಯಸ್ ಇಲ್ಲ ನೀನು, ಯುದ್ಧ ಎಲ್ಲಿಯವರೆಗೆ ಬಂತು ಅಂತ ನೋಡ್ಬೇಕು, ರಿಮೋಟ್ ಕೊಡು' ಎಂದ ನನ್ನ ಗಂಡನ ಸಿಟ್ಟನ್ನು ಕ್ಯಾರ್ ಮಾಡದೆ ಜಗಳವಾಡಿದ್ದಿದೆ. ನಮ್ಮ ಜಗಳವೀಗ ಕದನ ವಿರಾಮದಲ್ಲಿದೆ, ಮಧ್ಯಾಹ್ನ 2 ರಿಂದ 4 ಗಂಟೆಯವರೆಗೆ ಮತ್ತು ರಾತ್ರಿ 9ರ ನಂತರ ರಿಮೋಟ್ ಕಂಟ್ರೋಲ್ ನನ್ನ ಹತ್ತಿರವೆಂದು, ಉಳಿದ ಸಮಯದಲ್ಲಿ ನನ್ನ ಗಂಡನ ಕಸ್ಟಡಿಯಲ್ಲಿರಬೇಕೆಂಬ ಅಲಿಖಿತ ನಿಯಮಕ್ಕೆ ಇಬ್ಬರೂ ಒಪ್ಪಿಕೊಂಡಿದ್ದೇವೆ. ಇಷ್ಟಾದರೂ ಸೋಫಾದ ಕೆಳಗೆ, ಸೀಟಿನ ಕೆಳಗೆ, ಅಡಿಗೆ ಮನೆಯ ಪ್ಲಾಟಫಾರ್ಮನ ಮೇಲೆ, ಎಲೆಕ್ಟ್ರಿಕಲ್ ವಾಕರ್ ಪಕ್ಕದಲ್ಲಿ ಅಡಗಿ ಕುಳಿತು ನಮ್ಮ ಜಗಳಕ್ಕೆ ರಿಮೋಟ್ ಕಂಟ್ರೋಲ್ ಹೇತುವಾಗಿದ್ದಿದೆ.

ಈ ದರಿದ್ರದ ರಿಮೋಟ್‌ನಿಂದಲೇ ಇಷ್ಟೆಲ್ಲಾ ಆಯ್ತು ಮಾರಾಯ್ತಿ' ಎಂದು ಏದುಸಿರು ಬಿಡುತ್ತಾ ಬಂದರು ಸ್ವಲ್ಪ ಹೆಚ್ಚೆನಿಸುವಷ್ಟು ದೇಹ ತೂಕದ ಸುಶೀಲಕ್ಕ ? ಬೆಳಿಗ್ಗೆ, ಬೆಳಿಗ್ಗೆ ಗೌಜೇಕೆ?' ಎಂದೆ.. ಸ್ವಲ್ಪ ಸುಧಾರಿಸಿಕೊಂಡು ವಿವರಿಸಿದರು. ರಜೆಗೆ ಅವರ ಮೊಮ್ಮಕ್ಕಳೆಲ್ಲಾ ಬಂದಿದ್ದರು. ಅವರದ್ದೇ ಭಾಷೆಯಲ್ಲಿ ಹೇಳಬೇಕೆಂದರೆ ? ಒಂದಕ್ಕಿಂತ ಒಂದು ಪೋಕರಿ ಮಕ್ಳು' ಇಷ್ಟು ದಿವಸ ಗಂಡ ಹೆಂಡತಿ ಇಬ್ಬರೇ, ಬೆಳಿಗ್ಗೆ ಟಿವಿಯಲ್ಲಿ ಟಿಟಿಡಿ, ಶಂಕರ ಚಾನಲ್, ಮಧ್ಯಾಹ್ನ ಕಾಮೆಡಿ ಸಿರಿಯಲ್, ಕತ್ತಲಾಗುತ್ತಿದ್ದಂತೆ ಭ್ಯಾಗ್ಯಲಕ್ಷ್ಮಿ, ಪುಟ್ಟಗೌರಿ, ಮತ್ಯಾವುದೋ ಅಳುಮುಂಜಿ ಸಿರಿಯಲ್ ನೋಡುತ್ತಾ ಮಿಕ್ಚರ್, ಚಕ್ಕುಲಿ, ಕೋಡುಬಳೆ, ಉಂಡೆ ಹೀಗೆ ಸಿಕ್ಕಿದ್ದನ್ನು ಬಾಯಿಗಿಡುತ್ತಿದ್ದರು. ಸೋಫಾದಿಂದ ಏಳಬೇಕೆಂದಿರಲಿಲ್ಲ, ಚ್ಯಾನಲ್ ಬದಲಾಯಿಸಲು ರಿಮೋಟ್ ಇದೆ, ತಿಂಡಿ ತಟ್ಟೆ ಕಾಲಿಯಾದರೆ ? ರೀ ಸ್ವಲ್ಪ ಹುರಿಗಾಳು ಕೊಡ್ರಿ' ಎಂದಾಗ ಕೊಡಲು ಗಂಡನಿದ್ದರು. ಮೊಮ್ಮಕ್ಕಳು ಬರುತ್ತಿದ್ದಂತೆ ಟೀವಿಯ ರಿಮೋಟ್ ಮೊಮ್ಮಕ್ಕಳ ಕೈಗೆ ಬಂತು. ಮೊಮ್ಮಕ್ಕಳು ಕಾರ್ಟೂನ್ ನೆಟವರ್ಕ, ಡಿಸ್ನಿ, ಸ್ಪೋರ್ಟ್ಸ್ ಚ್ಯಾನಲ್ ತಿರುಗಿಸತೊಡಗಿದವು. ಅಜ್ಜಿಯ ಕೈಗೆ ಸಿಗದಂತೆ ಮೊಮ್ಮಕ್ಕಳೇ ರಿಮೋಟ್‌ನ್ನು ಎಲ್ಲೋ ಬಚ್ಚಿಟ್ಟರು, ಅದಕ್ಕಾಗಿ ಮನೆಯಲ್ಲಿ ಯುದ್ಧ ನಡೆದಾಗ ಸಂಧಾನ ನಡೆದು ರಿಮೋಟ್ ಕಾರ್ನರ್ ಟೇಬಲ್ಲಿನ ಮೇಲೆಯೇ ಇಡಬೇಕೆಂಬ ಒಪ್ಪಂದವಾಯಿತು. ಮರುದಿನ ಬೆಳಿಗ್ಗೆ ಸುಶೀಲಕ್ಕನ ಕಣ್ಣಿಗೆ ರಿಮೋಟ್ ಕಾಣಿಸಿ ಸ್ವಲ್ಪ ಸಮಾಧಾನವಾಯಿತು, ಆದರೆ ? ರಿಮೋಟ್ ಏನೋ ಇತ್ತು ಮಾರಾಯ್ತಿ, ಆದ್ರೆ ರಿಮೋಟ್‌ನ ಬ್ಯಾಟರಿ ತೆಗೆದುಬಿಟ್ಟಿದ್ದಾವೆ, ಎಲ್ಲಿಯಂತ ಹುಡುಕುವುದು? ನನ್ನ ಕಿರಿ ಮೊಮ್ಮಗನಿದ್ದಾನಲ್ಲ ಅವನದ್ದೇ ಕಿತಾಪತಿ, ಬೆಳಿಗ್ಗೆ ಇಂದಿನ ಭವಿಷ್ಯವಾಣಿ ಕೇಳಲಾಗಲಿಲ್ಲ' ತುಳುಕಿದ ಕಣ್ಣೀರನ್ನು ನೈಟಿಯಿಂದ

ಒರೆಸಿಕೊಂಡರು.

ನಾವು ಟಿವಿಗೆ ಅಂಟಿಕೊಂಡಿದ್ದರೆ, ಟಿವಿ ರಿಮೋಟ್‌ಗೆ, ಟಿವಿ ಸರಿ ಇದ್ದು ರಿಮೋಟ್ ಸರಿ ಇಲ್ಲಾ ಅಂದ್ರೆ ಸಾವಿರಾರು ರೂಪಾಯಿ ಕೊಟ್ಟು ತಂದ ಟಿವಿ ವೇಸ್ಟ್. ರಿಮೋಟ್ ಕೆಲಸ ಮಾಡ್ಬೇಕೆಂದ್ರ ಬ್ಯಾಟರಿ ಬೇಕೇ ಬೇಕು, ಒಟ್ಟಿನಲ್ಲಿ ಒಂದು ತರಹದ ಸರ್ಕಲ್. ಇಂತಹ ಇಂಪಾರ್ಟೆಂಟ್ ರಿಮೋಟ್ ಗೆ ಆಯುಧ ಪೂಜೆಯ ಸಮಯದಲ್ಲಿ ಅರಿಶಿನ, ಕುಂಕುಮವಿಟ್ಟು ಪೂಜೆ ಮಾಡುವವರಿದ್ದಾರೆ, ರಿಮೋಟ್‌ಗೂ ಚಳಿ ಹಿಡಿಯುತ್ತದೆಂದು ಶಾಲೋ, ಸ್ವೆಟರೋ ಸುತ್ತುವವರಿದ್ದಾರೆ, ಒಂದು ಮನೆಯಲ್ಲಂತೂ ಪುಟ್ಟ ಫ್ರಾಕನ್ನು ಹೊಲಿದು ಹಾಕಿದ್ದರು.




ಟಿವಿಯ ರಿಮೋಟ್ ಕಂಟ್ರೋಲ್ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಬೇಕಾದರೆ ತಲೆ ಬಿಸಿಯಾಯಿತು, ಬೆಂಗಳೂರಿನಲ್ಲಿ ಮಂಗಳೂರಿನ ಸೆಖೆ ಮಾಮೂಲಾಗಿಬಿಟ್ಟಿದೆ, ನೀರಿಲ್ಲದಿದ್ದರೂ ಸುಧಾರಿಸಬಹುದು ಎಸಿ ಇಲ್ಲದೆ ಕಷ್ಟ ಎನ್ನುವಂತಾಗಿದೆ. ಎಸಿ ಏನೋ ತಣ್ಣಗೆ ಗೋಡೆಯ ಮೇಲೆ ಕುಳಿತಿತ್ತು, ಆನ್ ಮಾಡಲು ತಡಕಾಡಿದೆ, ಹುಡುಕಾಡಿದೆ ರಿಮೋಟ್‌ಗಾಗಿ, ಮನೆಯಲ್ಲಿರುವವರನ್ನೆಲ್ಲಾ ಮನದಲ್ಲೇ ಬೈದುಕೊಂಡೆ, ಇಷ್ಟ ದೇವರಿಗೆ ಮನದಲ್ಲೇ ಸಣ್ಣ ಮೊತ್ತದ ಹರಕೆಯೂ ಹೊತ್ತೆ. ಅರ್ಧಗಂಟೆ ಜಾಲಾಡಿದ ಮೇಲೆ ಗಂಡನ ದಿಂಬಿನ ಕವರ್ ಒಳಗೆ ಅವಿತಿದ್ದ ರಿಮೋಟ್‌ನ ಸ್ವಿಚ್ ಅದುಮುವುಷ್ಟರಲ್ಲಿ ಕಂಗಾಲಾಗಿದ್ದೆ. ಕಡೆಗೆ ಮನದಲ್ಲೊಂದು ಎದ್ದ ಪ್ರಶ್ನೆ ಪೆಡಂಭೂತವಾಗಿ ಎದುರು ನಿಂತಿತು, ಯಾವುದು ಇಂಪಾರ್ಟೆಂಟ್ ಎಸಿ ? ರಿಮೋಟ್ ?

ಇರಲಿ ಬಿಡಿ ರಿಮೋಟ್‌ನ ಜಮಾನ ಇದು, ಕಾರು, ಫ್ಯಾನ್, ಫ್ರಿಡ್ಜ್, ವಾಷಿಂಗ್ ಮೆಷಿನ್, ಆಟದ ಸಾಮಾನು ಹೀಗೆ ಎಲ್ಲದಕ್ಕೂ ರಿಮೋಟ್ ಕಂಟ್ರೋಲ್ ಬಂದಿದೆ. ದ್ರೋಣ್ ಫೋಟೋ ತೆಗೆಯಲು ಶುರು ಮಾಡಿ ಹಲವು ವರ್ಷಗಳಾದವು, ಅದನ್ನು ನೋಡಿ ಹೆದರಿ ಕೂಗಿಕೊಂಡ ಅಜ್ಜಿಗೆ ಕೆಳಗೆ ರಿಮೋಟ್ ತಿರುಗಿಸುತ್ತಿರುವ ದ್ರೋಣಾಚಾರ್ಯರನ್ನು ತೋರಿಸಿ ಸಮಾಧಾನ ಪಡಿಸಲು ಸಾಕು ಬೇಕಾಯಿತು. ಇತ್ತೀಚಿನ ಯುದ್ಧಗಳಲ್ಲೂ ದ್ರೋಣ್‌ಗಳದ್ದೇ ಮೇಲಾಟ, ಹಾರಾಟ, ಕಂಡಲ್ಲೆಲ್ಲಾ ಬಾಂಬ್ ಸಿಡಿಸುತ್ತಿದೆ, ಅದರ ರಿಮೋಟ್ ಹಿಡಿದಿರುವ ದ್ರೋಣಾಚಾರ್ಯರನ್ನು ಕಂಡವರಿಲ್ಲ.

ತಲೆಗೆ ನುಗ್ಗಿ ಬಂದ ಇಂತಹ ಆಲೋಚನೆಗಳನ್ನು ಗೆಳತಿ ರೂಪಳ ಹತ್ತಿರ ಹೇಳಿದರೆ, ಅವಳೊ? ವಸ್ತುಗಳಿಗೆ ಮಾತ್ರ ರಿಮೋಟಾ? ಪಕ್ಕದ ಬೀದಿಯ ಪುರುಷೋತ್ತಮ ರಾಯರು

ನೆನಪಾಗಿಲ್ವಾ? ಅಷ್ಟೊಂದು ಎಗರಾಡುವ ಆಯಪ್ಪನ ರಿಮೋಟ್ ಕಂಟ್ರೋಲ್ ಬೆಟರ್ ಆಫ್ ಪಮ್ಮಿ" ಕಾಲೇಜಿನ ಪ್ರಿನ್ಸಿಪಾಲರಾಗಿ ಇತ್ತೀಚೆಗೆ ರಿಟೈರ್ ಆಗಿರುವ ಪುರುಷೋತ್ತಮ ರಾಯರಿಗೆ ನಮ್ಮಲ್ಲಿ ವಿಶೇಷ ಮಣೆ. ರಾಯರು ಖಡಕ್, ಎಂತೆಂತಹ ಕಾಲೇಜಿನ ಪುಂಡರನ್ನು ಹದ್ದುಬಸ್ಸಿನಲ್ಲಿಟ್ಟ ಖ್ಯಾತಿ ಅವರದ್ದು. ಸುತ್ತಮುತ್ತ ಏನೇ ಫಂಕ್ಷನ್ ನಡೆದರೂ ರಿಬ್ಬನ್ ಕತ್ತರಿಸುವ ಕೆಲಸಕ್ಕೆ ಅವರನ್ನೆ ಕರೆಸುವುದು. ಯಾವುದೇ ವಿಷಯವಿರಲಿ ಅರಳು ಹುರಿದಂತೆ ಮಾತಾಡಬಲ್ಲರು. ಆದರೆ ನಾನೂ ನೋಡಿದ್ದೆ, ಪುರುಷೋತ್ತಮ ರಾಯರ ಹೆಂಡತಿ ಪಮ್ಮಿ ಕಣ್ಣಸನ್ನೆ ಮಾಡಿದರೆ ಸಾಕು ಮಾತನ್ನು ಸಡನ್ನಾಗಿ ಸ್ವಾಪ್ ಮಾಡುವುದು, ನಗುತ್ತಿರುವವರು ಸಡನ್ನಾಗಿ ಗಂಭೀರವಾಗುವುದು ಎಲ್ಲಾ... ಇರಲಿ ಬಿಡಿ, ಧರ್ಮಪತ್ನಿಯೇ ತಾನೇ ರಿಮೋಟ್!! ಬೇರೆ ಯಾರೂ ಅಲ್ಲವಲ್ಲ.

ನಮ್ಮ ಮನೆಯಲ್ಲಿರುವವರು ಯಾರೂ ನನ್ನ ತಾಳಕ್ಕೆ ಕುಣಿಯುದಿರಲಿ, ನಾನು ಹೇಳಿದ್ದನ್ನು ಕೇಳಿಸಿಕೊಳ್ಳದಿರುವುದೇ ಹೆಚ್ಚು, ಇನ್ನು ನಾನು ರಿಮೋಟ್ ಕಂಟ್ರೋಲ್ ಆಗುವುದು ಅಷ್ವರಲ್ಲೇ ಇದೆ. ನಾನು ಹೇಳಿದಂತೆ ಅಲೆಕ್ಸಾ ಮಾತ್ರ ಕೇಳುತ್ತದೆ, ? ಅಲೆಕ್ಸಾ ಪ್ಲೇ' ಎಂದಾಗ ಗೊತ್ತಿರುವ ಹಾಡನ್ನು ಹಾಡಿ ಬಿಡುತ್ತದೆ, ಅದಾದರೂ ಇದೆಯಲ್ಲ ಎಂದು ಖುಷಿಯಾಯಿತು.

ಇಂತಹ ವರಿ'ಯಲ್ಲೇ ತಲೆ ಕೆಡಿಸಿಕೊಳ್ಳುತ್ತಿರುವಾಗಲೇ ದಕ್ಷಿಣ ಕೊರಿಯಾಗೆ ಹೋಗಿ ಬಂದೆ. ಟೆಕ್ನಾಲಜಿಯಲ್ಲಿ ಅತ್ಯಂತ ಮುಂದಿರುವ ದೇಶ, ಎಷ್ಟು ಮುಂದಿದೆಯೆಂದರೆ ಅಲ್ಲಿನ ಟಾಯ್ಲೆಟ್ಟಿನಲ್ಲೂ ರಿಮೋಟ್ ಕಂಟ್ರೋಲ್ ಇದೆ. ಅಲ್ಲಿನ ಕಮೋಡ್ ಪಕ್ಕದಲ್ಲಿ ರಿಮೋಟ್ ಕಂಟ್ರೋಲ್ ಇದೆ, ಅರ್ಥವಾಗದ ಭಾಷೆಯಲ್ಲಿ ಇನ್‌ಸ್ಟ್ರಕ್ಷನ್, ಅದರೊಂದಿಗೆ ಚಿಕ್ಕ ರೇಖಾ ಚಿತ್ರಗಳು. ಗಾಬರಿಯಾಯಿತು, ಅಲ್ಲದಿದ್ದರೂ ರಿಮೋಟ್ ಕಂಟ್ರೋಲ್ ಮೇಲೆ ಒಂದು ತರಹದ ಸಿಟ್ಟಿತ್ತು, ಈಗ ಅದು ಟಾಯ್ಲಿಟ್‌ಗೂ ಕಾಲಿಟ್ಟಿದೆ!! ಅದೂ ಅರ್ಥವಾಗದ ಭಾಷೆಯಲ್ಲಿದೆ. ಪಕ್ಕದಲ್ಲಿ ಅಂಟಿಸಿರುವ ಚೀಟಿ ಕಣ್ಣಿಗೆ ಬಿತ್ತು, ಅದರಲ್ಲಿದೆ ಇಂಗ್ಲೀಷ್ ಶಬ್ಧಗಳು. ಸಧ್ಯ ಉಪಯೋಗಿಸುವ ಮೊದಲೇ ಓದಿಕೊಂಡೆ, ಅರ್ಥ ಮಾಡಿಕೊಂಡೆ. ಸಧ್ಯ, ರಿಮೋಟನ್ನು ಒಂದು ಕಡೆ ಫಿಕ್ಸ್ ಮಾಡಿ ಇಟ್ಟಿದ್ದರು, ಇಲ್ಲವಾದರೆ ಟಾಯ್ಲೆಟ್‌ನಲ್ಲಿ ರಿಮೋಟನ್ನು ಹುಡುಕುವುದೇ ಒಂದು ಅಧ್ವಾನವಾಗುತ್ತಿತ್ತು.

ರಿಮೋಟ್ ಕಂಟ್ರೋಲನ್ನು ಕಂಡು ಹಿಡಿದ ವಿಜ್ಞಾನಿಗಳು ತರಕಾರಿ ಕತ್ತರಿಸಲು, ಕಾಯಿ ತುರಿಯಲು, ದೋಸೆ ಹೊಯ್ಯಲೂ ರಿಮೋಟ್ ಕಂಟ್ರೋಲ್ ಕಂಡು ಹಿಡಿದಿದ್ದರೆ ನಮ್ಮಂತಹ ? ಹೋಂ ಮೇಕರ್' ಜೀವನ ಹಗುರಾವಾಗುತ್ತಿತ್ತು. ಆದರೆ ಕೂತಲ್ಲಿಂದ ಏಳದೆ ದೇಹ ಭಾರವಾಗುತ್ತಿತ್ತೇನೋ. ■

ಗಂಡ ಗುರಗಳ ಬಳಿ ಹೋಗಿ ದೂರು ಹೇಳಿದ.
ನನ್ನ ಹೆಂಡತಿ ಮುಸುಕು ಹಾಕಿ ಮಲಗಿರುವಾಗ ಅವಳ ತಲೆಯ ಬಳಿ ಒಂದು ದಿವ್ಯ ಜ್ಯೋತಿ ಉರಿಯುತ್ತಿರುವ ಹಾಗೆ ಕಾಣುತ್ತೆ.
ಗುರುಗಳೇ ಇದರ ಅರ್ಥ ಏನು
ಗುರುಗಳು ಹೇಳಿದರು ಅದು ದಿವ್ಯ ಜ್ಯೋತಿಯೂ ಅಲ್ಲ ಏನೂ ಅಲ್ಲ
ಅವಳು ಮುಸುಕಿನೊಳಗೆ ನಿನ್ನ ಮೊಬೈಲ್ ಚೆಕ್ ಮಾಡ್ತಿರಬಹುದು
ಸ್ವಲ್ಪ ಹುಷಾರಾಗಿ ಗಮನಿಸು.

# ಕಥೆ ಹೇಳುವ ಕಲೆ

ಜಿ. ವಿ. ಅರುಣ


ಸ್ನೇಹಿತರು ಗುಂಪಿನಲ್ಲಿದ್ದಾಗ ಕಥೆ ಹೇಳುವುದು ನಿಮಗೆ ಕಷ್ಟವೋ ಸುಲಭವೋ? ನನ್ನ ಪ್ರಕಾರ ಕಥೆ ಬರೆಯುವುದಕ್ಕಿಂತ ಕಥೆ ಹೇಳುವುದು ಕಷ್ಟದ ಕೆಲಸ. ಏಕೆಂದರೆ ಕಥೆ ಹೇಳುವವರಿಗೆ, ಅವರ ಕಥೆಗೆ ಪ್ರತಿಕ್ರಿಯೆ ತಕ್ಷಣವೇ, ಅವರ ಎದುರಿಗೇ ಸಿಕ್ಕಿಬಿಡುತ್ತದೆ. ಇದು ಒಂದು ರೀತಿ ತಕ್ಷಣ ಡ್ರಾ, ತಕ್ಷಣ ಬಹುಮಾನವಿದ್ದಂತೆ. ನಾವು ಗೆಲ್ಲುತ್ತಿದ್ದೇವೋ ಸೋಲುತ್ತಿದ್ದೇವೋ ಎನ್ನುವುದು ಕ್ಷಣಕ್ಷಣಕ್ಕೆ ತಿಳಿಯುತ್ತಿರುತ್ತದೆ. ಹಾಗಾಗಿ ಕೇಳುಗರು ತನ್ಮಯರಾಗಿ ಕೇಳುವಂತೆ ಕಥೆ ಹೇಳುವ ಕಲೆಯನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಕಥೆಯ ಕೇಳುಗರು ನಯನಾಜೂಕು ತಿಳಿದವರೋ ಇಲ್ಲವೇ ಒರಟರೋ ಆಗಿರಬಹುದು. ಅವರನ್ನೆಲ್ಲ ನಿಭಾಯಿಸಿಕೊಂಡು ಕಥೆ ಹೇಳುವ ಚಾಕಚಕ್ಯತೆ ತಿಳಿದವನು ಗೆಲ್ಲುತ್ತಾನೆ. ಅವನಿಗೆ ಕೇಳುಗರ ಮುಖಭಾವವನ್ನು ಸೂಕ್ಷ್ಮವಾಗಿ ಗ್ರಹಿಸಿ, ಕಥಾಮಧ್ಯದಲ್ಲಿ ಕಥಾಪಥದ ತಿದ್ದಾಣಿಕೆ ಮಾಡಿಕೊಳ್ಳುವ ಚಾತುರ್ಯತೆ ಇರಬೇಕಾಗುತ್ತದೆ. ಇದು ಎಲ್ಲರಿಗೂ ಸಿದ್ಧಿಸಿರುವುದಿಲ್ಲ.

ಇವೆಲ್ಲಕ್ಕಿಂತ ಬಹಳ ಮುಖ್ಯವಾದ ಸಂಗತಿ ಏನೆಂದರೆ, ಕಥೆ ಹೇಳುತ್ತಿರುವಾಗ ಏನಾದರೂ ಒಂದು ಅಡಚಣೆ ಆಗಿಯೇಆಗುತ್ತದೆ. ಉದಾಹರಣೆಗೆ ಕಥೆಯನ್ನು ಕೇಳುತ್ತಿರುವವರಲ್ಲಿ ನಾವು ಕಥೆ ಹೇಳುವುದನ್ನು ಸಹಿಸದವರೂ ಇರುತ್ತಾರೆ; ಇಲ್ಲವೇ ಎಲ್ಲರ ದೃಷ್ಟಿ ಕಥೆ ಹೇಳುವವರತ್ತ ಇರುವುದನ್ನು ತಪ್ಪಿಸಿ, ಅದನ್ನು ತಮ್ಮತ್ತ ಸೆಳೆದುಕೊಳ್ಳುವ ತಾಮಸ ಮನದ ಕಥಾಘಾತಕರು ಇದ್ದೇಇರುತ್ತಾರೆ. ನಾವು ಕಥೆ ಹೇಳುತ್ತಿದ್ದಾಗ ಅಕಸ್ಮಾತ್ ಅಡಚಣೆಯಾದರೆ, ಅದನ್ನು ಪರಿಹರಿಸಿಕೊಂಡ ಅನಂತರ, "ಆಮೇಲೆ ಏನಾಯ್ತು...?" "ಮುಂದಿನ ಕಥೆ ಹೇಳು" ಎಂದು ಯಾರಾದರೂ ಕೇಳಿದರೆ, ನಾವು ಹೇಳುತ್ತಿರುವ ಕಥೆ ಎಲ್ಲರಿಗೂ ಹಿಡಿಸುತ್ತಿದೆ ಎನ್ನುವುದು ಸಾಬೀತಾಗಿರುತ್ತದೆ. ಅಂಥ ಕಥೆಯೇ ಉತ್ತಮ ಕಥೆಗಳಲ್ಲಿ ಒಂದು.

ಸಾಮಾನ್ಯವಾಗಿ ನಾವು ಸ್ನೇಹಿತರೆಲ್ಲರೂ ಉದ್ಯಾನದಲ್ಲಿ ನಿತ್ಯವೂ ಸಂಜೆ ವಾಯುವಿಹಾರದ ಅನಂತರ ಕಲ್ಲಿನ ದುಂಡುಮೇಜಿನ ಸುತ್ತ ಠಿಕಾಣಿಹೂಡಿ ಕೂರುತ್ತೇವೆ. ಆಗ ಯಾರಾದರೂ ಒಂದಲ್ಲ ಒಂದು ಕಥೆಯನ್ನು ಹೇಳುತ್ತಲೇ ಇರುತ್ತಾರೆ. ತಮ್ಮ ನೆಂಟರು ಹಿಮಾಲಯ ಪ್ರವಾಸದಲ್ಲಿ ಹಿಮಪಾತದಿಂದ ಬದುಕಿಬಂದ ಸಾಹಸಗಾಥೆಯೊ; ಹಿಂದಿರುಗದ ಗೋಳಿನ ಘಟನೆಯೋ; ಯಾರೋ ಡಿಜಿಟಲ್ ಅರೆಸ್ಟ್ ಆದ ಸುದ್ದಿಯೋ; ಹಾಗೆ ಫೋನ್ ಮಾಡಿದವರನ್ನೇ 'ಬಕರಾ ಮಾಡಿದೆ' ಎಂದು ಹೆಮ್ಮೆಯಿಂದ ಎದೆಯುಬ್ಬಿಸಿ ಹೇಳುವ ಪ್ರಸಂಗವೋ; ಅಥವಾ ಎಲ್ಲಕ್ಕಿಂತ ಮುಖ್ಯವಾಗಿ, ಯಾವುದೋ ಗುಲ್ಲು ಸುದ್ದಿಯೋ ಆಗಿರಬಹುದು. ಇದರಲ್ಲಿ ಗಂಡಸರು ಯಾವ ಹೆಂಗಸಿಗೂ ಹಿಂದೆಬೀಳುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ಗುಟ್ಟು. ಅದು ಪ್ರಾರಂಭವಾಗುವುದೇ "ನಿನ್ನೆ ಏನಾಯಿತು ಗೊತ್ತಾ !?" ಎನ್ನುವ ಚುಂಬಕ ಪೀಠಿಕೆಯಿಂದ.

ಮುಸ್ಸಂಜೆಯ ವಾಯುವಿಹಾರದ ಅನಂತರ ಮಾತುಕತೆಗೆ ಕುಳಿತಾಗ ಕಥೆ ಹೇಳುವುದನ್ನು ಕೇಳಿಸಿಕೊಳ್ಳಲು ಇಷ್ಟವಿಲ್ಲದೇ ಇರುವವರು, ತಕ್ಷಣ ಧಾರಾಳಿಗಳಾಗಿ ಉದ್ಯಾನದ ಆಚೆ, ನಾಲ್ಕುರಸ್ತೆ ಸೇರುವಲ್ಲಿ, ಮರಕ್ಕೆ ಕಟ್ಟಿರುವ ಟಾರ್ಪಾಲಿನ್ ಕೆಳಗೆ, ಆಗತಾನೆ ತೆರೆದುಕೊಳ್ಳುವ ಬೀದಿ ಪಾಕಶಾಲೆಯತ್ತ ದಾಪುಗಾಲು ಹಾಕುತ್ತಾರೆ. ಹಿಂದಿರುಗುವಾಗ ಅವರ ಎರಡು ಅರಳಿದ ಅಂಗೈಗಳಲ್ಲಿ ಹಿಡಿದ, ಹಳೆಯ ವೃತಪತ್ರಿಕೆಯಲ್ಲಿ ರಾರಾಜಿಸುತ್ತಿರುವ, ಘಮಘಮ ಎಂದು ಮೂಗನ್ನು ಅರಳಿಸುವ, ಈರುಳ್ಳಿಯ ಬಿಸಿಬಿಸಿ ಬೋಂಡ ಹಾಗೂ ಸಬ್ಸಿಗೆ ಸೊಪ್ಪಿನ ಆಂಬೊಡೆಗಳನ್ನು ನಮ್ಮ ಮುಂದೆ ಹಿಡಿದುಬಿಡುತ್ತಾರೆ.

ಅಷ್ಟು ಸಾಕು, ಕಥೆ ಹೇಳುತ್ತಿದ್ದವರು ಅದನ್ನು ನಿಲ್ಲಿಸಲು. ಕೇಳುಗರ ಕಿವಿಗಳು ತಾನಾಗಿಯೇ ಮುಚ್ಚಿಕೊಂಡು, ಅವರ ಮೂಗು ಆಘ್ರಾಣಿಸಿದ ಸುವಾಸನೆಯು ಬಾಯಲ್ಲಿ ನೀರೂರಿಸಲು ಉತ್ತೇಜಿಸಿಬಿಡುತ್ತದೆ. ತಕ್ಷಣವೇ ಆ ಸುವಾಸನಾಭರಿತ ಮೋಹಿನಿ ನಮ್ಮೆಲ್ಲರ ನಾಲಿಗೆಯ ಮೇಲೆ ನಲಿಯಲು ಪ್ರಾರಂಭಿಸಿಬಿಡುತ್ತಾಳೆ. ಅವಳು ಬಿಸಿಬಿಸಿಯಾಗಿದ್ದರಂತೂ ನಾಲಿಗೆಯ ಮೇಲೆ ಡಿಸ್ಕೋಡ್ಯಾನ್ಸು ಗ್ಯಾರಂಟಿ. ಕೊನೆಕೊನೆಗೆ ಆರಿದ ಆಂಬೊಡೆ ನಿಧಾನವಾಗಿ ಮೋಹಿನಿಯಟ್ಟಂ ಪ್ರಾರಂಭಿಸಿಬಿಡುತ್ತಾಳೆ. ಎಲ್ಲರೂ 'ಆದಷ್ಟು ಹೆಚ್ಚು ಇಂಥ ನೃತ್ಯಪ್ರದರ್ಶನವು ತಮ್ಮ ನಾಲಿಗೆಯ ಮೇಲೇ ಆಗಲಿ' ಎಂದು ಆಸೆಪಡುತ್ತಾರೆ. ಅದು ಹುಟ್ಟಿನಿಂದಲೇ ಬಂದಿರುವ ಮಾನವ ಸಹಜವಾದ ವಿಶಿಷ್ಟ ಗುಣ.



ಕುಮಾರವ್ಯಾಸನು ಬಹುಶಃ ಇಂಥ ಬಿಸಿಬಿಸಿ ಬೋಂಡ, ಅಂಬೊಡೆಗಳನ್ನು ಸವಿದಿದ್ದನೇನೋ. ಯಾಕೆಂದರೆ ಅವನು "...ಶಾರದೆಯೆ ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ" ಎಂದು ಪ್ರಾರ್ಥಿಸಲು ಯಾವುದಾದರೊಂದು ಅನುಭವ ಬೇಕಲ್ಲವೇ? ಆ ಶಾರದೆಯೂ ಬೋಂಡಪ್ರಿಯೆ ಎಂದು ನಿಸ್ಸಂಶಯವಾಗಿ ಹೇಳಬಹುದು. ಆಕೆ ಕುಮಾರವ್ಯಾಸನ ಜಿಹ್ವೆಯಲ್ಲಿ ಎಷ್ಟು ಚೆನ್ನಾಗಿ ನರ್ತಿಸಿದ್ದಾಳೆ ಎನ್ನುವುದಕ್ಕೆ 'ಕರ್ಣಾಟ ಭಾರತ ಕಥಾಮಂಜರಿ'ಯೇ ಸಾಕ್ಷಿ.

ಸಮೂಹದಲ್ಲಿ ಹೀಗೆ ತಿನ್ನುತ್ತಿರುವಾಗ, ಪುಟ್ಟ ಚೆಂಡಿನಾಕಾರದ, ಅತ್ಯಂತ ಆಕರ್ಷಕ ಸೆಳೆತದ, ಕಟ್ಟಕಡೆಯ ಬೋಂಡವನ್ನು ಹಳೆಯ ವೃತ್ತಪತ್ರಿಕೆಯಿಂದ ಬಾಚಿ ತೆಗೆದುಕೊಂಡ ಕೈಯನ್ನೂ ಅದು ಮಾಯವಾದ ಬಾಯನ್ನೂ ಇತರರೆಲ್ಲರೂ ಈರ್ಷ್ಯೆಯಿಂದ ನೋಡುತ್ತಾರೆ. ಆ ವೇಳೆಗಾಗಲೇ ಎಣ್ಣೆಯಿಂದ ಒದ್ದೆಯಾದ ವೃತ್ತಪತ್ರಿಕೆಯಲ್ಲಿ ಇನ್ನೇನಾದರೂ ಮಿಕ್ಕಿದೆಯೋ ಎಂದು ಎಲ್ಲರೂ ಕಣ್ಣಾಡಿಸಿರುತ್ತಾರೆ. ಒಂದೇ ಒಂದು ಬೋಂಡ ಉಳಿದುಕೊಂಡಾಗ, ಅದನ್ನು ತಮ್ಮದಾಗಿಸಿಕೊಳ್ಳಬೇಕು ಎಂಬ ಉತ್ಕಟವಾದ ಆಸೆ ತಾನಾಗಿಯೇ ಎಲ್ಲರ ಮನದಲ್ಲಿ ಮೂಡಿರುತ್ತದೆ. ಆಗ ಎಲ್ಲರೂ ತಮ್ಮ ಬಾಯಿಯಲ್ಲಿದ್ದ, ಅವರು ಹೆಕ್ಕಿ ಹಾಕಿಕೊಂಡಿದ್ದ ಕರಿದತಿಂಡಿಯ ಕೊನೆಯ ಭಾಗವನ್ನು ಅತ್ಯಂತ ವೇಗವಾಗಿ ಅಗಿಯಲು ಪ್ರಾರಂಭಿಸಿಬಿಡುತ್ತಾರೆ. ಉಳಿದಿರುವ ಕಡೆಯ ಬೋಂಡವನ್ನು ಆದಷ್ಟು ಬೇಗ ತನ್ನದಾಗಿಸಿಕೊಳ್ಳುವ ಕಾತುರತೆಯು ತಿನ್ನುವ ವೇಗಕ್ಕೆ ವೇಗವರ್ಧಕವಾಗಿ ಕೆಲಸ ಮಾಡಿರುತ್ತದೆ.

ಎಲ್ಲವೂ ಖಾಲಿಯಾದ ಆ ಕ್ಷಣದಲ್ಲಿ ಇನ್ನಷ್ಟು ಬೋಂಡವನ್ನು ತಿನ್ನಬೇಕೆಂಬ ಬಯಕೆಯು ಆ ಸ್ನೇಹಿತರ ಗುಂಪಿನ ಸಕ್ಕರೆಕಾಯಿಲೆ, ರಕ್ತದೊತ್ತಡಗಳನ್ನು ಜಾಣಮರೆವಿನಿಂದ ಅವಕುಂಠನಗೊಳಿಸಿಬಿಟ್ಟಿರುತ್ತದೆ. ಆ ಸಮಯದಲ್ಲಿ ಬೋಂಡವನ್ನು ತಂದ ಕಥಾಘಾತಕರು ಹೀರೋಗಳಾಗಿ ಹೋಗಿರುತ್ತಾರೆ. ನಮ್ಮ ಆರೋಗ್ಯ ಹಾಳಾಗುತ್ತಿದ್ದರೂ "ಗುಂಪಿನ ಹಿತಚಿಂತಕ' ಎಂಬ ಬಿರುದನ್ನು ಆತನಿಗೆ ದಯಪಾಲಿಸಿ ಬಿಟ್ಟಿರುತ್ತೇವೆ. ಈ

ಸಾರ್ವತ್ರಿಕ ಸಿದ್ಧಾಂತವು ನಾನು ಅನೇಕ ಕಡೆಗಳಲ್ಲಿ, ವಿವಿಧ ಸಂಧರ್ಭಗಳಲ್ಲಿ ಗಮನವಿಟ್ಟು ಪರೀಕ್ಷಿಸಿ ಕಂಡುಕೊಂಡಿರುವ ಸತ್ಯ. ಬೇಕಿದ್ದರೆ ನೀವೂ ಪರೀಕ್ಷಿಸಿ ನೋಡಿ.

ಒಮ್ಮೆ ಕಥಾಘಾತಕನಾದ (ಬಹಳ ಸುಂದರವಾದ ಹೆಸರನ್ನು ಆತನ ತಂದೆತಾಯಿಯರು ಇಟ್ಟಿದ್ದರು. ನಾವು ಸ್ನೇಹಿತರು ಅದನ್ನು ಮೊಟಕು ಮಾಡಿ ಕರೆಯುತ್ತಿದ್ದ ಹೆಸರು ಕೂಡ ಬಹಳ ಆಕರ್ಷಕವಾಗಿತ್ತು. ಆದರೆ ಇಂಥ ಸಂದರ್ಭದಲ್ಲಿ ಅವರು ಅಜ್ಞಾತನಾಮಿಗಳಾಗಿ ಇರುವುದೇ ಕ್ಷೇಮ) ಆತನಿಗೆ "ನಾನು ಮುಸ್ಸಂಜೆ ವಾಯುವಿಹಾರದ ಅನಂತರ ಸ್ನೇಹಕೂಟಕ್ಕೆ ಬೋಂಡ ಕೊಂಡುಹೋಗದಿದ್ದರೆ, ಅದು ನಡೆಯುವುದೇ ಇಲ್ಲ" ಎನ್ನುವ ಅಜ್ಞಾನೋದಯವಾಯಿತು. ಆತ ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲೆಯಲ್ಲಿ "ನನ್ನ ಹುಂಜ ಕೂಗಿದರೆ ಮಾತ್ರ ಬೆಳಗಾಗುವುದು" ಎಂದು ತಿಳಿದಿದ್ದ ಮುದುಕಿಯ ಕಥೆಯನ್ನು ಓದಿರಲಿಲ್ಲ. ಹಾಗಾಗಿ ಅಂದು ವಾಯುವಿಹಾರಕ್ಕೆ ಬರಲಿಲ್ಲ.

ಆದರೆ ಆ ಸಂಜೆಯ ಸ್ನೇಹಕೂಟದಲ್ಲಿ ನಡೆದದ್ದೇ ಬೇರೆಯ ವಿಚಾರ. ಅಂದಿನ ವಿವಿಧ ಕಥೆಗಳನ್ನು ಹೇಳುವ ಕಾರ್ಯಕ್ರಮ ಯಾವುದೇ ಅಡೆತಡೆಗಳಿಲ್ಲದೆ ಸಾಗಿದವು. ಆದರೆ ಅದಕ್ಕಿಂತ ಮುಖ್ಯವಾಗಿ, ಪ್ರತಿದಿನವೂ ತಿನ್ನುತ್ತಿದ್ದ ಹಳೆಯಕರಿದ ಎಣ್ಣೆಯಲ್ಲೇ ಮತ್ತೆ ಕರಿಯುತ್ತಿದ್ದ ಬೋಂಡ, ಆಂಬೊಡೆಗಳಿಂದ ಆಗುತ್ತಿದ್ದ ತೊಂದರೆಗಳನ್ನು ಪ್ರತಿಯೊಬ್ಬರೂ ಅಂತ್ಯಾಕ್ಷರಿಯಂತೆ ಹೇಳುತ್ತಾ ಹೋದರು. ಅದರ ಪ್ರಭಾವ ಎಷ್ಟಿತ್ತೆಂದರೆ, "ಏನೇ ಆದರೂ ಅಂದಿನಿಂದ ಅವುಗಳನ್ನು ಸೇವಿಸಲೇಬಾರದು. ಇದನ್ನು ಕಥಾಘಾತಕನಿಗೆ ಕಟ್ಟುನಿಟ್ಟಾಗಿ ಹೇಳಿಬಿಡಬೇಕು" ಎಂಬ ಠರಾವನ್ನು ಅವಿರೋಧವಾಗಿ ಒಪ್ಪಲಾಯಿತು. ಅಲ್ಲದೆ ಆತನಿಗೆ ಈ ವಿಚಾರವನ್ನು ತಿಳಿಸಿ ಒಪ್ಪಿಸುವ ಜವಾಬ್ದಾರಿಯನ್ನು ಅವಿರೋಧವಾಗಿ ನನ್ನ ತಲೆಗೆ ಕಟ್ಟಲಾಯಿತು. ಉಳಿದವರು 'ಈ ಅಹಿತಕರ ಘಟನೆಗೆ ಸಾಕ್ಷಿಯಾಗಿ ಇರಬಾರದು' ಎಂಬ ಜಾಣತನದಿಂದ, 'ಆತ ಒಬ್ಬನನ್ನೇ ಭೇಟಿಯಾಗಿ ಹೇಳಿಬಿಡು' ಎಂದು ನಿರ್ದೇಶನವನ್ನೂ ನೀಡಿದರು.

ಈ ವಿಚಾರವನ್ನು ತಿಳಿಸಿದಾಗ, ಕಥಾಘಾತಕನ ಮುಖದ ಕಾಂತಿ ಸಂಪೂರ್ಣವಾಗಿ ಉಡುಗಿಹೋಯಿತು. ಮಾತುಕತೆಯಲ್ಲಿ, "ಯಾರೂ ತನ್ನ ಬಗ್ಗೆ ಗಮನ ಹರಿಸುವುದಿಲ್ಲ; ಹಾಗಾಗಿ ಬೋಂಡ ತಂದು, ನನ್ನತ್ತ ಅವರನ್ನು ಸೆಳೆಯುತ್ತಿದ್ದೆ" ಎನ್ನುವ ಅಂಶ ತಿಳಿಯಿತು.

"ಬೋಂಡ ತರುವ ಬದಲು, ನೀನು ಯಾವುದಾದರೂ ಕಥೆ ಹೇಳಿಬಿಡು"– ನನ್ನ ಉಪದೇಶ.

"ನನಗೆ ಯಾವುದೇ ಕಥೆಯನ್ನೂ ಹೇಳಲು ಬರುವುದಿಲ್ಲ"– ಆತನ ಸತ್ಯನಿವೇದನೆ.

"ನಿನಗೆ ಬರುತ್ತಪ್ಪ, ಅದು ನಿನ್ನೊಳಗೆ ಇರುತ್ತದೆ. ನೀನು ಅದನ್ನು ಹೊರತರುವ ದಾರಿಯನ್ನು ಕಂಡುಕೊಳ್ಳಬೇಕು. ಅಷ್ಟೇ!"– ಅವನು ತನ್ನೊಳಗೆ ಅವಲೋಕನ ಮಾಡಿಕೊಳ್ಳಲು ಮಾರ್ಗದರ್ಶನ ಮಾಡಿದೆ; "ನೋಡು ನಿಮ್ಮ ಪಕ್ಕದ ಮನೆಯಲ್ಲಿ ಹೊಸದಾಗಿ ಮದುವೆಯಾಗಿ ಬಂದಿರುವ ಸೊಸೆ ಒಳ್ಳೆಯ ಕೆಲಸದಲ್ಲಿ ಇದ್ದಾಳೆ. ಅವಳು ತನ್ನ ಸಂಬಳವನ್ನು ತಾನೇ ಇಟ್ಟುಕೊಳ್ಳುತ್ತಾಳೋ ಗಂಡನಿಗೆ ಕೊಡುತ್ತಾಳೋ ಅತ್ತೆಗೆ ಕೊಡುತ್ತಾಳೋ ತಿಳಿದುಕೊಂಡು ನಮಗೆಲ್ಲ ತಿಳಿಸು. ಅದೇ ಕಥೆಯಾಗುತ್ತದೆ" ಎಂದೆ.

"ಅಯ್ಯೋ, ಈ ವಿಚಾರವನ್ನು ನಾನು ಅವಳ ಬಳಿ ಹೇಗೆ ಕೇಳಲಿ?" ಎಂದು ಹೌಹಾರಿದ.

"ನಿನ್ನ ಹೆಂಡತಿಯನ್ನು ಕೇಳಿನೋಡು" ಎಂದು ದಾರಿತೋರಿಸಿದೆ.

ಈಗ ಆತ ನಮ್ಮ ಗುಂಪಿನಲ್ಲಿ ಅತ್ಯುತ್ತಮ ಕಥೆ ಹೇಳುವವನಾಗಿದ್ದಾನೆ. ನಮ್ಮೆಲ್ಲರ ಆರೋಗ್ಯವೂ ವೃದ್ಧಿಸಿದೆ.

■

# ನನ್ನ ಚೋರ್ಮ್ಯಾನ್ಸ್

✍ಎನ್.ವಿ.ರಘುರಾಮ್

ಈ ನಿವೃತ್ತಿ ಎನ್ನುವುದು ನೋಡಿ ಮನುಷ್ಯರನ್ನು ವಿಚಿತ್ರವಾಗಿ ಬದಲಾಯಿಸುತ್ತದೆ. ನನ್ನ ಸಹೋದ್ಯೋಗಿ ರಾಮಣ್ಣ ಮನೆಯ ಸುತ್ತಲೂ ಗಿಡಗಳನ್ನು ಬೆಳಸಲು ಪ್ರಾರಂಭ ಮಾಡಿದ್ದಾನೆ. ರಾಘಣ್ಣ ಒಂದು ನಾಲ್ಕು ಸಾಲು ಕವನಗಳನ್ನು ಬರೆದು ರೀಲ್ಸ್ ಮಾಡಿ, 'ಲೈಕ್ಸ್' ಬರಲು ಕಾಯುತ್ತಾ ಕುಳಿತಿರುತ್ತಾನೆ. ಆದರೆ ನಾನು ನಿವೃತ್ತಿ ಆದ ನಾಲ್ಕು ವರ್ಷಗಳ ನಂತರವೂ ಇನ್ನೂ ಏನು ಮಾಡುವುದು ಎಂದು ಯೋಚನೆಯಲ್ಲೇ ಕಳೆದಿದ್ದೇನೆ! "ನೀವೇನೂ ಮಾಡಲ್ಲವಾ?" ಎಂದು ಆಗಾಗ ನನ್ನಾಕೆ ಕೇಳಿದ್ದಿದೆ. "ನೀನೇ ಹೇಳು, ನನಗೆ ಗೊತ್ತಾಗುತ್ತಿಲ್ಲ" ಎಂದು ಓದಿದ್ದ ದಿನ ಪತ್ರಿಕೆಯನ್ನೇ ಇನ್ನೊಮ್ಮೆ ಓದುತ್ತಾ ಕೂರುತ್ತಿದ್ದೆ. "ಹೋಗಲಿ ಬಿಡಿ, ಸ್ವಲ್ಪ ದಿವಸ ಆರಾಮಾಗಿರಿ" ಎನ್ನುತ್ತಾ ಆಕೆ ಬ್ಯಾಂಕಿಗೆ ಕೆಲಸಕ್ಕೆ ಹೊರಡುತ್ತಿದ್ದಳು. ಈಗ ಮನದನ್ನೆ ಕೂಡ ಬ್ಯಾಂಕಿನಿಂದ ನಿವೃತ್ತಿ ಹೊಂದಿ ಒಂದು ತಿಂಗಳು ಕಳೆಯಿತು.

ನಾನು ಇಲಕ್ಟ್ರಿಕಲ್ ಇಂಜಿನಿಯರ್. ಮೂರು ದಶಕಗಳ ಕಾಲ ಜಲ ವಿದ್ಯುತ್ ಘಟಕಗಳ ವಿನ್ಯಾಸದ ಕಛೇರಿಯಲ್ಲಿ ಕೆಲಸ ಮಾಡಿದವನು. "ಇನ್ ಸರ್ಚ್ ಆಫ್ ಪವರ್ ಫಾರ್ ಯು" ಎನ್ನುವುದೇ ಕಂಪನಿಯ ಧ್ಯೇಯ. ಕಛೇರಿಯ ಕೆಲಸದಲ್ಲಿ 'ಪವರ್' ಹುಡುಕಿ ಉತ್ಪಾದನೆ ಮತ್ತು ಬೇಡಿಕೆಯನ್ನು ಬ್ಯಾಲೆನ್ಸ್ ಮಾಡುವಷ್ಟು ಸುಲಭವಾಗಿ 'ಪವರ್' ಅನ್ನು ಮನೆಯಲ್ಲಿ ಬ್ಯಾಲೆನ್ಸ್ ಮಾಡಲಾಗುವುದೇ? ನಾನು ಆಗ ಬಗ್ಗೆ ಯೋಚಿಸಲೇ ಇಲ್ಲ! ನಿಜ ಹೇಳುತ್ತಿದ್ದೇನೆ, ನಂಬಿ! ಇದಕ್ಕೆ ನನ್ನಾಕೆಯೇ ಮುಖ್ಯ ಕಾರಣ. ಕೆಲಸಕ್ಕೆ ಸೇರಿದ ದಿನದಿಂದಲೂ ಖಾತೆಗಳು, ಬಡ್ಡಿದರಗಳು, ಅಧಿಕಾರಿಗಳ ಅಸಹನೆ, ಗ್ರಾಹಕರ ಮೆಚ್ಚುಗೆ,...... ಏನೇ ಇದ್ದರೂ ದಿನದ ಕೊನೆಯಲ್ಲಿ 'ಬ್ಯಾಲೆನ್ಸ್' ಮಾಡಿ ಸರಿಮಾಡುವ ಅಭ್ಯಾಸ ಇರುವ ಆಕೆಗೆ, ಮನೆಯಲ್ಲೂ ದಿನವೂ 'ಪವರ್ ಬ್ಯಾಲೆನ್ಸ್' ಮಾಡಲು ಕಷ್ಟವಾಗಲಿಲ್ಲ!

ಈಗ ಮಗ ಅಮೆರಿಕಾದಲ್ಲಿ ನೆಲೆಸಿದ್ದಾನೆ. ಮಗಳು ವೈದ್ಯಕೀಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ಒಂದು ಕಾಲದಲ್ಲಿ ಅನಾಟಮಿ ಪುಸ್ತಕಗಳು, ವಿದ್ಯಾರ್ಥಿನಿಲಯದ ಮೆಸ್ ಬಗ್ಗೆ ದೂರು, ಟಿ.ವಿ.ಯಲ್ಲಿ ಕ್ರಿಕೆಟ್ ಮ್ಯಾಚಿನ ಗದ್ದಲ, ಮಕ್ಕಳ ಪರೀಕ್ಷೆಗಳ ಒತ್ತಡದ ನಡುವೆ ನಮ್ಮ ಮೇಲಧಿಕಾರಿಗಳ ಫೋನ್ ಗಲಾಟೆಯಲ್ಲಿ ಮುಳಗಿದ್ದ ಮನೆ ಈಗ ಮೌನದಲ್ಲಿ ಮುಳುಗಿದೆ. ಆಗ ಪಕ್ಕದಲ್ಲೇ ಇದ್ದ ದೇವಸ್ಥಾನದ ಗಂಟೆ ಬಾರಿಸಿದ್ದು ಕಿವಿಗೆ ಬೀಳುತ್ತಿರಲಿಲ್ಲ. ಈಗ ಆ ದೇವಸ್ಥಾನದ ಭಟ್ಟರ ಮಂತ್ರ ಕೂಡ ಕೇಳುತ್ತಿದೆ!

ಆ ಮೌನದೊಳಗೆ ಈ ದಿನ ಬೆಳಿಗ್ಗೆ ತೂರಿ ಬಂದ ಒಂದು ಪದವೇ "ಚೋರ್ಮ್ಯಾನ್ಸ್!"

ಹೌದು, ಈ ದಿನ ಕೂಡ ಬೆಳಿಗ್ಗೆ ಕೈಯಲ್ಲಿ ಕಾಫೀ ಹಿಡಿದುಕೊಂಡು ಇಬ್ಬರೂ ದಿನಪತ್ರಿಕೆ ನೋಡುತ್ತಾ ಕೂತಿದ್ದೆವು. ಈಕೆ ಇದ್ದಕ್ಕಿದ್ದಂತೆ ದಿನಪತ್ರಿಕೆಯನ್ನು ಜೋರಾಗಿ ಓದಲು ಪ್ರಾರಂಭ ಮಾಡಿದಳು. "ಮನೆಯಲ್ಲಿ ಕೆಲಸ ಹಂಚಿಕೊಂಡು ಮಾಡುವುದು ಯುವ ದಂಪತಿಗಳ ಹೊಸ 'ರೊಮ್ಯಾಂಟಿಗ್ ಟ್ರೆಂಡ್'. ಇದು ಒತ್ತಡ ಕಡಿಮೆ ಮಾಡುತ್ತದೆ ಮತ್ತು ಇತ್ತೀಚೆಗೆ ಹೆಚ್ಚುತ್ತಿರುವ ವಿಚ್ಛೇದನಗಳನ್ನು ತಪ್ಪಿಸುತ್ತದೆ ಎಂದು ತಜ್ಞರು ಹೇಳುತ್ತಾರೆ......" ಎನ್ನುತ್ತಾ ಕನ್ನಡಕ ಸರಿಪಡಿಸಿಕೊಂಡು ಓದುತ್ತಾ ಹೋದಳು. ವ್ಯವಹಾರಗಳ

ಅಂಕಣ ಓದುತ್ತಿದ್ದ ನನಗೆ ಆಕೆ ಇದ್ದಕ್ಕಿಂದಂತೆ ಜೋರಾಗಿ ಓದುವುದು ಕೇಳಿ ಆಶ್ಚರ್ಯವಾದರೂ, ಕೇಳಿದರೂ ಕೇಳಿಸದಂತೆ, ಪತ್ರಿಕೆ ಓದುತ್ತಿರುವಂತೆ ನಟನೆ ಮುಂದುವರೆಸಿದೆ. “ಒಟ್ಟಿಗೆ ಅಡುಗೆ ಮಾಡುವುದು, ಮನೆಯ ಸ್ವಚ್ಛತೆ ಮಾಡುವುದು, ಜವಾಬ್ದಾರಿಗಳನ್ನು ಹಂಚಿಕೊಳ್ಳುವುದು,..... ಇದರಿಂದ ಭಾವನಾತ್ಮಕ ಬಾಂಧವ್ಯ ಹೆಚ್ಚುತ್ತದೆ....... ಇಲ್ಲದಿದ್ದರೆ ವಿಚ್ಛೇದನದಂತಹ ಘಟನೆ ಸಂಭವಿಸಿದರೆ ಆಶ್ಚರ್ಯವಿಲ್ಲ" ಎನ್ನುತ್ತಾ ಪತ್ರಿಕೆಯನ್ನು ಟೀಪಾಯ್ ಮೇಲೆ ಸ್ವಲ್ಪ ಶಬ್ದದೊಂದಿಗೆ ಇಟ್ಟು ಅಡಿಗೆ ಮನೆಗೆ ಹೋದಳು.

ನಾನು ಓದುತ್ತಿದ್ದ ಪತ್ರಿಕೆಯನ್ನು ನಿಧಾನವಾಗಿ ಕೆಳಗಿಳಿಸಿದೆ. ಇದೇನಿದು, ಈ ದಿನ ಹೊಸ ರೀತಿಯಲ್ಲಿ ಪ್ರಾರಂಭ ವಾಗಿದೆ? ಎಂದುಕೊಂಡೆ. ಇಲೆಕ್ಟ್ರಿಕಲ್ ಇಂಜಿನೀಯರ್ ಅಲ್ಲವೇ ನಾನು? ಈ ರೀತಿಯ ಸಣ್ಣ, ಪುಟ್ಟ ಶಾಕ್‌ಗಳಿಗೆ ಹೆದರಿಕೊಳ್ಳುತ್ತೇನೆಯೇ? ಒಂದು ಕ್ಷಣ ಯೋಚಿಸಿದೆ ಅಷ್ಟೇ. ತಕ್ಷಣ ಗೊತ್ತಾಯಿತು. ಎಷ್ಟೆಲ್ಲಾ ಪ್ರಮೇಯಗಳನ್ನು ಬಿಡಿಸಿರುವ ನನಗೆ ಇದೊಂದು ಸವಾಲು ಆಗಲಿಲ್ಲ. ತಕ್ಷಣ ಗೊತ್ತಾಗದೇ ಇರಲು, ನಾನೇನು 'ಟ್ಯೂಬ್ ಲೈಟ್' ಅಲ್ಲವಲ್ಲ!




Chore + Romance = Chormance. ಅಲ್ಲಾ, ಇಂಗ್ಲಿಷ್ ಪದಗಳು ಸೇರಿ ಸಂಧಿ ಯಾಕಾಗಬಾರದು? ಆ ಸಂಧಿ ಪದದ ಕನ್ನಡದ ಅವತಾರವೇ ಈ 'ಚೋರ್ಮ್ಯಾನ್ಸ್'!

ಮದುವೆ ಆದಾಗಿನಿಂದಲೂ ಆಕೆಯೇ ಮುಂಜಾನೆ ಬೇಗ ಎದ್ದು ಕಾಫಿ ಮಾಡಿ ಕೊಟ್ಟು, ಒಂದು ಕಡೆ ತಿಂಡಿ ತಯಾರಿ ಮಾಡುತ್ತಾ ಇನ್ನೊಂದು ಕಡೆ ಊಟದ ಡಬ್ಬಿ ಕಟ್ಟುತ್ತಿದ್ದಳು. ಮಕ್ಕಳ ಶಾಲೆಗೆ ಹೋಗಿ ಶುಲ್ಕ ಪಾವತಿ ಮಾಡಿ, ಪೋಷಕರ ಸಭೆಯಲ್ಲಿ ಭಾಗವಹಿಸುತ್ತಿದ್ದಳು. ಆದರೆ ಯಾವುದೇ ಸಮಯದಲ್ಲೂ ಬ್ಯಾಂಕ್‌ಗೆ ಸಮಯಕ್ಕೆ ಸರಿಯಾಗಿ ಹೋಗುವುದನ್ನು ತಪ್ಪಿಸುತ್ತಿರಲಿಲ್ಲ. ಸಂಜೆ ಮನೆಗೆ ಬರುವಾಗ ತರಕಾರಿ, ಹಣ್ಣು ಇತರ ಸಾಮಗ್ರಿಗಳನ್ನು ಹೊತ್ತು ತರುತ್ತಿದ್ದಳು. ನಾನು ಸಹಾಯ ಮಾಡಿದ್ದು ಎಂದರೆ ಟ್ಯೂಬ್ ಲೈಟ್ ಬದಲಿಸುವುದು, ಆಗಾಗ 'ಓವರ್ ಲೋಡ್' ಆಗಿ ಹಾಳಾದ ಮಿಕ್ಸಿ ಜಾರಿನ ಬುಶ್ ಬದಲಾವಣೆ ಮಾಡುವುದು,......... ಅಷ್ಟೇ.

ಇದೀಗ ನಿವೃತ್ತಿಯಾಗಿ ಇಬ್ಬರೂ ಒಟ್ಟಿಗೆ ಮನೆಯಲ್ಲಿ ಇದ್ದೇವೆ. ಈಗ ನನ್ನ ಸಂವಹನದಲ್ಲಿ ಹೊಸ ತರಂಗಗಳು ಇರಬೇಕೆಂದು ಅರ್ಥವಾಗಿದೆ. ಹಾಗಾಗಿ ನಾನು ಎದ್ದು ಅಡಿಗೆ ಮನೆಗೆ ಹೋದೆ.

ಆಕೆ ತರಕಾರಿಗಳನ್ನು ನುರಿತ ಶಸ್ತ್ರಚಿಕಿತ್ಸಕಿಯಂತೆ ಗಂಭೀರತೆಯಿಂದ ಕತ್ತರಿಸುತ್ತಿದ್ದಳು.

ಪ್ರೆಶರ್ ಕುಕ್ಕರ್ ನಿಂದ ಆವಿ ಬರಲು ಪ್ರಾರಂಭವಾಗಿತ್ತು. ನಾನು ಯಾವುದೇ ರೀತಿಯ ಘೋಷಣೆಗಳನ್ನು ಮಾಡದೇ ಮೆಲ್ಲಗೆ ಫ್ರಿಜ್ ತೆರೆದು ಕ್ಯಾರೆಟ್ ತೆಗೆದುಕೊಂಡೆ. ಆಕೆ ಓರೆ ನೋಟ ಬೀರಿದಳು.

"ಇವತ್ತು ಏನು? ಪರಿಶೀಲನಾ ಭೇಟಿ?" ಎಂದು ಕೇಳಿದಳು.

"ಪ್ರಿವೆಂಟಿವ್ ಮೆಂಟೆನೆನ್ಸ್," ಎಂದೆ.

"ಓ, ಇಂಜಿನಿಯರ್ ಸಾಹೇಬ್ರು ಡ್ಯೂಟಿಯಲ್ಲಿದ್ದಾರೆ" ಎನ್ನುತ್ತಾ ತನ್ನ ಕೆಲಸ ಮುಂದುವರೆಸಿದಳು.

ಪೀಲರ್ ಹಿಡಿದು ಕ್ಯಾರೆಟ್ ಮೇಲಿನ ಸಿಪ್ಪೆ ತೆಗೆದು, ತುರಿಯಲು ಪ್ರಾರಂಭ ಮಾಡಿದೆ. ಅರ್ಧ ಕ್ಯಾರೆಟ್ ಸಿಪ್ಪೆಯ ಜೊತೆ ಹೋಗಿದ್ದರೆ, ತುರಿಯುವಾಗ ಇನ್ನೊಂದಿಷ್ಟು ಕೆಳಗೆ ಬಿದ್ದಿತ್ತು.

"ಸಂಪನ್ಮೂಲ ವ್ಯರ್ಥ," ಎಂದಳು ಆಕೆ, ಬ್ಯಾಂಕರ್ ಧಾಟಿಯಲ್ಲಿ.

"ಆರಂಭಿಕ ಹೂಡಿಕೆ," ಎಂದೆ ನಾನು. "ರಿಟರ್ನ್ಸ್ ಮುಂದೆ ಬರುತ್ತದೆ." ನಾನೇನು ಕಡಿಮೆ? ಅವಳ ಭಾಷೆಯಲ್ಲೇ ಹೇಳಲು ಪ್ರಯತ್ನಿಸಿದೆ.

ಮೆಲ್ಲನೆ ಹಾಡನ್ನು ಗುನುಗಲು ಪ್ರಾರಂಭ ಮಾಡಿದಳು.

"ಲಗ್ ಜಾ ಗಲೇ ಕಿ ಫಿರ್ ಯೇ ಹಸೀನ್ ರಾತ್ ಹೋ ನಾ ಹೋ

ಶಾಯದ್ ಫಿರ್ ಇಸ್ ಜನ್ಮ್ ಮೇ ಮುಲಾಕಾತ್ ಹೋ ನಾ ಹೋ

ಲಗ್ ಜಾ ಗಲೇ..." "ವೋ ಕೌನ್ ಥಿ" ಚಿತ್ರದ ಹಾಡು.

ಆಕೆ ಒಂದು ಕ್ಷಣ ಓರೆ ಕಣ್ಣಿನಿಂದ ನನ್ನ ನೋಡಿದಳು. ಆ ಹಾಡು ನನ್ನನ್ನು ಈ ಅಡಿಗೆ ಮನೆಯಲ್ಲಿ ಮತ್ತೊಮ್ಮೆ ಆಕೆ ಕಾಣುವುದು ಯಾವಾಗಲೋ ಎಂದು ಹೇಳಿದಂತೆ ಇತ್ತು.

"ನಿನ್ನ ಮೆಚ್ಚಿನ ಹಾಡು?" ಎಂದೆ.

ಆದರೆ ನಾನೇನು ಕಡಿಮೆಯೇ?.

"ಪಲ್ ಪಲ್ ದಿಲ್ ಕೆ ಪಾಸ್..." ಎನ್ನುತ್ತಾ "ಬ್ಲಾಕ್ ಮೈಲ್" ಸಿನಿಮಾದ ಹಾಡು ಜೋರಾಗಿ ಹೇಳ ತೊಡಗಿದೆ. ಪ್ರತಿ ಕ್ಷಣವೂ ನನ್ನ ಹತ್ತಿರವೇ ಇರು ಎಂದು ಕೇಳಿಕೊಳ್ಳುವುದೇ ಸರಿಯಾದ ಉಪಾಯ! ಹಾಡುತ್ತಾ, ಹಾಡುತ್ತಾ "ವಾಲ್ಯೂಮ್ ಹೆಚ್ಚಿಸಲಾ?" ಎಂದೆ.

"ಇದು ಅಡಿಗೆಮನೆನಾ ಅಥವಾ ಸಂತೆನಾ?" ಎಂದಳು ಆಕೆ.

"ಇವತ್ತಿನ ಅಡಿಗೆ ಥೀಮ್ ರೆಟ್ರೋ ರೊಮ್ಯಾಂಸ್ ವಿತ್ ಕ್ಯಾರೆಟ್!" ಎಂದೆ. ಆಕೆಯ ಮುಖದಲ್ಲಿ ಮೆಚ್ಚುಗೆ ಮೂಡಿತು.

ಈಗ ನಾನು ಸಿಂಕಿನ ಹತ್ತಿರ ಬಂದು, ಅಲ್ಲಿದ್ದ ಒಂದೆರೆಡು ಕಾಫೀ ಲೋಟಗಳನ್ನು ತೊಳೆಯಲು ಶುರುಮಾಡಿದೆ. ನೀರು ಚಿಮ್ಮಿತು.

"ಜಾಗ್ರತೆ! ಇಲ್ಲಿ ಜೋಗದ ಜಲ ವಿದ್ಯುತ್ ಯೋಜನೆ ಮಾಡಬೇಡಿ" ಎಂದು ನಕ್ಕಳು.

ಅವಳ ಮುಖದಲ್ಲಿ ನಗು ನೋಡಿದ ಮೇಲೆ ಇನ್ನೇನು ಮಾತನಾಡಲು ಉಳಿಯುತ್ತದೆ! ನಾನು ಮುಗುಳ್ನಗೆ ಬೀರಿದೆ.

ಒಂದು ಕ್ಷಣ ಬಿಟ್ಟು ಈಗ ವಿಷಯಕ್ಕೆ ಬಂದಳು. "ಅಲ್ಲಾ ರೀ, ನಾನು ಓದಿದ್ದು

ಕೇಳಿಸಿಕೊಂಡ್ರಲ್ಲ, ಪತ್ರಿಕೆಯಲ್ಲಿ ಯಾರು ಹೆಚ್ಚು ಕೆಲಸ ಮಾಡುತ್ತಾರೆ ಎಂದು ಬರೆದಿದೆ? ಗಂಡನೋ? ಹೆಂಡತಿಯೋ?" ಎಂದು ಕೇಳಿದಳು. ಅವಳೇ ತಾನೇ ಓದಿರುವುದು. ಈಗ ನನಗೆ ಪ್ರಶ್ನೆ? ಹೈ ವೋಲ್ಟೇಜ್ ಲೈನ್ ನೋಡಿದವನು ನಾನು, ಈ ಪ್ರಶ್ನೆಗಳಿಗೆಲ್ಲಾ ಹೆದರುತ್ತೇನೆಯೇ?

"ಲೇಖನದಲ್ಲಿ ಯುವ ದಂಪತಿಗಳು ಯಾರು ಹೆಚ್ಚು ಕೆಲಸ ಮಾಡುತ್ತಾರೆ ಎಂದಿಲ್ಲ. ಈ ವಿಷಯವಾಗಿ ಯಾರು ಹೆಚ್ಚು ಜಗಳ ಮಾಡುತ್ತಾರೆ ಅಂತಿದೆ." ಎಂದೆ.

ಆಕೆ ತಲೆ ಅಲ್ಲಾಡಿಸಿ ಒಪ್ಪಿಕೊಂಡಳು. "ನಾವು ಕೂಡ ಜಗಳ ಮೊದಲು ಮಾಡಿದ್ದೇವೆ. ಅದರೆ ಆಗ ಅದನ್ನು 'ಚರ್ಚೆ' ಅಂತ ಕರೆಯುತ್ತಿದ್ದೆವು, ಅಷ್ಟೇ!" ಎಂದೆ. ಇಬ್ಬರಿಗೂ ನಗುಬಂತು.

"ಒಂದು ದಿನ ಜಗಳ ಮಾಡದೇ, ಆಪ್ತ ಸಲಹೆಗಾರರಿಂದ ಸಲಹೆ ಇಲ್ಲದೇ ಹೇಗೆ ಇಷ್ಟು ವರ್ಷ ಜೀವನ ಮ್ಯಾನೇಜ್ ಮಾಡಿದ್ದೀರಿ" ಎಂದು ಪಕ್ಕದ ಮನೆ ಚಂದ್ರುವಿನ 'ಬಿಳಿಸೊಸೆ' ಕಳೆದ ತಿಂಗಳು ಭಾರತಕ್ಕೆ ಭೇಟಿ ಕೊಟ್ಟಾಗ ಕೇಳಿದ್ದಳು.

"ನಾವು ಮ್ಯಾನೇಜ್ ಮಾಡಿಲ್ಲ. ಅಡ್ಜಸ್ಟ್ ಮಾಡಿಕೊಂಡೆವು, ಅಷ್ಟೇ" ಎಂದಿದ್ದಳು ಈಕೆ.

ಇಂದು ದಿನಪತ್ರಿಕೆಯಲ್ಲಿ ಬಂದ ಹೊಸ ಪದಕ್ಕೆ ಹಳೆಯ ಅರ್ಥ ಕೊಡಲು ಪ್ರಯತ್ನ ನಡೆದಿತ್ತು.

"ತೇರೆ ಬಿನಾ ಜಿಂದಗಿ ಸೇ..." ಎಂಬ "ಆಂಧೀ" ಸಿನಿಮಾದ ಹಾಡು ಹೇಳಲು ಪ್ರಾರಂಭ ಮಾಡಿದೆ.

"ಅದು ಯಾಕೋ ಈಗ ಸ್ವಲ್ಪ ಜಾಸ್ತಿ ಆಯಿತು ಎಂದು ಅನಿಸಲ್ವೆ" ಎಂದರೂ ಆಕೆಯ ಧ್ವನಿಯಲ್ಲಿ ಆಕ್ಷೇಪಣೆ ಇರಲಿಲ್ಲ.

ಮಧ್ಯಾಹ್ನ ಊಟ ಸಿದ್ಧವಾಯಿತು. ಇನ್ನು ಚಪಾತಿ ಮಾಡುವುದು ಮಾತ್ರ ಬಾಕಿ. ನಾನೇ ಚಪಾತಿ ಒತ್ತಿದೆ. ಅದು ಅಸ್ಟ್ರೇಲಿಯಾ ನಕ್ಷೆ ಹೋಲುತ್ತಿದ್ದುದರಲ್ಲಿ ಆಶ್ಚರ್ಯವೇನು?

"ಅಬ್ಸ್ಟ್ರಾಕ್ಟ್ ಆರ್ಟ್," ಎಂದಳು ಈಕೆ.

"ಲಿಮಿಟೆಡ್ ಎಡಿಷನ್" ಎಂದು ನಕ್ಕೆ.

ಮಧ್ಯಾಹ್ನ ಮಗಳು ವಿಡಿಯೋ ಕಾಲ್ ಮಾಡಿದಳು.

"ಅಮ್ಮ, ಹಿನ್ನಲೆಯಲ್ಲಿ ಯಾವುದೋ ಹಾಡು ಕೇಳುತ್ತಿದೆ?"

"ನಿನ್ನಪ್ಪನ ಹೊಸ ಪ್ರಾಜೆಕ್ಟ್" ಎಂದಳು.

"ಓ, ಚೋರ್ಮ್ಯಾನ್ಸ್?" ಮಗಳು ನಗುತ್ತ ಕೇಳಿದಳು.

"ಈ ಪದ ನಿನಗೆ ಹೇಗೆ ಗೊತ್ತು?"

"ಓ, ಅದಾ, ನಮ್ಮ ಫ್ರೋಫೆಸರ್ ಬಳಿ ದಿನಾಲು ಎರಡು, ಮೂರು ಯುವ ಜೋಡಿಗಳು ಆಪ್ತ ಸಮಾಲೋಚನೆಗೆ ಬರುತ್ತಾರೆ. ಅವರಿಗೆಲ್ಲಾ ನಮ್ಮ ಫ್ರೋಫೆಸರ್ ಇದನ್ನೇ ಹೇಳುವುದು" ಎಂದು ನಕ್ಕಳು.

ಸಂಜೆ ಚಹಾ ಸಮಯ.

"ಇವತ್ತು ಚಹಾ ನಾನು ಮಾಡುತ್ತೇನೆ" ಎಂದು ಅಡಿಗೆ ಮನೆಗೆ ಹೋದೆ. ಯುಟ್ಯೂಬ್ ನೋಡಿಕೊಂಡು ಚಹಾ ಮಾಡಿದೆ. ಆಕೆಗೆ ನಾನೇ ತಂದು ಕೊಟ್ಟೆ. ಒಂದು

ಸಿಪ್ ಕುಡಿದಾಗ, ಟಿ.ವಿ. ಜಾಹೀರಾತಿನಲ್ಲಿ ತೋರಿಸುವಂತೆ, ಆಕೆಯ ಮುಖದಲ್ಲಿ ಆಶ್ಚರ್ಯ ಮತ್ತು ಮೆಚ್ಚುಗೆ ಒಟ್ಟಿಗೇ ಮೂಡಿ ಬಂದಿತು.

"ಪರ್ಫೆಕ್ಟ್" ಎಂದಳು.

ಸೂರ್ಯ ಮುಳುಗಲು ಪ್ರಾರಂಭ ಮಾಡಿದ್ದ.

"ಯೇ ಶಾಮ್ ಮಸ್ತಾನಿ....." "ಕಟಿ ಪತಂಗ್" ಸಿನಿಮಾದ ಹಾಡು ಹೇಳುತ್ತಾ ನಾನು ಕೈ ಮುಂದೆ ಮಾಡಿದೆ.

"ನೃತ್ಯ? ...ಅಡಿಗೆಮನೆಯಲ್ಲಿ?" ಎಂದು ನಾಚಿಕೊಳ್ಳುತ್ತಾ ನಿಧಾನವಾಗಿ ಕೈ ಹಿಡಿದುಕೊಂಡಳು.

"ಎಲ್ಲಾ ಮಹಾನ್ ಪ್ರೇಮಕಥೆಗಳು ಸ್ಟೌವ್ ಹತ್ತಿರವೇ ಶುರುವಾಗುತ್ತವೆ!" ಎಂದೆ.

ಇಬ್ಬರೂ ಸಣ್ಣದಾಗಿ ಹೆಜ್ಜೆ ಹಾಕಿದೆವು. ಫ್ರಿಜ್ ಮತ್ತು ಡೈನಿಂಗ್ ಟೇಬಲ್ ನಡುವೆ, ಪ್ರೆಶರ್ ಕುಕ್ಕರ್‌ಗೆ ತಾಕದಂತೆ ಎಚ್ಚರಿಕೆಯಿಂದ ಹೆಜ್ಜೆ ಹಾಕಿದೆವು.

ರಾತ್ರಿ ಊಟ ಮುಗಿದು ಇಬ್ಬರೂ ಬಾಲ್ಕನಿಯಲ್ಲಿ ಕುಳಿತೆವು. ಪಕ್ಕದ ದೇವಸ್ಥಾನದಿಂದ ಕೊನೆಯ ಮಂಗಳಾರತಿಗೆ ಬಾರಿಸಿದ ದೇವಸ್ಥಾನದ ಘಂಟೆಯ ನಾದ ಕೇಳಿಸಿತು.

"ಓ," ಎನ್ನುತ್ತಾ ಇವಳು, "ಇವತ್ತು ತುಂಬಾ ಕೆಲಸ ಮಾಡಿದ್ದಾರೆ ನಮ್ಮ ಇಂಜಿನಿಯರ್ ಸಾಹೇಬ್ರು,... ಸುಸ್ತಾಯಿತಾ?" ಆಕೆಯ ಧ್ವನಿಯಲ್ಲಿ ಕಾಳಜಿಯಿತ್ತು.

"ಇಲ್ಲ, ಕಣೆ...... " ಎಂದು ನಿಧಾನವಾಗಿ ಹೇಳಿದೆ. "ಇಷ್ಟು ವರ್ಷ ಕಛೇರಿಯಲ್ಲಿ 'ಪವರ್ ಫಾರ್ ಯು' ಹುಡುಕುತ್ತಿದ್ದೆ. ಇಂದು ಮೊದಲ ಬಾರಿಗೆ "ಪವರ್ ಫಾರ್ ಅಸ್ ಹುಡುಕಿದಂತೆ ಆಯಿತು" ಎಂದೆ.

ನನ್ನಾಕೆ ಅರ್ಥವಾಗದಂತೆ ನೋಡಿದಳು.

"ಅಂದರೆ?"

"ಅಂದರೆ  ಇಷ್ಟು ವರ್ಷ ಮನೆಯಲ್ಲಿ ಮುಖ್ಯ ಪವರ್ ಪ್ಲಾಂಟ್ ನೀನೇ. ನಾನು ಏನಾಗಿದ್ದೆ ಗೊತ್ತಾ?"

"ಏನು?"

"ಬ್ಯಾಕಪ್ ಜನರೇಟರ್." ಅಕೆ ನಕ್ಕಳು.

"ಹಾಗಾದರೆ ಇಂದಿನಿಂದ ಲೋಡ್ ಶೇರ್ ಮಾಡಬೇಕು. ಲೋಡ್ ಶೆಡಿಂಗ್ ಬೇಡ!"

ನಾನು ತಲೆಬಾಗಿದೆ.

ಮಾರನೇ ದಿನ ಬೆಳಿಗ್ಗೆ ಎಂದಿನಂತೆ ದಿನ ಪತ್ರಿಕೆ ಓದುತ್ತಾ, ಗಲ್ಫ್ ನಲ್ಲಿ ಪ್ರಾರಂಭವಾಗಿರುವ ಯುದ್ಧದಲ್ಲಿ ಒಟ್ಟು ಹಾರಿಸಿರುವ ಮಿಸೈಲ್ಗಳ ಸಂಖ್ಯೆ ಎಷ್ಟಿರಬಹುದೆಂದು ತಲೆ ಕೆಡಿಸಿಕೊಂಡು ಲೆಕ್ಕಾ ಹಾಕುವುದರಲ್ಲಿ ಮುಳುಗಿ ಹೋಗಿದ್ದೆ. "ರೀ, ಅಕ್ಕಿ ರೊಟ್ಟಿ ರೆಡಿಯಿದೆ. ಬಿಸಿ ಇರುವಾಗಲೇ ತಿನ್ನಿ, ಆಮೇಲೆ ಸ್ನಾನ ಮಾಡುವಿರಂತೆ" ಎನ್ನುತ್ತಾ ತಟ್ಟೆಯನ್ನು ಕೂತಿರುವ ಬಳಿಗೇ ತಂದು ಕೊಟ್ಟಾಗ, ಎಲ್ಲಾ ಲೆಕ್ಕಾಚಾರಗಳನ್ನು ಬದಿಗಿಟ್ಟು ತಿಂಡಿ ತಿನ್ನಲು ಪ್ರಾರಂಭಿಸಿದೆ...... ಇಂಗ್ಲಿಷಿನ 'chore' ವಿಷಯದಲ್ಲಿ ನಾನು ಹಿಂದಿಯ 'ಚೋರ್' (chor) ಬುದ್ಧಿ ತೋರಿಸುತ್ತೇನೆ ಎಂದು ಕನ್ನಡದ ಈಕೆಗೆ ಅರ್ಥವಾಗಿ ಮೂರು ದಶಕಗಳೇ ಆಗಿದೆ ಬಿಡಿ. ■

# ಹುಯ್ಯೋ ಹುಯ್ಯೋ ಮಳೆ ರಾಯ

ಡಾ. ಶ್ಯಾಮಲಾ ರವಿಶಂಕರ್

ಮಳೆಗಾಲ ಶುರು ಅಯಿತಂದರೆ ನಮ್ಮ ಬಾಲ್ಯದ ದಿನಗಳಲ್ಲಿ ಖುಷಿಯೋ ಖುಷಿ. ಮನೆಯಂಗಳದಲ್ಲಿ ದೊಡ್ಡವರ ಕಣ್ಣು ತಪ್ಪಿಸಿ ಮಳೆಹನಿಗಳಲ್ಲಿ ಕುಣಿದು ಕುಪ್ಪಳಿಸಿ ನೆನೆದು, ಮಳೆ ಜೋರಾದಾಗ, ಅಷ್ಟರವರೆಗೂ ಹಿರಿಯರ ಕಣ್ಣಿಗೆ ಬೀಳದೆ ಇದ್ದಿದ್ದಲ್ಲಿ ಒಳಗೆ ಓಡಿಹೋಗಿ ನೆನೆದಿರುವ ಬಟ್ಟೆ ನೆನೆದಿಲ್ಲ ಎಂದು ವಾದಿಸಿ ಮುಚ್ಚಿಡುತ್ತಿದ್ದ ಕಾಲ. ಅಷ್ಟಾದ್ರೂ ಯಾರಿಗೂ ಶೀತ, ಕೆಮ್ಮು ಬರ್ತಾ ಇರಲಿಲ್ಲ. ನೇರಳೆ ಹಣ್ಣೋ ಹುಣಸೆ ಕಾಯಿ ತಿಂದು ಗಂಟಲು ಕಟ್ಟಿ ಕಷಾಯ, ಊಟದಲ್ಲಿ ಮಜ್ಜಿಗೆ ಮೈನಸ್, ಸ್ವೆಟರ್ ಔಟ್ ವಗೈರೆ ರಿವಾಜುಗಳು ಜಾರಿಗೆ ಬರುತ್ತಿದ್ದವು. ಅಷ್ಟೇ.

ಇಂತಹ ಒಂದು ಸಮಯದಲ್ಲಿ ನನ್ನ ಗೆಳತಿ ಸೌಮ್ಯ ಪಟ್ಟಪಾಡೊಂದನ್ನು ನಿಮ್ಮಲ್ಲಿ ಹಂಚಿ ಕೊಳ್ಳುವೆ. ಅವಳ ಸ್ವಭಾವ ಸೌಮ್ಯ ವಾದರೂ ತಲೆ ಮಾತ್ರ ಕೀಟಲೆ. ಹೆಚ್ಚು ಸಮಯ ತಲೆನೇ  ಲೀಡ್ ತೊಗೊತಾ ಇತ್ತು. ಅವಳಮ್ಮನಿಗೆ ಸಂಗೀತ ಅಂದ್ರೆ ಎಲ್ಲಿಲ್ಲದ ಪ್ರೇಮ. ತನ್ನ ಮಗಳನ್ನ ಜೂನಿಯರ್ ಎಂ ಎಸ್ / ಎಂ ಎಲ್  ವಿ ನೋ ಆಗಬೇಕು ಅನ್ನೋ ಹಂಬಲ. ನಮ್ಮ ಕೀಟಲಾಪ್ರಿಯ ಸೌಮ್ಯಾತಿ ಸೌಮ್ಯಳಿಗೆ ಒಂದು ಕಡೆ ತಾಯಿಯನ್ನು ಸತಾಯಿಸುವ ಬುದ್ಧಿ ಆದರೆ  ಇನ್ನೊಂದೆಡೆ ತಾನೇ ಬದ್ಧ ಗಾನ ದ್ವೇಷಿ ! ತಾಯಿ ಪಾಠ ಶುರು ಮಾಡಲು ಪ್ರಾರಂಭಿಸಿದಾಗ ಇವಳು ಎಲ್ಲಿಲ್ಲದ ಸಬೂಬು ಹೇಳಿ ಪಾಠ ತಪ್ಪಿಸಿಕೊಳ್ಳುವ ನಿರಂತರ ಯತ್ನ ದೈನಂದಿನ ಕಾರ್ಯ ಕ್ರಮ ರೂಢಿಸಿ ಕೊಂಡಾಗ ಹತಾಶರಾದರು ಆಕೆ.

ಇದೆಲ್ಲ ಸರಿ ಹೋಗತ್ತೆ ಅಂತ ಅವಳಮ್ಮ ಒಬ್ಬ ಶಿಸ್ತು ಸಿಪಾಯಿ ಸಂಗೀತದ ಮೇಷ್ಟ್ರನ್ನ ಗೊತ್ತು ಮಾಡಿದರು. ದಿನ ಬಿಟ್ಟು ದಿನ ಕ್ಲಾಸ್ಸು. ಮನೆಗೆ ಬಂದು ಮೇಷ್ಟ್ರುಗಳು ಹೇಳಿಕೊಡುತ್ತಿದ್ದ ಕಾಲ ಅದು. ಸೌಮ್ಯಳ ಫಜೀತಿಗೆ ಎಣೆಯುಂಟೆ, ಮೊದಲೇ ಮನೆ ತುಂಬ ತರಲೆ ಕಸಿನ್ಸ್‌ಗಳು  ಕಾಯತ ಇರತಾರೆ ಫಾರ್ ಎನಿ ಈವೆಂಟ್ ಟು ಹ್ಯಾಪ್ಪೆನ್. ಆದ್ರೂ ನೆವರ್ ಸೇ ಡೈ ಸ್ಪಿರಿಟ್ ನವಳು ನಮ್ಮ ಸೌಮ್ಯ.

ಸರಿ ಒಂದಾನೊಂದು ನಿಗದಿತ ದಿನ ಶುಭೇ ಮುಹೂರ್ತೇ ಆ ಮೇಷ್ಟ್ರ ಶುಭಾ ಗಮನ ಆಯಿತು. ಬಂದು ಕೂತವರೇ, ಹಾರ್ಮೋನಿಯಂನ ಮುಟ್ಟಿ ಕೈಯನ್ನು ಕಣ್ಣಿಗೊತ್ತುಕೊಂಡು ಅದನ್ನ "ವ್ಯಾಮ್. ..., ವ್ಯಾಮ್ ..." ಅನ್ನಿಸ್ತಿದ್ದಂತೆ  ಇವಳ ತಲೇ ಝೂಮ್ .. ಝೂಮ್ .. ಅಂತ ಕೆಲಸಮಾಡೇ ಬಿಡ್ತು. ಎಲ್ಲಿಲದ ಗೊಗ್ಗರ ಗಂಟಲಲ್ಲಿ ಶ್ರುತಿ ಮಿತಿಯೇನೂ  ಇಲ್ಲದೆ ಗಾರ್ಧಭಕ್ಕೆ ನಾಚಿಕೆಯಾಗುವಂಥಾ ಧ್ವನಿ ಹೊರದೂಡಿಬಿಟ್ಲು. ತಾಯಿ. ಮೇಷ್ಟ್ರು ಹಾಗೂ ಹೊರಗೆ ಕಾಯಿತಿದ್ದ ತರಲೆ ಗೆಲ್ಲರಿಗೂ ಒಮ್ಮೆಗೆ ಶಾಕು ! ಎಷ್ಟೋ ತಿಕ್ಕಲುಗಳನ್ನ ಕಂಡ ಮೇಷ್ಟ್ರು ಸ್ವಲ್ಪ ಸಮಯದನಂತರ ಚೇತರಿಸಿಕೊಂಡು,

'ನಾ ನು ಹೇಳಿದ್ದನ್ನ ನಿಧಾನವಾಗಿ ಕೇಳಿಸ್ಕೊಂಡು ಯೋಚಿಸಿ ಹಾಡಮ್ಮಾ', ಅಂದ್ರು.

ಇವಳು ಮೌನ ! ಕಸಿನ್ಸ್ ಇಣುಕಿ ನೋಡೋಕೆ ಶುರು.

ಮೇಷ್ಟ್ರು "...ಸಾ.. ಪಾ.. ಸಾ.." ಅಂದ್ರೆ, ಇವಳು "..ಗಾ...ರ್ದ...ಭ.." ಅನ್ನೋದೇ?

ಆ ಮೇಷ್ಟ್ರಿಗೆ ಸಖ್ಖತ್ತ್ ಕೋಪ ಬಂದು ದುರ್ದಾನ ತೊಗಂಡವರ ಹಾಗೆ ಹಿಂತಿರಿಗಿಯೂ ನೋಡದೆ ಹೋದವರ ಸುದ್ದಿ ಇದುವರೆಗೂ ಇಲ್ಲವಂತೆ. ಆಮೇಲೆ

ಇವಳಿಗೆ ಮನೇಲಿ ಪೂಜೆ, ಅಕ್ಷತೆ ಹಾಗೂ ಪ್ರಸಾದಗಳ ಮಳೆ ಧಾರಾಕಾರವಾಗಿ ಅನುಗ್ರಹಿಸಲಾಗಿ ಸಂಗೀತ ಕಲಿ ಯುವಿಕೆಗೆ ಶುಭಮ್.. ಶುಭಮ್.

ಇದೇನು ಮಳೆ ಕಥೆ ದಾರಿ ತಪ್ಪಿ ಸಂಗೀತ ಪುರಾಣಕ್ಕೆ ಹೋಯಿತಾ ಅಂತ ಅನ್ಕೋಬೇಡಿ. ಇಕೋ.. ಬಂದೇ ಬಿಟ್ಟೆ ಮಳೆ–ಹಾಡು ಜಾಯಿಂಟ್ ವೆಂಚರ್ಗೆ.

ಸೌಮ್ಯ ಮನೆ ಇಂದ 3 ಮೈಲಿ ದೂರದ ಸ್ಕೂಲೊಂದರಲ್ಲಿ ಯುಗಳಗಾಯಕಿರ ಗಾಯನ ಸ್ಪರ್ಧೆ ಏರ್ಪಡಿಸಲಾಗಿ ನಮ್ಮ ಹೀರೋಯಿನ್ ಅವಳ ಖಾಸ್ ದೋಸ್ತ್ ಇಬ್ಬರೂ ಹೋಗೋಣ ಎಂದು ತೀರ್ಮಾನಿಸಿದರು. ಅಲ್ಲಿನ ಷರತ್ತಿನ ಪ್ರಕಾರ ಯುಗಳ ಗೀತೆ ಆಗಬಹುದು ಅಥವಾನಾನ್ ಡ್ಯೂಎಟ್, ಒಟ್ಟಿಗೆ ಹಾಡುವಂಥಾ ಯಾವುದಾದರೂ ಹಾಡು ಆಗ ಬಹುದು. ಸ್ಪರ್ಧೆಯ ದಿನ ಮಧ್ಯಾಹ್ನ 3 ಘಂಟೆ, ಎಲ್ಲ ಸ್ಪರ್ಧಿಗಳೂ ಆತಂಕದಿಂದ ಎದುರು ಕುಳಿತಿದ್ದಾರೆ, ಮಳೆ ಮುತ್ತಿಕೊಂಡು ಕಾರ್ಮೋಡ ಕವಿದು ಕತ್ತಲು ಹೆಚ್ಚುತ್ತಿದ್ದ ಸಮಯ. ಸೌಮ್ಯ ಮತ್ತು ಅವಳ ಗೆಳತಿಯ ಹೆಸರು ಕೂಗಲಾಯಿತು. ಇಬ್ಬರೂ ವೇದಿಕೆಯ ಮೇಲೆ ನಿಂತು ಜೋರಾಗಿ "ಹುಯ್ಯೋ ಹುಯ್ಯೋ.. ಮಳೆ ರಾಯಾ.."




ಅಂತ ತಾರಸ್ಥಾಯಿಯಲ್ಲಿ ಹಾಡಲು ಶುರು ಮಾಡಿದ್ರೋ ಇಲ್ಲವೋ ಹಿಡ್ಕೊಳ್ತು ನೋಡಿ ಪ್ರಚಂಡ ಮಳೆ ! ಆಗಂತುಕರೆಲ್ಲ ಹುಚ್ಚೆದ್ದು ಕುಣಿದು ಎಲ್ಲರ ಕರತಾಡನ ಉತ್ತುಂಗಕ್ಕೆ ಏರಿ ಇವರಿಗೆ ಇನ್ನಷ್ಟು ಉತ್ಸಾಹ ಹೆಚ್ಚಾಗಿ ಮತ್ತಷ್ಟು ಚೆನ್ನಾಗಿ ಹಾಡಿ ಬಹುಮಾನ ಗಿಟ್ಟಿಸ್ಕೊಂಡು ಹೊರಟರು. ಇದೇನು ಅಮೃತ/ಜಲ ವರ್ಷಿಣೀ ನಪ್ಪ ಅಂದೊಕೊಳ್ತಾ ಇದ್ರು ಜನ.. ಇತ್ತ ಮನೆಕಡೆಗೆ ಹೊರಟ ನಮ್ಮ ಮಿತ್ರ ಜೋಡಿ ಗೆ ಮಳೆ ಜೋರು ಕಡಿಮೆಯಾದರೂ ಇನರ್ಶಿಯಾದಿಂದ ಬೀಳುತ್ತಿದ್ದ ಮಳೆನ ಲೆಕ್ಕಿಸದೆ ತಮ್ಮ ನೆನೆಪಿನ ಜಾಡಿನಲ್ಲಿ ನಡೆ ಯುತ್ತಸೌಮ್ಯ ಜಾರಿ ತನ್ನ ಬಹುಮಾನ ಕೈತಪ್ಪಿ ನೀರಿನಲ್ಲಿ ಬಿದ್ದಾಗ ಎತ್ತಲು ಹೋಗಿ ಕೊಚ್ಚೆಗುಂಡಿಯಲ್ಲಿ ಬಿದ್ದು ಹೊರಳಾಡುತ್ತಿದ್ದ ಸಮಯದಲ್ಲಿ ಅವಳ ಗೆಳತಿ ಕೂಗಿಕೊಂಡರೂ ಜನನಿಬಿಡ ಅಥವಾ ಕೊಡೆಯೊಳಗೆ ಹುದುಗಿರುವ ತಲೆ ಗಳಿಗೆ ಕೇಳಿಸದೆ ಕಡೆಗೆ ತಾನೇ ಕಷ್ಟ ಪಟ್ಟು ಹೊರಗೆಳೆದಳಾ ಸೌಮ್ಯಳನ್ನ ! ಕಡೆಗೂ ಸೌಮ್ಯಳ ಮನೆ ತಲುಪಿದಾಗ ಇವರಿಬ್ಬರ ಕಥೆ ನಂಬಿದವರ್ಯಾರು? ಎಲ್ಲ ಸುಳ್ಳು ಹೇಳ್ತಿದ್ದೀರಾ ಅಂತ ಸೌಮ್ಯಳಿಗೆ ಸಿಕ್ಕಿದ್ದು ಬಹುಮಾನದ ಜೊತೆಗೆ ಜಿ.ಯಸ್.ಟಿ, ಬೆನ್ನಿಗೆ ಎರಡು ಗುದ್ದುಗಳು.

■

# ಪಿಸಿಓ ಪುರಾಣ

**ಜಿ.ಆರ್. ವಿದ್ಯಾರಣ್ಯ**

ಪಬ್ಲಿಕ್ ಕಾಲ್ ಆಫೀಸ್ (ಪಿಸಿಓ) ಹೆಸರು ಕೇಳಿದ್ದೀರಾ? ಸುಮಾರು ಮೂವತ್ತು ವರ್ಷದ ಹಿಂದೆ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾದ, ಹಳದಿ–ಕಪ್ಪು–ಕೆಂಪು ಬಣ್ಣದ ನಾಮಫಲಕ ಹೊಂದಿದ, ಈ ರಸ್ತೆ ಬದಿಯ ಸಾರ್ವಜನಿಕ ಟೆಲಿಫೋನ್ ಕೇಂದ್ರಗಳು, ಸುಮಾರು ಎರಡು ದಶಕದವರೆಗೆ ರಾರಾಜಿಸಿ, ನಂತರ ಹೇಳ ಹೆಸರಿಲ್ಲದಂತೆ ಮಾಯವಾದವು. ಸರಕಾರಿ ದೂರವಾಣಿ ನಿಯಂತ್ರಣ ಕಾಯಿದೆ ಸಡಿಲಿಕೆಯಿಂದ ಇಂತಹ ಫಲಕಗಳು ಇದ್ದಕ್ಕಿದ್ದಂತೆ 1989ರಿಂದ ಕಾಣತೊಡಗಿದವು. ಈ ಪಿಸಿಓ ಕ್ರಾಂತಿಯ ಹರಿಕಾರ ಪದ್ಮಭೂಷಣ ಪುರಸ್ಕೃತ, ಗುಜರಾತ್ ಮೂಲದ ಟೆಲಿಕಾಂ ತಂತ್ರಜ್ಞ ಶ್ರೀ ಸತ್ಯನಾರಾಯಣ ಗಂಗಾರಾಮ್ ಪಿತ್ರೋಡ (ಅಥವಾ ಸ್ಯಾಮ್ ಪಿತ್ರೋಡ). ಇವರು ಪ್ರಾರಂಭಿಸಿದ ಟೆಲಿಕಾಂ ಕ್ಷೇತ್ರದ ಕ್ರಾಂತಿಯಿಂದಾಗಿ ದೇಶದ ಎಲ್ಲೆಡೆ ಟೆಲಿಫೋನ್ ಸಂಪರ್ಕ ಉತ್ತಮಗೊಳ್ಳತೊಡಗಿತು. ಸರಕಾರದ ಬಿಗಿಮುಷ್ಟಿಯಲ್ಲಿದ್ದ ಟೆಲಿಫೋನ್ ಕೇಂದ್ರಗಳು ಮೊದಲ ಮಳೆಯ ನಾಯಿಕೊಡೆಗಳಂತೆ ದೇಶದ ರಸ್ತೆಗಳಲ್ಲಿ ಪ್ರಾರಂಭವಾದವು.

1989ರಲ್ಲಿ ನನ್ನ ಸಹೋದರ ರಮೇಶ ಪ್ರಾರಂಭಿಸಿದ ಮುಂಬಯಿಯ ಪ್ರಪ್ರಥಮ ಫೋನ್ ಬೂತಿಗೆ (ಪಿಸಿಓ) ಹೊಸತರಲ್ಲಿ ಬರುತ್ತಿದ್ದ ಬಹುತೇಕ ಅಮಾಯಕ ಗ್ರಾಹಕರಿಗೆ ಫೋನಿನ ಹ್ಯಾಂಡ್ ಸೆಟ್ ಸರಿಯಾಗಿ ಹಿಡಿದುಕೊಳ್ಳಲು ಅಥವಾ ನಂಬರ್ ಡಯಲ್ ಮಾಡಲೂ ಬರುತ್ತಿರಲಿಲ್ಲ. ಅಂತಹ ಗ್ರಾಹಕರಿಗೆ ಬೂತ್ ಮಾಲೀಕನೇ ಕರೆ ಮಾಡಬೇಕಾದ ಸಂಖ್ಯೆಯನ್ನು ಒಂದು ಹಾಳೆಯಲ್ಲಿ ಬರೆದುಕೊಂಡು, ಡಯಲ್ ಮಾಡಿ, ಸಂಪರ್ಕ ಸಿಕ್ಕ ನಂತರ ಮಾತನಾಡಲು ರಿಸೀವರ್ ಕೈಗೆ ಕೊಡಬೇಕಾಗುತ್ತಿತ್ತು. ಬೂತಿನಲ್ಲಿ ಅವರಿಗೆ ಕೂರಲು, ಏನಾದರೂ ಬರೆದುಕೊಳ್ಳಲು ಚಿಕ್ಕ ಡೆಸ್ಕ್, ಕಾಗದ, ಪೆನ್ ಹಾಗೂ ಕ್ಯಾಬಿನ್ ಫ್ಯಾನ್ ವ್ಯವಸ್ಥೆ ಇತ್ತು. ಕ್ಯಾಬಿನ್ನಿಗೆ ಬಾಗಿಲು ಅಳವಡಿಸಲಾಗಿದ್ದು ಅದರಲ್ಲಿ ಮಾತನಾಡಲು ಬೇಕಾದ ಏಕಾಂತತೆಯೂ ಸಿಗುತ್ತಿತ್ತು. ಇಂತಹ ಸೌಲಭ್ಯ ಯಾವುದೇ ಸರಕಾರಿ ಪಿಸಿಓಗಳಲ್ಲಿ ಅಂದು ಲಭ್ಯವಿರಲಿಲ್ಲ. ಗ್ರಾಹಕರು ಮುಂಗಡವಾಗಿ ಹಣ ನೀಡದೆ, ಕರೆ ಮುಗಿದ ಬಳಿಕ ಹಣ ಪಾವತಿಸಬಹುದಾಗಿತ್ತು. ಇಂತಹ ಪಿಸಿಓಗಳಲ್ಲಿ ಅನೇಕ ಸ್ವಾರಸ್ಯಕರ ಘಟನೆಗಳು ನಡೆಯುತ್ತಿದ್ದವು, ಅವುಗಳಲ್ಲಿ ಕಂಡ ಕೆಲವು ರೋಚಕ ಘಟನೆಗಳನ್ನು ನಿಮ್ಮೊಂದಿಗೆ ಇಲ್ಲಿ ಹಂಚಿಕೊಂಡಿದ್ದೇನೆ.

80ರ ದಶಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದ ಗ್ರಾಹಕರು ಬಡ ಕುಟುಂಬದ ಅಶಿಕ್ಷಿತ ಮಹಿಳೆಯರಾಗಿರುತ್ತಿದ್ದರು. ಅವರ ಮಗನೋ, ಪತಿಯೋ ಅರಬ್ ಕೊಲ್ಲಿಯಲ್ಲಿ ಕೆಲಸಕ್ಕೆ ಹೋಗಿ, ವರ್ಷ ಕಳೆದರೂ ಮನೆಗೆ ಬಂದಿರುತ್ತಿರಲಿಲ್ಲ. ಅದಕ್ಕೋಸ್ಕರ ಇವರು ಅವರೊಂದಿಗೆ ಮಾತನಾಡಲು ಪಿಸಿಓ ಹುಡುಕಿಕೊಂಡು ಬಂದಿರುತ್ತಿದ್ದರು. ಅವರ ಬಳಿ ದೂರವಾಣಿ ಸಂಖ್ಯೆ ಇದ್ದರೂ ಅವರ ಮಗ/ಪತಿ ಯಾವ ದೇಶದಲ್ಲಿದ್ದಾರೆ ಎನ್ನುವುದೂ ಅವರಿಗೆ ಗೊತ್ತಿರುತ್ತಿರಲಿಲ್ಲ. ಅರಬ್ ಕೊಲ್ಲಿಯಲಿ ಕನಿಷ್ಠ ಎಂಟು ದೇಶಗಳಿವೆ ಎಂಬುದೂ ಅವರಿಗೆ ತಿಳಿದಿರುತ್ತಿರಲಿಲ್ಲ; ಎಲ್ಲವನ್ನೂ ದುಬೈ ಎಂದು ಹೇಳುತ್ತಿದ್ದರು. ಈ ದೇಶಗಳಿಗೆ ಕರೆ ಮಾಡಲು ನಿಮಿಷಕ್ಕೆ ಐವತ್ತು ರುಪಾಯಿ ವೆಚ್ಚ ತಗುಲುತ್ತಿತ್ತು. ಅವರಿಗೆ ಬೇಕಾದ ಸಂಖ್ಯೆಗೆ ನಾವೇ ಸಂಪರ್ಕ ಸಾಧಿಸಿ ಇವರ ಕೈಗೆ ರಿಸೀವರ್ ಕೊಟ್ಟರೆ ಅಲ್ಲಿಂದ ಕರೆ ಸ್ವೀಕರಿಸಿದ ವ್ಯಕ್ತಿಯೊಂದಿಗೆ ಮಾತನಾಡಿ, ಯಾರ ಜೊತೆ ಮಾತನಾಡಬೇಕು ಎಂದು ಹೇಳಲೂ ಬರುತ್ತಿರಲಿಲ್ಲ. ಮತ್ತೆ ಬೂತ್ ಮಾಲೀಕ ಪ್ರವೇಶ ಮಾಡಿ, ಟೆಲಿಫೋನ್ ಆಪರೇಟರ್ ಕೆಲಸ ಮಾಡಿ, ಸರಿಯಾದ ವ್ಯಕ್ತಿಯನ್ನು ಲೈನಿಗೆ ಬರುವಂತೆ

ಮಾಡಬೇಕಾಗುತ್ತಿತ್ತು. ಇಷ್ಟರಲ್ಲಿ ಫೋನ್ ಬಿಲ್ ರೂ. ನೂರು ದಾಟಿರುತ್ತಿತ್ತು. ಸರಿಯಾದ ವ್ಯಕ್ತಿ ಲೈನಿಗೆ ಬಂದು ಅವರ ಧ್ವನಿ ಕೇಳಿದೊಡನೆಯೇ ಇವರಿಗೆ ದುಃಖ ಉಮ್ಮಳಿಸಿ ಅಳಲು ಪ್ರಾರಂಭಿಸುತ್ತಿದ್ದರು. ಕೆಲವೊಮ್ಮೆ ಆ ಕಡೆಯವರೂ ಇವರಂತೆ ಭಾವುಕರಾಗುತ್ತಿದ್ದರು. ಇಬ್ಬರೂ ಸಮಾಧಾನ ಮಾಡಿಕೊಳ್ಳುವ ಹೊತ್ತಿಗೆ ಫೋನ್ ಬಿಲ್ ರೂ. ಇನ್ನೂರು ತಲುಪಿರುತ್ತಿತ್ತು. ಕೆಲವೊಮ್ಮೆ ಮಾತನಾಡಲು ಆಗದೇ ರಿಸೀವರ್ ಸ್ವಸ್ಥಾನಕ್ಕೆ ಇಟ್ಟುಬಿಡುತ್ತಿದ್ದರು. ಏನೂ ಮಾತಾಡದೇ ಬಿಲ್ ಮೊತ್ತ ನೂರಿನ್ನೂರು ಕೊಡಲು ನಂತರ ತಗಾದೆ ಮಾಡುತ್ತಿದ್ದರು. ಅಂಚೆ ಕಚೇರಿಯವರು ಮುಂಗಡವಿಲ್ಲದೇ ಏಕೆ ಕಾಲ್ ಬುಕ್ ಮಾಡುತ್ತಿರಲಿಲ್ಲ ಎಂಬುದು ಆಗ ತಿಳಿಯಿತು. ಅತ್ತು–ಕರೆದು ಮಾಡದೇ ಮಾತನಾಡಿದಾಗ ಅವರಿಗೆ ಎಷ್ಟು ಸಮಯ ಮಾತನಾಡಿದೆ ಎಂಬ ಪರಿಕಲ್ಪನೆ ಇರುತ್ತಿರಲಿಲ್ಲ. ಕೊನೆಗೆ ಐನೂರು ರೂ. ಬಿಲ್ ಬಂದರೆ "ನಾನು ಹತ್ತು ನಿಮಿಷ ಮಾತನಾಡಲೇ ಇಲ್ಲ, ಹೆಚ್ಚೆಂದರೆ ಎರಡು–ಮೂರು ನಿಮಿಷ ಮಾತನಾಡಿರಬಹುದು" ಎಂದು ರಾಗ ತೆಗೆಯುತ್ತಿದ್ದರು. "ನಿಮ್ಮ ಗಡಿಯಾರ ಸರಿಯಿಲ್ಲ, ನೀವೆಲ್ಲರೂ ಜನರನ್ನು ಲೂಟಿ ಮಾಡುತ್ತೀರಿ" ಎಂದು ಬಾಯಿಗೆ ಬಂದಂತೆ ಮಾತನಾಡುತ್ತಿದ್ದರು. ಜನರ ಸೇವೆಗಿಂತ ಜನಾರ್ದನನ ಸೇವೆ ಎಷ್ಟೋ ಸುಲಭ ಎಂದು ನನ್ನ ತಮ್ಮ ಹೇಳುತ್ತಿದ್ದ.




ಒಮ್ಮೆ ಓರ್ವ ಸಭ್ಯನಂತೆ ಕಾಣುವ ವ್ಯಕ್ತಿ ಚಿಕ್ಕ ಮಗುವನ್ನು ಎತ್ತಿಕೊಂಡು ಬಂದ. ಕರೆ ಮಾಡಿದ ನಂತರ ಜೇಬು ತಡಕಾಡಿಕೊಂಡು ಪರ್ಸ್ ಮನೆಯಲ್ಲೇ ಮರೆತು ಬಂದಿದ್ದೇನೆ, ನಂತರ ಬಂದು ಹಣ ಕೊಡುವುದಾಗಿ ತಿಳಿಸಿದ. ಮಾಲೀಕ ಒಪ್ಪದ ಕಾರಣ ಕೊನೆಗೆ ಮಗುವನ್ನು ಅಲ್ಲೇ ಬಿಟ್ಟು ಮನೆಗೆ ಹೋಗಿ ಕೂಡಲೇ ಬರುವುದಾಗಿ ಹೇಳಿ ಹೋದ. ಅರ್ಧ ಗಂಟೆಯಾದರೂ ಅವನ ಸುಳಿವಿಲ್ಲ. ಮಗು ಸದ್ದಿಲ್ಲದೇ ಮಲಗಿತ್ತು. ಅದು ಎದ್ದು ರಂಪಾಟ ಮಾಡಿದರೆ ಅದನ್ನು ಹೇಗೆ ಶಾಂತಗೊಳಿಸುವುದು ಎಂಬ ಚಿಂತೆ ಒಂದೆಡೆ ಆದರೆ ನಿಜವಾಗಿಯೂ ಮಗು ಅವನದೇ ಅಥವಾ ಏನಾದರೂ ಪೋಲಿಸ್ ಕೇಸ್ ಆಗಿದ್ದರೆ ಮುಂದೇನು ಎಂಬ ಚಿಂತೆ ಕಾಡತೊಡಗಿತು. ಭೂಪ ಒಂದು ಗಂಟೆಯ ನಂತರ ಬಂದು ಹಣ ಕೊಟ್ಟು ಮಗುವನ್ನು ಕರೆದುಕೊಂಡು ಹೋದ. ಆದರೆ ಆ ಒಂದು ಗಂಟೆಯಲ್ಲಿ ಆತಂಕದಿಂದ ಬೂತ್ ಮಾಲೀಕನ ಆಯಸ್ಸು ಒಂದೆರಡು ದಿನವಾದರೂ ಕಡಿಮೆಯಾಗಿರಬಹುದು.

ಇನ್ನೊಮ್ಮೆ ಇಬ್ಬರು ಬುರ್ಖಾಧಾರಿ ಹೆಂಗಸರು ಫೋನ್ ಮಾಡಿ ಹಣ ನೀಡದೇ ಅಂಗಡಿಯಿದ ರಾಜಾರೋಷವಾಗಿ ಹೊರಗೆ ಹೋಗತೊಡಗಿದರು. ಹೆಂಗಸರನ್ನು ಮೈಮುಟ್ಟಿ ಹಿಡಿಯಲು ಸಾಧ್ಯವಿರಲಿಲ್ಲ. ಹಿಂದಿನಿಂದ ಎಷ್ಟೇ ಕೂಗಿದರೂ ಏನೂ ಕೇಳದವರಂತೆ

ಸರಸರನೆ ಹೆಜ್ಜೆ ಹಾಕುತ್ತಾ ಹೋದರು. ಅಡಿಯಿಂದ ಮುಡಿಯವರೆಗೆ ಕಪ್ಪು ಬುರ್ಖಾ ಇದ್ದುದರಿಂದ ಅವರು ಇನ್ನೊಮ್ಮೆ ಬಂದರೂ ಗುರುತು ಹಿಡಿಯಲು ಸಾಧ್ಯವಿರಲಿಲ್ಲ. ಕೊನೆಗೂ ಅವರು ಯಾರೆಂದು ತಿಳಿಯಲಿಲ್ಲ.

ಇನ್ನೊಮ್ಮೆ ಓರ್ವ ದಂಪತಿ ಸಣ್ಣ ಮಗುವಿನೊಂದಿಗೆ ಯಾವುದೋ ದೂರದ ಊರಿಗೆ ಕರೆ ಮಾಡಲು ರಾತ್ರಿ 10 ಗಂಟೆಯ ನಂತರ ಬಂದರು. ಆ ಊರಿಗೆ ಸಂಪರ್ಕ ಸಿಗುತ್ತಿಲ್ಲ, ಹಲವೆಡೆ ಪ್ರಯತ್ನಿಸಿದ್ದೇವೆ ಎಂತಲೂ ತಿಳಿಸಿದರು. ಸಂಪರ್ಕ ಕಲ್ಪಿಸಿ "ಫೋನ್ ರಿಂಗ್ ಅಗುತ್ತಿದೆ, ರಿಸೀವರ್ ತೆಗೆದುಕೊಂಡು ಮಾತನಾಡಿ" ಎಂದು ಮಾಲೀಕ ಹೇಳಿದ. ಆ ಮಹಿಳೆ ಮಗುವನ್ನು ಪತಿಯ ಕೈಗಿತ್ತು ಮನೆಯವರೊಂದಿಗೆ ಮಾತನಾಡುವ ಆತುರದಲ್ಲಿದ್ದಳು. ಪತಿರಾಯ ಕನೆಕ್ಷನ್ ಸಿಕ್ಕ ಸಂತೋಷದಲ್ಲಿ ಮಗುವನ್ನು ಸರಿಯಾಗಿ ಹಿಡಿದುಕೊಳ್ಳಲಿಲ್ಲ. ಮಗು ಧೊಪ್ಪನೆ ಕೆಳಗೆ ಬಿದ್ದು ಕಿರುಚಲು ಪ್ರಾರಂಭಿಸಿತು. ಇಬ್ಬರಿಗೂ 'ನೀನು–ನಿನ್ನ ತಪ್ಪು' ಎಂದು ವಾಗ್ವಾದ ಶುರುವಾಯಿತು. ಸಿಕ್ಕಿದ್ದ ಲೈನ್ ಕಟ್ ಆಯಿತು. ಎಷ್ಟು ಪ್ರಯತ್ನಿಸಿದರೂ ಇನ್ನೊಮ್ಮೆ ಸಂಪರ್ಕ ಸಿಗಲಿಲ್ಲ. ಇದಕ್ಕೆ ಗಂಡ–ಹೆಂಡರ ಜಗಳದಲ್ಲಿ ಕೂಸು ಬಡವಾಯ್ತು ಅಂತ ಹೇಳುವುದು.

ಇನ್ನೊಂದು ಮಧ್ಯಾಹ್ನ ಓರ್ವ ಹೆಂಗಸು ಲೋಕಲ್ ಕಾಲ್ ಮಾಡಲು ಬಂದಳು. ಅಂಗಡಿಯ ಹೊರಗೆ ಇರುವ ಫೋನಿಗೆ 1 ರೂ. ನಾಣ್ಯ ಹಾಕಿ ಕರೆ ಮಾಡಲು ಮಾಲೀಕ ತಿಳಿಸಿದ. ಆಕೆ ಬಳಿ ನಾಣ್ಯ ಇರಲಿಲ್ಲ, ಅದನ್ನು ಅವನಿಂದಲೇ ಪಡೆದಳು. ಆಕೆ ಕರೆ ಮಾಡಿ ಸುಮಾರು ಅರ್ಧ ತಾಸಾದರೂ ಮಾತನಾಡಿರಬೇಕು. ಕರೆ ಮುಗಿಸಿ ಹೊರಟು ಸ್ವಲ್ಪ ದೂರದಿಂದ ಹಿಂತಿರುಗಿ ಬಂದಳು. "ಅರೆ, ನಾನು ನನ್ನ ಚಪ್ಪಲಿ ಇಲ್ಲೇ ಬಿಟ್ಟಿದ್ದೆ, ಈಗ ಒಂದು ಕಾಣುತ್ತಿಲ್ಲ" ಎಂದು ದೂರಿದಳು. "ಅಂಗಡಿಯ ಹೊರಗೆ ನೀವು ಬಿಟ್ಟ ವಸ್ತುಗಳಿಗೆ ನಾವು ಜವಾಬ್ದಾರರಲ್ಲ" ಎಂದು ನಯವಾಗಿ ತಿಳಿಸಿದ. ಆದರೂ ಆಕೆ ಜೋರಾಗಿ ಧ್ವನಿ ಎತ್ತಿ ಕೂಗಾಡಲು ಪ್ರಾರಂಭಿಸಿದಳು, ಅಂಗಡಿಯ ಮುಂದೆ ಜನ ತಮಾಶೆ ನೋಡಲು ಸೇರತೊಡಗಿದರು. ಅಷ್ಟರಲ್ಲಿ ಒಬ್ಬ ಹುಡುಗ ಒಂದು ನಾಯಿ ಚಪ್ಪಲಿ ಕಚ್ಚಿಕೊಂಡು ಹೋಗಿದ್ದನ್ನು ನೋಡಿದ್ದನಂತೆ. ಹಾಗಾಗಿ ಆ ಮಹಾರಾಯತಿ ನಾಯಿಯನ್ನು ಹುಡುಕಿಕೊಂಡು ಹೋದಳು. ಮ್ಯಾಟಿನಿ ಶೋ ಬೇಗ ಸಮಾಪ್ತಿಯಾಯಿತು.

ಇನ್ನೋರ್ವ ಮಹಾಶಯ ತಮಿಳುನಾಡಿಗೆ ಕರೆ ಮಾಡಬೇಕೆಂದು ಬಂದರು. ಅವರಿಗೆ ತಾವು ಅಂದು 'ರೈಲಿಗೆ ಹತ್ತಿಸಿ ಕಳುಹಿಸಿರುವ ವ್ಯಕ್ತಿ ಮಾರನೆಯ ದಿನ ಬೆಳಿಗ್ಗೆ ಎಂಟು ಗಂಟೆಗೆ ಚೆನ್ನೈ ಎಕ್ಸ್‌ಪ್ರೆಸ್ ರೈಲಿನ ಕಂಪಾರ್ಟ್‌ಮೆಂಟ್ ಎಸ್–8ರಲ್ಲಿ ಬರುತ್ತಿದ್ದಾರೆ' ಎಂದಷ್ಟೇ ತಿಳಿಸಬೇಕಿತ್ತು. ಆತ ಹಲವಾರು ಸಲ ಹೇಳಿದ್ದನ್ನೇ ಹೇಳಿದರೂ, ಎಷ್ಟು ಕಿರುಚಿದರೂ, ಆ ಬದಿಯವರಿಗೆ ಇವರ ಸಂದೇಶ ತಿಳಿಯಲಿಲ್ಲ. ಆ ಕಡೆಯ ವ್ಯಕ್ತಿಗೆ ಕಿವಿ ಮಂದವೋ ಅಥವಾ ಲೈನ್ ಸರಿಯಾಗಿರಲಿಲ್ಲವೋ ಗೊತ್ತಿಲ್ಲ. ಕೊನೆಗೆ ಬಿಲ್ ಮೊತ್ತ ನೂರು ರೂ. ಆದ ನಂತರ ಈತ ಸಿಟ್ಟಿನಿಂದ ಫೋನ್ ಕುಕ್ಕಿ, ಹಣ ಕೊಟ್ಟು, ತಮ್ಮ ತಲೆ ಚಚ್ಚಿಕೊಳ್ಳುತ್ತಾ ಹೋದರು. ಒಂದಂತನ್ನೂ ಮೆಚ್ಚಬೇಕು. ಭಾರತದಲ್ಲಿ ಅಂದು ತಯಾರಾಗುತ್ತಿದ್ದ ಸರಕಾರಿ ಮನ್ನಣೆ ಪಡೆದ ಫೋನಿನ ಹ್ಯಾಂಡ್‌ಸೆಟ್ ಯಾರು ಕುಕ್ಕಿದರೂ ಫೋನ್ ಕೆಟ್ಟುಹೋಗುತ್ತಿರಲಿಲ್ಲ. ಇಂತಹ ನಾನ್–ಸ್ಟಾಪ್ ನಾನ್‌ಸೆನ್ಸ್ ಪಿಸಿಓಗಳಲ್ಲಿ ದಿನ ನಿತ್ಯ ನಡೆಯುತ್ತಿದ್ದವು.

ಹೊಸ ತಂತ್ರಜ್ಞಾನದಿಂದ ಅಸ್ತಿತ್ವಕ್ಕೆ ಬಂದ ಈ ಪಿಸಿಓಗಳು ಅದೇ ತಂತ್ರಜಾನದ ಮುಂದುವರಿಕೆಯಿಂದಾಗಿ, ಎಲ್ಲರ ಕೈಗೆ ಮೊಬೈಲ್ ಫೋನ್ ಬಂದಮೇಲೆ, ಮಾಯವಾದವು.

■